ಸಿ.ಕೆ. ಪರಶುರಾಮಯ್ಯ ಅವರ ಸಮಗ್ರ ಸಾಹಿತ್ಯ

(೨೦೧೬-೧೭ನೆಯ ಸಾಲಿನ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕರು

ಮಹಂತೇಶ ಜಿ.ಆರ್.

ನೋಂದಣಿ ಸಂಖ್ಯೆ : ೧೬೦೧೦೫೦೫೦೦೧೭

ಮಾರ್ಗದರ್ಶಕರು

ಡಾ. ಎಫ್.ಟಿ. ಹಳ್ಳಿಕೇರಿ

ಪ್ರಾಧ್ಯಾಪಕರು

ಹಸ್ತಪ್ರತಿಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಭಾಷಾ ನಿಕಾಯ

ಹಸ್ತಪ್ರತಿಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

೨೦೧೬-೧೭

ಸಿ.ಕೆ. ಪರಶುರಾಮಯ್ಯ ಅವರ ಸಮಗ್ರ ಸಾಹಿತ್ಯ

(೨೦೧೬-೧೭ನೆಯ ಸಾಲಿನ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕರು

ಮಹಂತೇಶ ಜಿ.ಆರ್.

ನೋಂದಣಿ ಸಂಖ್ಯೆ : ೧೬೦೧೦೫೦೩೦೦೧೭

ಮಾರ್ಗದರ್ಶಕರು

ಡಾ. ಎಫ್.ಟಿ. ಹಳ್ಳಿಕೇರಿ

ಪ್ರಾಧ್ಯಾಪಕರು
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಭಾಷಾ ನಿಕಾಯ
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬
೨೦೧೬-೧೭

ಮಾರ್ಗದರ್ಶಕರ ಒಪ್ಪಿಗೆ ಪತ್ರ

'ಸಿ.ಕೆ ಪರಶುರಾಮಯ್ಯ ಅವರ ಸಮಗ್ರ ಸಾಹಿತ್ಯ' ಎಂಬ ಶೀರ್ಷಿಕೆಯ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಯ ಆಂಶಿಕ ಅವಶ್ಯಕತೆಗಾಗಿ **ಮಹಂತೇಶ ಜಿ.ಆರ್**. ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದು, ಪ್ರಸ್ತುತ ನಿಬಂಧವಾಗಲೀ ಅಥವಾ ಯಾವುದೇ ಭಾಗವನ್ನಾಗಲೀ ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

(ಮಾರ್ಗದರ್ಶಕರು)

ಡಾ. ಎಫ್.ಟಿ. ಹಳ್ಳಿಕೇರಿ

ಪ್ರಾಧ್ಯಾಪಕರು

ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ದಿನಾಂಕ :

ಸ್ಥಳ : ವಿದ್ಯಾರಣ್ಯ

ಪ್ರಮಾಣ ಪತ್ರ

'ಸಿ.ಕೆ ಪರಶುರಾಮಯ್ಯ ಅವರ ಸಮಗ್ರ ಸಾಹಿತ್ಯ' ಎಂಬ ಶೀರ್ಷಿಕೆಯ ನಿಬಂಧವನ್ನು ೨೦೧೬–೧೭ನೆಯ ಶೈಕ್ಷಣಿಕ ಸಾಲಿನಲ್ಲಿ ವಿಭಾಗದ ಪ್ರಾಧ್ಯಾಪಕರಾದ **ಡಾ. ಎಫ್.ಟಿ. ಹಳ್ಳಿಕೇರಿ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದು, ಎಂ.ಫಿಲ್. ಪದವಿಯ ಆಂಶಿಕ ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದೇನೆ. ಈ ನಿಬಂಧವನ್ನು ಪೂರ್ಣವಾಗಿಯಾಗಲಿ, ಆಂಶಿಕವಾಗಿ ಆಗಲಿ ಯಾವುದೇ ಪದವಿಗಾಗಿ ಈ ಮೊದಲು ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : ೧೦-೦೮-೨೦೧೭

ಸ್ಥಳ : ವಿದ್ಯಾರಣ್ಯ.

(ಮಹಂತೇಶ ಜಿ.ಆರ್.)

ಎಂ.ಫಿಲ್. ವಿದ್ಯಾರ್ಥಿ

ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಸಿ.ಕೆ. ಪರಶುರಾಮಯ್ಯ ಅವರ ಸಮಗ್ರ ಸಾಹಿತ್ಯ

ಪರಿವಿಡಿ

ಅಧ್ಯಾಯ : ಒಂದು

೧.೧. ಪೀಠಿಕೆ
೧.೨. ಅಧ್ಯಯನದ ಉದ್ದೇಶ
೧.೩. ಅಧ್ಯಯನದ ವ್ಯಾಪ್ತಿ
೧.೪. ಅಧ್ಯಯನದ ಸ್ವರೂಪ

ಅಧ್ಯಾಯ – ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ

೧.೧. ಪ್ರಸ್ತಾವನೆ :

ಭಾರತೀಯ ಸಾಹಿತ್ಯ ಪರಂಪರೆಯಲ್ಲಿ ಕನ್ನಡ ಸಾಹಿತ್ಯವು ವಿಶಿಷ್ಟವಾದ ಸ್ಥಾನವನ್ನು ಪಡೆದಿದೆ. ಈ ವಿಶಿಷ್ಟವಾದ ಸಾಹಿತ್ಯವು ಸಂಪದ್ಭರಿತವಾಗಿದ್ದು, ತನ್ನ ಶ್ರೇಷ್ಠತೆ ಮತ್ತು ಪ್ರಾಚೀನತೆಯಿಂದ ಶಾಸ್ತ್ರೀಯ ಸ್ಥಾನಮಾನ ಪಡೆದುಕೊಂಡಿದೆ.

ವಸಾಹತುಶಾಹಿ ಆಗಮನ ಭಾರತೀಯ ಸಮಾಜದಲ್ಲಿ ಹಲವಾರು ಸಂಚಲನಗಳನ್ನು ಸೃಷ್ಟಿಸಿತು. ಇದರ ಪರಿಣಾಮ ಸಮಾಜದ ಮೇಲೆ ಬೀರಿದೆ. ವಸಾಹತುಶಾಹಿ ನೀಡಿದ ಇಂಗ್ಲೀಷ್ ಶಿಕ್ಷಣದಿಂದ ಆಧುನಿಕ ವಿದ್ಯಾವಂತ ವರ್ಗವೊಂದು ಸೃಷ್ಟಿಯಾಯಿತು. ಈ ಶಿಕ್ಷಿತ ವರ್ಗದ ಆಲೋಚನೆಗಳು, ಅಭಿರುಚಿಗಳಲ್ಲಾದ ಬದಲಾವಣೆಗಳ ಪರಿಣಾಮ ನಮ್ಮ ಭಾಷೆ, ಸಾಹಿತ್ಯದ ಮೇಲೂ ಆಗಿದೆ. ಪಾಶ್ಚಿಮಾತ್ಯ ಸಾಹಿತ್ಯ ಪ್ರೇರಣೆಯಿಂದ ನಮ್ಮಲ್ಲಿ ಕಾವ್ಯ, ಕಥೆ, ಕಾದಂಬರಿ, ನಾಟಕ, ಪ್ರಬಂಧ, ಜೀವನ ಚರಿತ್ರೆ, ವಿಮರ್ಶೆ, ಆತ್ಮಕಥನದಂತಹ ಹಲವು ಪ್ರಕಾರಗಳು ಹುಲುಸಾಗಿ ಬೆಳೆದುಬಂದವು. ಈ ಗ್ರಂಥ ಸಾಹಿತ್ಯ ರಚನೆಯಲ್ಲಿ ಹಲವಾರು ಮಹನೀಯರು ತೊಡಗಿಸಿಕೊಂಡರು. ಅವರಲ್ಲಿ ಕುವೆಂಪು, ದ.ರಾ. ಬೇಂದ್ರೆ, ವಿ.ಕೃ. ಗೋಕಾಕ, ಡಿ.ವಿ.ಜಿ., ಮಾಸ್ತಿ, ಪು.ತಿ. ನರಸಿಂಹಾಚಾರ್ಯ, ವಿ. ಸೀತಾರಾಮಯ್ಯ, ಜಿ.ಎಸ್. ಶಿವರುದ್ರಪ್ಪ ಇನ್ನು ಮೊದಲಾದ ಮಹನೀಯರು ತಮ್ಮದೇ ಆದ ಕೃಷಿಗೈದರು. ಇವರಂತೆ ಕನ್ನಡ ಸಾಹಿತ್ಯಕ್ಕೆ ತಮ್ಮದೇ ಆದ ಕೊಡುಗೆ ನೀಡಿದ ಡಿ.ಎಲ್. ನರಸಿಂಹಾಚಾರ್, ತೀ.ನಂ.ಶ್ರೀಕಂಠಯ್ಯ, ಸಿ.ಡಿ. ನರಸಿಂಹಯ್ಯ, ಪ್ರೊ. ಕೆ. ವೆಂಕಟರಾಮಪ್ಪ, ಪ್ರೊ. ಎಸ್.ವಿ. ಪರಮೇಶ್ವರ ಭಟ್ಟ, ಎಸ್. ನೀಲಕಂಠಶಾಸ್ತ್ರಿ, ವೆಂಕಟಗಿರಿ ಗೌಡರಂತಹ ಘಟಾನುಘಟಿ ವಿದ್ವಾಂಸರುಗಳಿದ್ದ ಪರಿಸರದಲ್ಲಿ ವಿದ್ಯೆಕಲಿತವರಲ್ಲಿ ಸಿ.ಕೆ. ಪರಶುರಾಮಯ್ಯನವರು ಒಬ್ಬರು.

ಕರ್ನಾಟಕ ಸರ್ಕಾರದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಲ್ಲಿ ಮೂರುವರೆ ದಶಕಗಳ ಕಾಲ ವಿವಿಧ ಹಂತಗಳಲ್ಲಿ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡಿದ ಸಿ.ಕೆ.ಪಿ. ಅವರು ಒಬ್ಬ ಪ್ರಾಮಾಣಿಕ ಹಾಗೂ ಪ್ರಬುದ್ಧ ಬರಹಗಾರರೆಂದು ಗುರುತಿಸಿಕೊಂಡಿದ್ದಾರೆ, ೧೯೫೦ರ

ದಶಕದಲ್ಲಿ ಇಡೀ ರಾಜ್ಯಕ್ಕೆ ಏಕೈಕ ವಿಶ್ವವಿದ್ಯಾಲಯ ಎಂದರೆ ಮೈಸೂರು ವಿಶ್ವವಿದ್ಯಾಲಯ ಅದರ ಅಧೀನದಲ್ಲಿದ್ದ ಮೈಸೂರು ಮಹಾರಾಜ ಕಾಲೇಜು ವಿದ್ವನ್ಮಣಿಗಳ ಆಗರವಾಗಿತ್ತು. ಡಿ.ಎಲ್.ಎನ್., ಬಿ.ಎಂ.ಶ್ರೀ. ಇವರ ಮಾರ್ಗದರ್ಶನದಲ್ಲಿ ಸಿ.ಕೆ.ಪಿ. ಅವರು ಬೆಳೆದು ಒಬ್ಬ ದೊಡ್ಡ ವಿದ್ವಾಂಸರಾಗಿ ರೂಪುಗೊಂಡರು.

ಕರ್ನಾಟಕ ಸರ್ಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆಯಲ್ಲಿ ಉಪಸಂಪಾದಕರಾಗಿ ಹಾವನೂರು ಹಿಂದುಳಿದ ವರ್ಗಗಳ ಆಯೋಗದ ಹೊತ್ತಿಗೆಯ ಭಾಷಾಂತರ ಸಮೀಕ್ಷೆಯ ಉಪ ಸಮಿತಿಯ ಸದಸ್ಯರಾಗಿ, ರಾಜ್ಯ ಆರೋಗ್ಯ ಇಲಾಖೆಯ ಭಾರತ ಜನಸಂಖ್ಯಾ ಯೋಜನೆಯ ಉಪನಿರ್ದೇಶಕರಾಗಿ ಈ ಕಾರ್ಯಗಳ ಜೊತೆಜೊತೆಗೆ ಕನ್ನಡ ಸಾಹಿತ್ಯ ಲೋಕಕ್ಕೆ ಸಿ.ಕೆ.ಪಿ. ಅವರು ನೀಡಿದ ಕೊಡುಗೆ ಮಹತ್ತರವಾಗಿದೆ.

ಕಾವ್ಯ ಗ್ರಂಥಸಂಪಾದನೆ, ಸಂಶೋಧನೆ, ಗದ್ಯ ಸಾಹಿತ್ಯ, ಅಭಿವೃದ್ಧಿ ಸಾಹಿತ್ಯದಲ್ಲಿ ಕೃತಿಗಳನ್ನು ರಚನೆ ಮಾಡಿ ಕನ್ನಡ ಸಾಹಿತ್ಯಕ್ಕೆ ತಮ್ಮದೇ ಆದ ಅಮೂಲ್ಯ ಕೊಡುಗೆ ನೀಡಿದ್ದಾರೆ.

೧.೨. ಅಧ್ಯಯನದ ಉದ್ದೇಶ :

ಸಿ.ಕೆ.ಪಿ. ಅವರ ಬರಹಗಳನ್ನು ವರ್ಗೀಕರಿಸಿ ಅವರ ಎಲ್ಲಾ ಕೃತಿಗಳನ್ನು ಅಭ್ಯಸಿಸುವುದು. ಅವರ ಬರವಣಿಗೆಯ ಹಿಂದಿನ ಮುಖ್ಯ ಧೋರಣೆಗಳು, ತತ್ವಗಳು ಯಾವ ರೀತಿ ಕೆಲಸ ಮಾಡಿವೆ ಎಂಬುದನ್ನು ಕಂಡುಕೊಳ್ಳುವುದು. ಅವರ ಸೃಜನಶೀಲ ಕೃತಿಗಳಲ್ಲಿನ ಪಾತ್ರ, ವೈವಿಧ್ಯತೆ ಹಾಗೂ ಸಾಮಾಜಿಕ ಸಂಬಂಧಗಳ ಸ್ವರೂಪವನ್ನು ವಿವರಿಸಿ ವಿಶ್ಲೇಷಿಸುವುದು. ಅವರ ಬರಹಗಳಲ್ಲಿ ಅಳವಡಿಸಿಕೊಂಡ ತಂತ್ರಗಳನ್ನು, ಶೈಲಿಗಳನ್ನು ಗುರುತಿಸಿಸುವುದು. ಅವರು ರಚಿಸಿರುವ ಕವಿತೆಗಳು, ಗದ್ಯ ಸಾಹಿತ್ಯವನ್ನು ಇತರ ಕವಿಗಳೊಂದಿಗೆ ತೌಲನಿಕವಾಗಿ ನೋಡುವುದು. ಈ ಉದ್ದೇಶಗಳ ಪ್ರತಿಯೊಂದು ಅಂಶವೂ ಒಂದೊಂದು ಮಹಾಪ್ರಬಂಧದ ವ್ಯಾಪ್ತಿಯನ್ನು ಪಡೆಯಬಲ್ಲಂಥವು. ಹೀಗಿರುವಾಗ ಒಂದೇ ಅಂಶಿಕ ಪ್ರಬಂಧದಲ್ಲಿ ಇಷ್ಟೆಲ್ಲವನ್ನು ಒಳಗೊಂಡಿರುವಂತೆ ವಿವೇಚಿಸುವುದು ಅಸಾಧ್ಯವಾಗುತ್ತದೆ. ಆದ್ದರಿಂದ ಮೇಲ್ಕಾಣಿಸಿದ ಉದ್ದೇಶಗಳನ್ನು ಒಂದು ಆಂಶಿಕ ಪ್ರಬಂಧದ ಮಿತಿಯಲ್ಲಿ ಬರೆಯಲಾಗಿದೆ.

ಸಿ.ಕೆ.ಪಿ. ಅವರು ತಮ್ಮ ಕೃತಿಗಳಲ್ಲಿ ವಾಸ್ತವ ಸತ್ಯ ಸಂಗತಿಗಳ ಹಿನ್ನೆಲೆಯನ್ನು ಸಮಾಜದಲ್ಲಿರುವ ಜ್ವಲಂತ ಸಮಸ್ಯೆಗಳನ್ನು ಚಿತ್ರಿಸಿದ್ದಾರೆ. ಅವರ ಪ್ರೀತಿ, ಪ್ರೇಮ, ಸ್ನೇಹ, ಭ್ರಾತೃತ್ವದಂತಹ ಆದರ್ಶಗಳ ಐತಿಹಾಸಿಕ ವಸ್ತುವಿಷಯಗಳು, ಭಕ್ತಿ ಪ್ರಧಾನ ಅಂಶಗಳನ್ನು ತಮ್ಮ ಕೃತಿಯಲ್ಲಿ ವಿವರಿಸಿದ್ದಾರೆ. ಶ್ರೀಯುತರು ಇದುವರೆಗೂ ಸುಮಾರು ಹದಿನೈದಕ್ಕೂ ಹೆಚ್ಚು ಕೃತಿಗಳನ್ನು

ರಚಿಸಿದ್ದಾರೆ. ಆದರೂ ಅವರ ಸಾಹಿತ್ಯದ ಸಮಗ್ರ ಅಧ್ಯಯನವು ಇದುವರೆಗೂ ನಡೆದಿಲ್ಲ. ಈ ಸಂಪ್ರಬಂಧದ ಮೂಲಕ ಸಿ.ಕೆ.ಪಿ. ಅವರ ಜೀವನ ಮತ್ತು ಸಾಹಿತ್ಯ ಕುರಿತಾಗಿ ಸಮಗ್ರ ಅಧ್ಯಯನ ಮಾಡುವುದು ನನ್ನ ಅಧ್ಯಯನದ ಸದುದ್ದೇಶವಾಗಿದೆ.

ಸಿ.ಕೆ.ಪಿ. ಅವರ ಸಮಗ್ರ ಸಾಹಿತ್ಯ ಕೃತಿಗಳನ್ನು ಇಲ್ಲಿ ವಿವರಿಸಿ ವಿಶ್ಲೇಷಿಸಲಾಗಿದೆ. ಸಿ.ಕೆ.ಪಿ. ಅವರ ಸಾಹಿತ್ಯದಲ್ಲಿ ಪ್ರಕಾರದಿಂದ ಪ್ರಕಾರಕ್ಕೆ ಬದಲಾದ ಕಥನ ಕ್ರಮವನ್ನು ಕಂಡುಹಿಡಿಯಲಾಗಿದೆ. ಆ ಮೂಲಕ ಅವರ ಧೋರಣೆಗಳನ್ನು ಕಂಡುಹಿಡಿಯಲಾಗಿದೆ. ಸಿ.ಕೆ.ಪಿ. ಅವರ ಸಾಹಿತ್ಯದಲ್ಲಿ ಯಾವ ಸಿದ್ಧಾಂತಗಳು ಕೆಲಸ ಮಾಡಿವೆ ಎಂಬುದನ್ನು ಕಂಡುಕೊಳ್ಳಲಾಗಿದೆ. ಅವರ ಸಾಹಿತ್ಯ ಕೃತಿಗಳೊಂದಿಗೆ ಇತರ ಸಾಹಿತ್ಯ ರಚನಾಕಾರರ ಕೃತಿಗಳನ್ನು ತೌಲನಿಕವಾಗಿ ನೋಡುವುದು ಹಾಗೂ ಅವರ ಭಾಷಾಶೈಲಿ, ತಂತ್ರಗಳನ್ನು ವಿಶ್ಲೇಷಿಸಿ, ವಿಮರ್ಶಿಸಿ ಶೋಧಿಸುವುದೇ ಈ ಸಂಶೋಧನೆಯ ಮುಖ್ಯ ಉದ್ದೇಶವಾಗಿದೆ.

ಸಿ.ಕೆ.ಪಿ. ಅವರು ತಮ್ಮ ಸಂವೇದನಾಶೀಲ ಬರವಣಿಗೆಯಿಂದ ಸಹೃದಯರ ಮನಸ್ಸನ್ನು ತಟ್ಟುವುದರ ಜೊತೆಯಲ್ಲಿ ಬದುಕಿನ ಕಟು ಸತ್ಯಗಳನ್ನು ಚಿತ್ರಿಸುವ ಶಕ್ತಿ ಅಮೋಘವಾದುದು. ದಲಿತ ಜನರ ಬವಣೆಗಳು, ಬದುಕಲು ಅವರು ನಡೆಸುವ ಹೋರಾಟ, ಆಸೆ, ನಿರಾಸೆ, ಕನಸುಗಳು, ಬದುಕಿನ ದಿಟ್ಟತನವನ್ನು ಅವರ ಬರವಣಿಗೆಯಲ್ಲಿ ಗುರುತಿಸಬಹುದಾಗಿದೆ.

ಅವರ ಸಾಹಿತ್ಯ ರಚನೆಯಲ್ಲಿ ಕಂಡುಬರುವ ಸರಳತೆ, ಸಹಜತೆ, ವಾಸ್ತವಿಕತೆಗಳನ್ನು ಮತ್ತು ಜೀವನ ದೃಷ್ಟಿಯನ್ನು ತಾತ್ವಿಕ ನೆಲೆಯಲ್ಲಿ ಶೋಧಿಸಲಾಗಿದೆ.

೧.೩. ಅಧ್ಯಯನದ ವ್ಯಾಪ್ತಿ :

ಸುಮಾರು ಎರಡು ಸಾವಿರ ವರ್ಷಗಳ ಚರಿತ್ರೆ ಹೊಂದಿರುವ ನಮ್ಮ ಕನ್ನಡ ನಾಡಿನ ಸಾಹಿತ್ಯವು ಒಂದು ಭವ್ಯ ಪರಂಪರೆಯಾಗಿ ಬೆಳೆದುಬಂದಿದೆ. "ಪಂಪನಿಂದ ಚಂಪಾ"ರವರೆಗೆ ಸಾಹಿತ್ಯವು ಬೆಳೆದುಬಂದ ದಾರಿ ವೈವಿಧ್ಯಮಯವಾಗಿದೆ. ಕನ್ನಡ ಸಾಹಿತ್ಯವು ಪ್ರಾಚೀನ ನಡುಗನ್ನಡಗಳನ್ನು ದಾಟಿ ಮುಂದೆ ಹೊಸಗನ್ನಡಕ್ಕೆ ಪಾದಾರ್ಪಣೆ ಮಾಡಿದಾಗ ಇಡೀ ಕೃತಿಗಳನ್ನು ಶೋಧಿಸುವ ಕಾರ್ಯವು ಆಗಬೇಕಾಗಿದೆ. ಆದ್ದರಿಂದ ಪ್ರಸ್ತುತ ಅಧ್ಯಯನದಲ್ಲಿ ಸಾಹಿತ್ಯದ ವಿವಿಧ ಮಜಲುಗಳಾದ ಕಾವ್ಯ, ಕಥೆ, ಸಂಪಾದನೆ, ಸಂಶೋಧನೆ, ಅಭಿವೃದ್ಧಿ ಸಾಹಿತ್ಯವನ್ನು ಅವಲೋಕಿಸಿ ಈ ಎಲ್ಲ ವಿಷಯಗಳನ್ನು ಹಲವು ಮುಖಗಳಲ್ಲಿ ನೋಡುವ ಪ್ರಯತ್ನ ಮಾಡಲಾಗಿದೆ.

ಸಿ.ಕೆ.ಪಿ. ಅವರ ಕಾವ್ಯ, ಕಥೆ, ಸಂಪಾದನೆ, ಸಂಶೋಧನೆ, ಅಭಿವೃದ್ಧಿ ಸಾಹಿತ್ಯ ಈ ಒಂದೊಂದು ಅಂಶಗಳು ಒಂದೊಂದು ಪ್ರಬಂಧದ ವ್ಯಾಪ್ತಿಯನ್ನು ಪಡೆಯಬಲ್ಲವು. ಆದ್ದರಿಂದ

ಒಂದೇ ಪ್ರಬಂಧದಲ್ಲಿ ಇಷ್ಟೆಲ್ಲವನ್ನು ಕಟ್ಟಿಕೊಡುವುದು ಕಷ್ಟವಾಗಿರುವುದರಿಂದ ಮೇಲ್ಕಂಡ ಉದ್ದೇಶಗಳನ್ನು ಒಂದು ಪ್ರಬಂಧದ ಮಿತಿಯಲ್ಲಿ ಸ್ಥೂಲವಾಗಿ ಅಭ್ಯಾಸ ಮಾಡಲಾಗಿದೆ.

೧.೪. ಅಧ್ಯಯನದ ಸ್ವರೂಪ :

ಪ್ರಸ್ತುತ ಪ್ರಬಂಧವು 'ಸಿ.ಕೆ. ಪರುಶರಾಮಯ್ಯನವರ ಸಮಗ್ರ ಸಾಹಿತ್ಯ' ಎಂಬ ಶೀರ್ಷಿಕೆಯನ್ನೊಳಗೊಂಡಿದ್ದು, ಐದು ಅಧ್ಯಾಯಗಳಲ್ಲಿ ವಿಸ್ತೃತಗೊಂಡಿದೆ.

ಮೊದಲ ಅಧ್ಯಾಯವು ಅಧ್ಯಯನದ ಪ್ರಸ್ತಾವನೆ, ಉದ್ದೇಶ, ವ್ಯಾಪ್ತಿ, ಸ್ವರೂಪಗಳನ್ನೊಳಗೊಂಡಿದ್ದು, ಇದರಲ್ಲಿ ಪ್ರಸ್ತಾವನೆ ಭಾಗದಲ್ಲಿ ಕನ್ನಡ ಸಾಹಿತ್ಯ ಬೆಳೆದುಬಂದ ದಾರಿಯನ್ನು ಸಂಕ್ಷಿಪ್ತವಾಗಿ ಹೇಳಲಾಗಿದೆ. ಉದ್ದೇಶದಲ್ಲಿ ನಾನು ಈ ಪ್ರಬಂಧ ಬರೆಯಲು ಕಾರಣವಾದ ಅಂಶಗಳು, ಉದ್ದೇಶಗಳು, ನಿಲುವುಗಳನ್ನು ಚರ್ಚಿಸಲಾಗಿದೆ. ನಂತರ ಈ ಪ್ರಬಂಧದ ವ್ಯಾಪ್ತಿಯನ್ನು ಸ್ಥೂಲವಾಗಿ ಗುರುತಿಸಲಾಗಿದೆ. ಈ ಪ್ರಬಂಧದ ಪರಿಮಿತಿ ಹೇಳಲಾಗಿದೆ. ಸ್ವರೂಪದಲ್ಲಿ ಈ ಐದು ಅಧ್ಯಾಯಗಳ ಸಂಕ್ಷಿಪ್ತ ಮಾಹಿತಿ ನೀಡಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಸಿ.ಕೆ.ಪಿ. ಅವರ ಜೀವನ ಮತ್ತು ಸಾಧನೆಗಳನ್ನು ಅವಲೋಕಿಸಲಾಗಿದೆ. ಇಲ್ಲಿ ಸಿ.ಕೆ.ಪಿ. ಅವರ ಜೀವನ, ಬಾಲ್ಯ, ಶಿಕ್ಷಣ, ಉದ್ಯೋಗ, ಸಾಹಿತ್ಯ ಚಟುವಟಿಕೆಗಳನ್ನು ಮೆಲುಕು ಹಾಕಲಾಗಿದೆ. ಹೀಗೆ ಶಿಕ್ಷಣ ಮತ್ತು ಉದ್ಯೋಗ, ವೈವಾಹಿಕ ಜೀವನದ ರಸಘಟ್ಟಗಳನ್ನು ಈ ಅಧ್ಯಾಯದಲ್ಲಿ ಸಂಕ್ಷಿಪ್ತವಾಗಿ ಪರಿಚಯಿಸಲಾಗಿದೆ.

ಮೂರನೆಯ ಅಧ್ಯಾಯವು ಸಿ.ಕೆ.ಪಿ. ಅವರ ಎಲ್ಲ ಕೃತಿಗಳನ್ನು ಒಳಗೊಂಡಿದ್ದು, ಸುಮಾರು ಹದಿನೈದಕ್ಕೂ ಹೆಚ್ಚು ಕೃತಿಗಳನ್ನು ಇಟ್ಟುಕೊಂಡು ಚರ್ಚಿಸಲಾಗಿದೆ. ಸಿ.ಕೆ.ಪಿ. ಅವರ ಕಾವ್ಯದಲ್ಲಿ ದಲಿತ ಧಮನಿ, ನನ್ನ ವಚನಗಳು, ಗ್ರಂಥಸಂಪಾದನೆಯಲ್ಲಿ ನೀಲಲೋಚನೆಯ ವಚನಗಳು ಮತ್ತು ತಗರ ಪವಾಡ, ಗದ್ಯ ಸಾಹಿತ್ಯದಲ್ಲಿ ಚೌಡಿಕೆ, ಪ್ರಾಚೀನ ಆದರ್ಶ ಬಾಲಕರು, ಗಾದೆಗಳ ಅಂತರಂಗ, ಅಭಿವೃದ್ಧಿ ಸಾಹಿತ್ಯದಲ್ಲಿ ತಾಯಂದರಿಗೆ ತಿಳಿದಿರಲಿ, ಕರ್ನಾಟಕ ಪ್ರಗತಿ ಪಥ ಮುಂತಾದ ಇವರ ಕೃತಿಗಳನ್ನು ವಿವರಿಸಿ, ವಿಶ್ಲೇಷಿಸಿ, ವಿಮರ್ಶಿಸಿ ಅವುಗಳ ತಾತ್ವಿಕ, ಸಾಮಾಜಿಕ, ಸಾಹಿತ್ಯಿಕ ವೈಶಿಷ್ಟ್ಯಗಳನ್ನು ಎತ್ತಿ ಹಿಡಿಯಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಸಿ.ಕೆ.ಪಿ. ಅವರು ಕನ್ನಡ ಸಾಹಿತ್ಯಕ್ಕೆ ನೀಡಿದ ಕೊಡುಗೆಗಳನ್ನು ಸಂಕ್ಷಿಪ್ತವಾಗಿ ಹೇಳಲಾಗಿದೆ.

ಕೊನೆಯ ಅಧ್ಯಾಯ ಸಮಾರೋಪವಾಗಿದ್ದು, ಈ ಅಧ್ಯಾಯದಲ್ಲಿ ಪ್ರಬಂಧ ಸಿದ್ಧವಾಗಲು ಹಾಕಿಕೊಂಡ ಎಲ್ಲ ಅಧ್ಯಾಯಗಳ ಫಲಶೃತಿಯನ್ನು ವಿವರಿಸಲಾಗಿದೆ. ಪ್ರಬಂಧಕ್ಕಾಗಿ ಇರುವ

ಉದ್ದೇಶ, ಅದರ ವ್ಯಾಪ್ತಿಯನ್ನು ಹಾಗೂ ವಿಷಯ, ವಸ್ತು ವಿಶ್ಲೇಷಣೆಯ ಅಂಶಗಳನ್ನು ಚರ್ಚೆ ಮಾಡಲಾಗಿದೆ.

ಕೊನೆಯಲ್ಲಿ ಸಿ.ಕೆ.ಪಿ. ಅವರು ಪ್ರಕಟಿಸಿರುವ ಗ್ರಂಥಗಳು, ಪರಾಮರ್ಶ ಗ್ರಂಥಗಳು ಹಾಗೂ ಛಾಯಾಚಿತ್ರಗಳನ್ನು ಅನುಬಂಧದಲ್ಲಿ ಸೇರಿಸಲಾಗಿದೆ. ಇದು ಸಿ.ಕೆ.ಪಿ. ಅವರ ಸಾಹಿತ್ಯ ಕುರಿತು ಮಾಹಿತಿ ಬೇಕಾದಲ್ಲಿ ಪೂರಕ ಆಕರ ಸಾಮಗ್ರಿಯನ್ನು ಒದಗಿಸುತ್ತದೆ. ಸಂದರ್ಶನದಲ್ಲಿ ಅವರು ನನ್ನ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರಗಳನ್ನು ನೀಡಿದ್ದಾರೆ.

ಅಧ್ಯಾಯ : ಎರಡು

ಸಿ.ಕೆ. ಪರಶುರಾಮಯ್ಯ ಅವರ ಜೀವನ ಮತ್ತು ಸಾಧನೆಗಳು

ಅಧ್ಯಾಯ – ಎರಡು

ಸಿ.ಕೆ. ಪರಶುರಾಮಯ್ಯನವರ ಜೀವನ ಮತ್ತು ಸಾಧನೆಗಳು

ವೃತ್ತಿಯಿಂದ ಕರ್ನಾಟಕ ಸರ್ಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆಯಲ್ಲಿ ಜಂಟಿ ನಿರ್ದೇಶಕರಾಗಿ ಪ್ರವೃತ್ತಿಯಲ್ಲಿ ಸಾಹಿತಿಗಳಾಗಿ, ಆಧುನಿಕ ಕನ್ನಡ ಸಾಹಿತ್ಯಕ್ಕೆ ಅನುಪಮವಾದ ಕೊಡುಗೆ ನೀಡಿದ ಸಿ.ಕೆ.ಪಿ. ಅವರು ಸರಳ–ಸಜ್ಜನಿಕೆ ಸ್ವಭಾವಗಳನ್ನು ಮೈಗೂಡಿಸಿಕೊಂಡಿರುವ ಒಬ್ಬ ಅಪರೂಪದ ವ್ಯಕ್ತಿಯಾಗಿದ್ದಾರೆ. ಎಂಬತ್ತರ ಪ್ರಾಯದಲ್ಲಿ ಕ್ರಿಯಾಶೀಲರಾಗಿ ಬರವಣಿಗೆಯಲ್ಲಿ ತೊಡಗಿಸಿಕೊಂಡಿರುವ ಇವರು ಆಧುನಿಕ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಹದಿನೈದಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ.

ಒಂದರೆಡು ಕೃತಿಗಳನ್ನು ರಚಿಸಿದರೆ ಸಾಕು ಕೀರ್ತಿ, ಸನ್ಮಾನಗಳು, ಪ್ರಶಸ್ತಿಗಳನ್ನು ಹಂಬಲಿಸುತ್ತಿರುವ ಇಂದಿನ ದಿನಮಾನಗಳಲ್ಲಿ ಇಷ್ಟೊಂದು ಕೃತಿಗಳನ್ನು ರಚಿಸಿದರೂ ಕೂಡ ಯಾವ ಕೀರ್ತಿ, ಸನ್ಮಾನ, ಪ್ರಶಸ್ತಿಗಳನ್ನು ಅಪೇಕ್ಷಿಸದೇ ಪ್ರಚಾರವನ್ನು ಬಯಸದೆ ಒಂದೇ ರೀತಿಯ ನಿರ್ಲಿಪ್ತ ಜೀವನ ಸಾಗಿಸುತ್ತಿದ್ದಾರೆ. ಆಧುನಿಕ ಸಾಹಿತ್ಯ ಸಂದರ್ಭದಲ್ಲಿ "ಎಲೆ ಮರೆಯಕಾಯಿ"ಯಂತೆ ಬದುಕಿ ಬರೆದಿರುವ ಸಿ.ಕೆ.ಪಿ. ಅವರ ಜೀವನ–ಸಾಧನೆಯನ್ನು ಪರಿಚಯಿಸುವ ಪ್ರಯತ್ನವನ್ನು ಈ ಕಿರು ನಿಬಂಧದಲ್ಲಿ ಮಾಡಲಾಗಿದೆ.

ಸಿ.ಕೆ.ಪಿ. ಅವರ ಆರಂಭಿಕ ಜೀವನ ಮತ್ತು ವಿದ್ಯಾಭ್ಯಾಸ :

ಕರ್ನಾಟಕ ಸರ್ಕಾರದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಲ್ಲಿ ಮೂರುವರೆ ದಶಕಗಳ ಕಾಲ ವಿವಿಧ ಹಂತಗಳಲ್ಲಿ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡಿದ ಸಿ.ಕೆ.ಪಿ. ಅವರು ಒಬ್ಬ ಪ್ರಾಮಾಣಿಕ ಹಾಗೂ ಪ್ರಬುದ್ಧ ಬರಹಗಾರರೆಂದು ಗುರುತಿಸಿಕೊಂಡಿದ್ದಾರೆ.

ಸಿ.ಕೆ.ಪಿ. ಅವರು "ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿಯ" ಕಂಬಳಿ ನೇಕಾರ (ಕುರುಬ) ಮನೆತನದಲ್ಲಿ ೦೮.೦೨.೧೯೩೮ರಲ್ಲಿ ಜನಿಸಿದರು. ಇವರ ಪೂರ್ಣ ಹೆಸರು "ಚೌಡಿಕೆ ಕರಿಯಪ್ಪ ಪರಶುರಾಮಯ್ಯ". 'ಚೌಡಿಕೆ' ಎಂಬುದು ಇವರ ಮನೆತನದ ಹೆಸರು. ಇವರ ತಂದೆ 'ಚೌಡಿಕೆ ಕರಿಯಪ್ಪ', ತಾಯಿ ಸಣ್ಣಮುದ್ದಮ್ಮನ ಮಗನಾಗಿ ಜನಿಸಿದರು. ತಮ್ಮ ಹುಟ್ಟೂರು ಆದ ಚಿಕ್ಕನಾಯಕನಹಳ್ಳಿಯಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣವನ್ನು ಮುಗಿಸಿದರು. ನಂತರ ಉನ್ನತ ವಿದ್ಯಾಭ್ಯಾಸಕ್ಕಾಗಿ ಮೈಸೂರಿಗೆ ತೆರಳಿದರು. ೧೯೫೦ರಲ್ಲಿ ಆಗ ರಾಜ್ಯಕ್ಕೆ ಇದ್ದ ಒಂದೇ ಒಂದು ವಿಶ್ವವಿದ್ಯಾಲಯ ಎಂದರೆ ಮೈಸೂರು ವಿಶ್ವವಿದ್ಯಾಲಯ. ಅಲ್ಲಿನ ಪ್ರತಿಷ್ಠಿತ ಮಹಾರಾಜ ಕಾಲೇಜಿನಲ್ಲಿ ಕನ್ನಡ ಸಾಹಿತ್ಯ ಮತ್ತು ಭಾಷೆಯನ್ನು ಐಚ್ಛಿಕ ವಿಷಯವಾಗಿ ಅಭ್ಯಾಸಮಾಡಿ ಅದೇ ವಿಶ್ವವಿದ್ಯಾಲಯದಿಂದ ಎಂ.ಎ. ಪದವಿಯನ್ನು ಪಡೆದು ಅವರು ಒಬ್ಬ ಸಾಹಿತ್ಯದಲ್ಲಿ ಆಸಕ್ತಿ ವ್ಯಕ್ತಿಯಾಗಿ ಹೊರಹೊಮ್ಮಿದರು.

ಆ ಕಾಲಘಟ್ಟದಲ್ಲಿ ಮೈಸೂರು ಮಹಾರಾಜ ಕಾಲೇಜು ವಿದ್ವಾನ್‌ಮಣಿಗಳ ಆಗರವಾಗಿತ್ತು. ಶಬ್ದಬ್ರಹ್ಮ ಎಂದೇ ಖ್ಯಾತಿ ಹೊಂದಿರುವ ಪೂರ್ವ ಹಳೆಗನ್ನಡ, ಪ್ರಾಕೃತ ಭಾಷೆಗಳ ಮೇಲೆ ಪ್ರಭುತ್ವ ಹೊಂದಿದ ಪ್ರೊ. ಡಿ.ಎಲ್. ನರಸಿಂಹಚಾರ್ಯ ಹಾಗೂ ಪ್ರೊ. ತೀ.ನಂ. ಶ್ರೀಕಂಠಯ್ಯನವರು ಸಿ.ಕೆ.ಪಿ. ಅವರ ನೆಚ್ಚಿನ ಗುರುಗಳಾಗಿದ್ದರು. ಆ ಕಾಲದಲ್ಲಿ ಎಂ.ಎ. ಪಿಎಚ್.ಡಿ. ಮುಗಿಸಿದ ಡಾ. ಜಿ.ಎಸ್. ಶಿವರುದ್ರಪ್ಪ, ಪ್ರೊ. ಎಸ್.ವಿ. ಪರಮೇಶ್ವರಭಟ್ಟ, ಪ್ರೊ. ಅನಂತರಂಗಾಚಾರ್ಯರು 'ಸುಜನ' ಎಂಬ ಕಾವ್ಯನಾಮದ ನಾರಾಯಣ ಕಟ್ಟಿ, ಪ್ರೊ. ಪ್ರಭುಶಂಕರ, ಸಿ.ಡಿ. ನರಸಿಂಹಯ್ಯ, ಪ್ರೊ. ವೆಂಕಟರಾಮಪ್ಪ, ಇತಿಹಾಸದ ಎಸ್. ನೀಲಂಕಂಠ ಶಾಸ್ತ್ರೀ, ಅರ್ಥಶಾಸ್ತ್ರದ ವೆಂಕಟಗಿರಿಗೌಡರಂತಹ ಪ್ರಭುತ್ವ ಘಟಾನುಘಟಿ ಅಧ್ಯಾಪಕರುಗಳು ಮಾರ್ಗದರ್ಶನ ನೀಡಿದರು. ಹಾಗಾಗಿ ಸಿ.ಕೆ.ಪಿ. ಅವರ ಸಾಹಿತ್ಯಾಸಕ್ತಿಗೆ ಮೈಸೂರು ವಿಶ್ವವಿದ್ಯಾಲಯ ಒಂದು ಒಳ್ಳೆಯ ತಳಹದಿಯನ್ನು ಒದಗಿಸಿತು.

ಸಿ.ಕೆ. ಪರಶುರಾಮಯ್ಯನವರ ಸರ್ಕಾರ ಸೇವೆಗಳು :

ಸಿ.ಕೆ.ಪಿ. ಅವರು ಎಂ.ಎ. ಪದವಿಧರರಾದ ಮೇಲೆ ಆರಂಭದಲ್ಲಿ ಕೆಲವು ಕಾಲ (೧೯೬೨–೧೯೬೩)ರವರೆಗೆ ಮೈಸೂರಿನ ವಿದ್ಯಾವರ್ಧಕ ಪ್ರೌಢಶಾಲೆಯಲ್ಲಿ ಕನ್ನಡ ಪಂಡಿತ ಮತ್ತು ಸುತ್ತೂರು ಪ್ರೌಢಶಾಲೆಯಲ್ಲಿ ಅಧ್ಯಾಪಕರಾಗಿದ್ದರು. ೧೯೬೪ರಲ್ಲಿ ಕರ್ನಾಟಕ ಸರ್ಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆಯಲ್ಲಿ ಉಪಸಂಪಾದಕ ಹಾಗೂ ಸರ್ಕಾರದ ಹಂಗಾಮಿ ವರದಿಗಾರರಾಗಿ ನೇಮಕವಾದರು. ೧೯೬೫ರಲ್ಲಿ ಪ್ರಚಾರ ಸಹಾಯಕರಾಗಿ ಖಾಯಂ ಆದರು. ಬೆಂಗಳೂರಿನ

ವಿಧಾನಸೌದದಲ್ಲಿ ವೃತ್ತಿ ಜೀವನ ಆರಂಭಿಸಿದರು. ಪತ್ರಿಕೆ ಮತ್ತು ವಾರ್ತಾ ವಿಭಾಗದಲ್ಲಿ ಐದು ವರ್ಷಗಳ ಸಮರ್ಥ ಸೇವೆ, ಸರ್ಕಾರದ ಯೋಜನೆಗಳನ್ನು ಸಾಧಿಸಿದ ಪ್ರಗತಿಯನ್ನು ಕಾಳಜಿಯಿಂದ, ಗ್ರಾಮೀಣ ಜನರಿಗೆ ತಲುಪಿಸುವ ಪ್ರಾಮಾಣಿಕ ಪ್ರಯತ್ನ ಮಾಡುವುದರಲ್ಲಿ ಸಫಲರಾದರು. ವಾರ್ತಾ ಇಲಾಖೆಯ ನೌಕರರಾಗಿ ಪ್ರಾಮಾಣಿಕತೆ, ದಕ್ಷತೆ ಮತ್ತು ನಿಷ್ಠಾವಂತರಾಗಿ ಕಾರ್ಯನಿರ್ವಹಿಸಿದ್ದು ಇವರ ಒಂದು ಅಭೂತಪೂರ್ವವಾದ ಸಾಧನೆಯಾಗಿದೆ. ಸರ್ಕಾರಿ ಸೇವೆಯಲ್ಲಿರುವಾಗ ಇವರು ತೋರುತ್ತಿದ್ದ ಅಪಾರ ದಕ್ಷತೆ ಹಾಗೂ ಸಮಯಪಾಲನೆ, ಪ್ರಜ್ಞಾವಂತಿಕೆಯನ್ನು ಮೆರೆದಿದ್ದರಿಂದ ಹಿರಿಯ ಅಧಿಕಾರಗಳಿಂದ ಅಪಾರವಾದ ಅಚ್ಚುಮೆಚ್ಚಗೆ ಹಾಗೂ ವಿಶ್ವಾಸಗಳಿಸಿದ್ದರು. ಅಂತಹ ಸಮಯದಲ್ಲಿ ಸಿ.ಕೆ.ಪಿ. ಅವರಿಗೆ ಇನ್ನೂ ಹೆಚ್ಚು ಹೆಚ್ಚು ಅವಕಾಶಗಳು ಮತ್ತು ಜವಾಬ್ದಾರಿಗಳು ಇವರನ್ನು ಹುಡುಕಿಕೊಂಡು ಬಂದವು.

ಮೈಸೂರು ಉದ್ಯೋಗ ವಿನಿಮಯ ಕಚೇರಿಯಿಂದ ಕನ್ನಡ ಉಪಸಂಪಾದಕ ಹುದ್ದೆಗೆ ಸಂದರ್ಶನ ಕರೆಯು ಬಂದಿತು. ಡಿ.ಎನ್. ಪಾಳೆಗಾರ, ಬಿ.ಜಿ. ಕುಲಕರ್ಣಿ, ಜಿ. ರುದ್ರಪ್ಪ ಎಂಬ ಮೂರು ಜನ ಸಂದರ್ಶನ ಮಾಡಿದರು. ಈ ಸಂದರ್ಶನದಲ್ಲಿ ಸಿ.ಕೆ.ಪಿ. ಅವರು ಉತ್ತೀರ್ಣರಾಗಿ, ಬಳಿಕ ಆ ಹುದ್ದೆಗೆ ನೇಮಕಗೊಂಡರು. ಇದು ನಡೆದದ್ದು ೧೯೫೦ರ ದಶಕದಲ್ಲಿ. ಆಗ ಮೈಸೂರಿನಲ್ಲಿ ಮೇಲ್ಕಂಡ ಹುದ್ದೆ ಇರಲಿಲ್ಲ. ಆ ಹುದ್ದೆಗೆ ಸಿ.ಕೆ.ಪಿ. ಅವರ ಹೆಸರನ್ನು ಆಯ್ಕೆ ಪಟ್ಟಿಯಲ್ಲಿ ಸೇರಿಸಿ ಬೆಂಗಳೂರಿಗೆ ಮತ್ತೆ ಸಂದರ್ಶನಕ್ಕೆ ಕರೆದರು. ಅಲ್ಲಿ ಅವರನ್ನು ಪ್ರಚಾರ ಸಹಾಯಕರು ಎಂದು ರಾಜ್ಯ ವಾರ್ತಾ ಮತ್ತು ಪ್ರಚಾರ ಇಲಾಖೆಗೆ ನೇಮಕ ಮಾಡಲಾಯಿತು. ಆಗ ಅವರಿಗಿದ್ದ ಒಂದಿಷ್ಟು ಸಾಹಿತ್ಯಾಸಕ್ತಿಯ ಹಿನ್ನೆಲೆಯಿಂದ ಆ ಹುದ್ದೆಯಲ್ಲಿ ಹಿರಿಯ ಅಧಿಕಾರಗಳು ಮೆಚ್ಚುವಂತೆ ವಾರ್ತಾ ಪತ್ರಗಳ ರಚನೆ, ಅನುವಾದ ಪತ್ರಿಕೆ, ಪ್ರಕಟಣೆ ಮುಂತಾದ ಬರವಣಿಗೆಗಳನ್ನು ಹಿರಿಯ ಅಧಿಕಾರಿಗಳು ಮೆಚ್ಚುವಂತೆ ಮಾಡಿದ್ದು ಅವರ ಸಾಹಿತ್ಯಾಸಕ್ತಿಯ ನಿದರ್ಶನವಾಗಿದೆ.

೧೯೭೦ರಿಂದ ೧೯೭೫ರವರೆಗೆ ಇಲಾಖೆಯಿಂದ ಪ್ರಕಟವಾಗುವ 'ಜನಪದ' ಎಂಬ ವಾರ ಪತ್ರಿಕೆಯ ಸಹ ಸಂಪಾದಕತ್ವದ ಕೆಲಸವು ಸಹ ಇವರ ಜವಾಬ್ದಾರಿಯಾಗಿ ಒದಗಿ ಬಂದಿತು. ನಂತರ ೧೯೭೭ರಿಂದ ಎರಡು ವರ್ಷಗಳ ಕಾಲ ಕನ್ನಡ ಅಭಿವೃದ್ಧಿ ಮತ್ತು ಭಾಷೆಗಳ ಇಲಾಖೆ ಹಾಗೂ ಭಾಷಾಂತರ ಇಲಾಖೆಯಲ್ಲಿ ಎರವಲು ಸೇವೆಯ ಮೇಲೆ ಹೋಗಿ ಸಂಶೋಧನಾಧಿಕಾರಿಯಾಗಿ ಕಾರ್ಯನಿರ್ವಹಿಸಿದರು. ಆ ಸೇವೆಯ ಅವಧಿಯಲ್ಲಿ "ಹಾವನೂರು ಹಿಂದುಳಿದ ವರ್ಗಗಳ ಆಯೋಗದ ಹೊತ್ತಿಗೆಯ ಭಾಷಾಂತರ ಸಮೀಕ್ಷೆಯ ಉಪಸಮಿತಿಯ ಸದಸ್ಯರಾಗಿ ಅದರ ಒಪ್ಪ–

ಓರಣದ ಚೌಕಟ್ಟನ್ನು ಒದಗಿಸುವ ಕೆಲಸವನ್ನು ಒಲವಿನಿಂದ ಮಾಡಿದರು. ಅದೇ ಸಂದರ್ಭದಲ್ಲಿ ಭಾಷಾಂತರ ಇಲಾಖೆ ಸಿದ್ಧಪಡಿಸಿದ ಸರ್ಕಾರದ ೪೫ ವಿವಿಧ ಇಲಾಖೆಯ ಆಡಳಿತ ಶಬ್ದಕೋಶಗಳ ರಚನೆಯ ಮೇಲ್ವಿಚಾರಣಾ ಕೆಲಸ ನಿರ್ವಹಿಸಿದರು."[೧]

ಮತ್ತೆ ಮಾತೃ ಇಲಾಖೆಗೆ ಮರಳಿದ ಪರಶುರಾಮಯ್ಯನವರು ೧೯೭೫ರಿಂದ ಮೂರು ವರ್ಷಗಳಕಾಲ 'ಜನಪದ' ವಾರ ಪತ್ರಿಕೆಯ ಸಂಪಾದಕರಾಗಿ ಕಾರ್ಯನಿರ್ವಹಣೆ, ನಾಡಿನ ಮೂಲೆ ಮೂಲೆಗಳಿಂದ ಸಾಹಿತಿ,ಕಲಾವಿದರು, ಜನಪದ ವೃತ್ತಿ ಗಾಯಕರನ್ನು ಪ್ರತಿಭಾವಂತರನ್ನು ಪತ್ರಿಕೆಯಲ್ಲಿ ಪರಿಚಯಿಸಿ ತನ್ಮೂಲಕ ಸರ್ಕಾರದ ಮತ್ತು ಜನತೆಯ ಗಮನ ಸೆಳೆದರು. ಇದೇ ಅವಧಿಯಲ್ಲಿ ಇಲಾಖೆಯ ವಾಣಿಜ್ಯ ಪ್ರಚಾರಾಧಿಕಾರಿ ಪತ್ರಿಕೆ ಮತ್ತು ವಾರ್ತಾ ವಿಭಾಗದ ಹಿರಿಯ ಸಹಾಯಕ ನಿರ್ದೇಶಕ ಹಾಗೂ ಸಂಗೀತ, ನಾಟಕ ಅಧಿಕಾರಿಯಾಗಿ ಹೆಚ್ಚುವರಿ ಕಾರ್ಯನಿರ್ವಹಿಸಿದರು.

"೧೯೮೮ರಲ್ಲಿ ರಾಜ್ಯ ಆರೋಗ್ಯ ಇಲಾಖೆಯ 'ಭಾರತ ಜನಸಂಖ್ಯಾ ಯೋಜನೆ–೩'ರ ಪ್ರಕಟಣೆಗಳ ಉಪ ನಿರ್ದೇಶಕರಾಗಿ ಎರವಲು ಸೇವೆಯ ಮೇಲೆ ಕಾರ್ಯಭಾರವನ್ನು ವಹಿಸಿಕೊಂಡರು."[೨] ಆಗ ಉತ್ತರ ಕರ್ನಾಟಕದ ಆರು ಜಿಲ್ಲೆಗಳಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಗರ್ಭಿಣಿ, ಬಾಣಂತಿ, ಶಿಶು ಸಂರಕ್ಷಣೆ ಕುರಿತು ಕಾರ್ಯಾಗಾರ, ವಿಚಾರ ಗೋಷ್ಠಿ ಉಪನ್ಯಾಸ ಹಾಗೂ ಚಲನಚಿತ್ರಗಳ ಪ್ರದರ್ಶನದ ಮೇಲ್ವಿಚಾರಣೆ ನಡೆಸಿದರು. ಆ ಸುತ್ತಿನ ಗ್ರಾಮೀಣ ಜನತೆಗೆ ಕುಟುಂಬ ಯೋಜನೆಯ ಬಗೆಗೆ ಸೂಕ್ತ ತಿಳುವಳಿಕೆ ನೀಡಿದಂತೆ ಜನತೆಗೆ ಮನವರಿಕೆ ಮತ್ತು ಮನಪರಿವರ್ತನೆ ಮಾಡುವಂತಹ ಹಲವು ಹತ್ತು ಬಗೆಯ ಸಚಿತ್ರ ಭಿತ್ತಿ ಪತ್ರಗಳ ಮತ್ತು ಸಾಕ್ಷ್ಯ ಚಿತ್ರಗಳಿಗಾಗಿ ಸಾಹಿತ್ಯ ರಚನೆ, ಪ್ರಕಟಣೆಯ ಕೆಲಸವನ್ನು ಮಾಡಿದರು. ೧೯೮೯–೧೯೯೧ರವರೆಗೆ ಬೆಳಗಾವಿ ವಿಭಾಗದ ವಾರ್ತಾ ಮತ್ತು ಪ್ರಚಾರ ಉಪನಿರ್ದೇಶಕರಾಗಿದ್ದರು.

"೧೯೯೧ರಲ್ಲಿ ಒಂದು ವರ್ಷಗಳ ಕಾಲ ಕರ್ನಾಟಕ ರಾಜ್ಯ ಭಾಷಾ (ವಿಧಾಯಿ) ಆಯೋಗದ ಸರ್ಕಾರಿ ಸದಸ್ಯರಾಗಿ ಎರವಲು ಸೇವೆ ಮಾಡಿದರು. ೧೯೯೬ರಲ್ಲಿ ವಾರ್ತಾ ಮತ್ತು ಪ್ರಚಾರ ಇಲಾಖೆಯ ಜಂಟಿ ನಿರ್ದೇಶಕರಾಗಿ ಸರ್ಕಾರಿ ಸೇವೆಯಿಂದ ನಿವೃತ್ತಿ ಹೊಂದಿದರು."[೩] ಕನ್ನಡ ಭಾಷೆ, ಸಾಹಿತ್ಯ ಓದಿದ್ದು ಇವರ ಪಾಲಿಗೆ ವ್ಯರ್ಥವಾಗಲಿಲ್ಲ. ಬೋಧಕ ವೃತ್ತಿ ಸಿಕ್ಕಲಿಲ್ಲವೆಂದು ಕೊರಗದೆ, ವಾರ್ತಾ ಮತ್ತು ಪ್ರಚಾರ ಇಲಾಖೆಯಲ್ಲಿ ಸೇವೆ. ತಾವು ಪಡೆದುಕೊಂಡ ಸಾಹಿತ್ಯದ ಅಧ್ಯಯನ ಸದ್ಬಳಕೆಯಾಗಿತ್ತು. ಸರ್ಕಾರದ ಸಂಬಳಕ್ಕೆ ನ್ಯಾಯ ದೊರಕಿಸಿಕೊಟ್ಟಂತೆ ಅದರ ಸದುಪಯೋಗವಾಯಿತೆಂದು ಈಗಲೂ ನೆನಪಿಸಿಕೊಳ್ಳುತ್ತಾರೆ. ಜತೆಗೆ ನಾಡಿನ ಸಾಹಿತಿಗಳ, ಕಲಾವಿದರ, ಜನಪದ ವೃತ್ತಿ ಗಾಯಕರ, ಪ್ರತಿಭಾವಂತರ ಪರಿಚಯ, ಸಂಪರ್ಕ ತಮಗೆ

ಒದಗಿತೆಂಬ ಕೃತಜ್ಞತೆ, ಆ ತೃಪ್ತಿ ತಮಗಿದೆಯೆಂದು ಬಗೆಯುತ್ತಾರೆ. ವಾರ್ತಾ ಇಲಾಖೆಯ ನೌಕರರು ಸಿ.ಕೆ.ಪಿ. ಒಬ್ಬ ರಸಿಕ ಮಾತುಗಾರರಾಗಿ, ದಕ್ಷ ಅಧಿಕಾರಿಯಾಗಿ ಜನ ಮನ್ನಣೆಗಳಿಸಿಕೊಂಡಿದ್ದರೆಂದು ಈಗಲೂ ಹೇಳುತ್ತಾರೆ.

ಕುರುಬ ಜನಾಂಗದ ಅಭಿವೃದ್ಧಿಗೆ ಶ್ರಮಿಸಿದವರು :

ಸಿ.ಕೆ.ಪಿ. ಅವರು ಕುರುಬ ಜನಾಂಗದಲ್ಲಿ ಜನಿಸಿದವರು. ಈ ಜನಾಂಗದ ಬದುಕು, ಬವಣೆ, ಸ್ಥಿತಿ–ಗತಿಗಳನ್ನು ಸ್ವತಃ ಅನುಭವಿಸಿ, ಕಣ್ಣಾರೆಕಂಡವರು. ಆ ಜನಾಂಗದ ಆರ್ಥಿಕ, ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಇನ್ನೂ ಮುಂತಾದ ರಂಗದಲ್ಲಿ ಈ ಸಮಾಜವನ್ನು ಮುಂಚೂಣಿಗೆ ತರುವ ಹಲವಾರು ಪ್ರಯತ್ನಗಳನ್ನು ಮಾಡಿದ್ದಾರೆ.

"ಸಿ.ಕೆ.ಪಿ. ಅವರು ಕರ್ನಾಟಕ ಕುರುಬ ಜನಾಂಗದ ಪರಂಪರೆಯ 'ಜಂಗಮ'ರೂ ಹೌದು. ನಮ್ಮೆದುರಿಗೆ ನುಗ್ಗಿ ಬರುತ್ತಿರುವ ಜಾಗತೀಕರಣಕ್ಕೆ ಪ್ರತಿರೋಧವಾಗಿ ತಮ್ಮ ದೇಸೀಯ ಜ್ಞಾನ ಪರಂಪರೆಯನ್ನು ಮರುಶೋಧಿಸಿ ಆ ಮೂಲಕ ಕುಸಿಯುತ್ತಿರುವ ನಮ್ಮ ಬೇರುಗಳನ್ನು ಬಲಗೊಳಿಸಿಕೊಳ್ಳಬೇಕಾಗಿದೆ. ಆಧುನಿಕ ವಿಜ್ಞಾನ, ತಂತ್ರಜ್ಞಾನವೇ 'ಜ್ಞಾನ' ಎಂದು ರೂಪಿಸಿರುವ ಇಂದಿನ ಆಲೋಚನೆಗೆ ಪ್ರತಿಯಾಗಿ ಈ ಜ್ಞಾನ ಶಾಖೆಯಲ್ಲಿ ಹುದುಗಿರುವ ದೇಸೀ ಪರಂಪರೆಯ ಜ್ಞಾನದ ಹುಡುಕಾಟ ನಡೆಯಬೇಕಾಗಿದೆ."[೪] ಈ ಮಾತು ಸತ್ಯವಾಗಿದೆ. ಮನುಕುಲದ ವಿಕಾಸ ಆರಂಭವಾದದ್ದೇ ಪಶುಪಾಲಕರ ಹಟ್ಟಿಯಲ್ಲಿ ಎಂಬ ಸಂಗತಿ ಅಧ್ಯಯಗಳಿಂದ ದೃಢಪಟ್ಟಿರುವಾಗ ದೇಶದಲ್ಲಿ ದನಗಾರರಾಗಿ ಚದುರಿ ಹೋಗಿರುವ ಕುರುಬ ಸಮುದಾಯದ ಸಂಸ್ಕೃತಿಯ ಬೇರುಗಳನ್ನು ಹೆಕ್ಕುವಲ್ಲಿ ಸಿ.ಕೆ.ಪಿ. ಅವರು ಸ್ವತಃ ಬರೆದು ಪ್ರಕಟಿಸಿದ 'ಚೌಡಿಕೆಯರು', 'ದಲಿತ ಧಮನಿ', ನನ್ನ ವಚನಗಳು' ಇನ್ನಿಬ್ಬರ ವಿದ್ವಾಂಸರೊಡನೆ ಸಂಪಾದಿಸಿದ 'ತಗರ ಪವಾಡ' ಗಾದೆಗಳ 'ಅಂತರಂಗ' ಕೃತಿಗಳನ್ನು ಅವಲೋಕಿಸುವ ಮೂಲಕ ಮತ್ತು ಜನಾಂಗದ ಸಂಸ್ಕೃತಿಯನ್ನು ದಾಖಲಿಸುವ ನಿಟ್ಟಿನಲ್ಲಿ ಅವರ ಪ್ರಾಮಾಣಿಕ ಕಾಳಜಿ ಮೆಚ್ಚುವಂತದ್ದು. ಅಷ್ಟೇ ಅಲ್ಲದೆ ಸಿ.ಕೆ.ಪಿ. ಅವರು ಮೂರನೆಯ ಹಾಲುಮತ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದರು.

ಸಿ.ಕೆ.ಪಿ. ಅವರ ಸಾಹಿತ್ಯಿಕ ಸಾಧನೆಗಳು :

ವೃತ್ತಿಯಲ್ಲಿ ಸರ್ಕಾರಿ ಅಧಿಕಾರಿಯಾಗಿದ್ದರೂ ಪ್ರವೃತ್ತಿಯಲ್ಲಿ ಅಪ್ಪಟ ಸಾಹಿತಿಯಾಗಿ ಬೆಳೆದದ್ದು ಪರಶುರಾಮಯ್ಯನವರ ಒಂದು ಹೆಗ್ಗಳಿಕೆ. ವಿದ್ಯಾರ್ಥಿ ದೆಸೆಯಲ್ಲಿ ತಾವು ಓದಿದ ಸಾಹಿತ್ಯ ಕೇವಲ 'ಸರ್ಕಾರಿ ಸಾಹಿತ್ಯ' ಎನ್ನುವ ಮಟ್ಟಕ್ಕೆ ಉಳಿಯದೆ ಬಳಕೆಯಾಗಿದೆ. ಸ್ವತಃ ಸೃಜನಶೀಲ ಬರಹಗಾರರಾಗಿ ರೂಪುಗೊಂಡ ಪರಿ ಅಚ್ಚರಿ ಹುಟ್ಟಿಸುತ್ತದೆ. ಸ್ವತಃ ಕವಿಯಾಗಿ, ಆಧುನಿಕ

ವಚನಕಾರರಾಗಿ, ಜನಾಂಗೀಯ ಅಧ್ಯಯನದ ಸಾಂಸ್ಕೃತಿಕ ಸಂಶೋಧಕರಾಗಿ, ಅಭಿವೃದ್ಧಿ ಸಾಹಿತ್ಯದ ನಿರೂಪಕರಾಗಿ ಮತ್ತು ಕನ್ನಡ ಸಂದರ್ಭದಲ್ಲಿಯೇ ವಿಶಿಷ್ಟವೆನಿಸಿದ ಗೌರವಾಭಿನಂದನ ಪತ್ರಗಳ ರಚನೆಕಾರರಾಗಿ ನಾಡಿನ ಗಮನ ಸೆಳೆದರು. ಇದೆಲ್ಲದರ ಜೊತೆಗೆ ಸಿ.ಕೆ.ಪಿ. ಸಾಮಾಜಿಕ ಕಳಕಳಿಯುಳ್ಳ ಉತ್ತಮ ವಾಗ್ಮಿಕೂಡ ಹೌದು ಸಿ.ಕೆ.ಪಿ. ಅವರ ಪೆನ್ನಿನಿಂದ ಇದುವರೆಗೆ ಹರಿದುಬಂದ ಪ್ರಕಟಿತ ಮತ್ತು ಅಪ್ರಕಟಿತ ಬರಹಗಳನ್ನು ಸ್ಥೂಲವಾಗಿ ಹೀಗೆ ವಿಂಗಡಿಸಬಹುದು.

I ಕಾವ್ಯ ರಚನೆ

೧. ದಲಿತ ಧಮನಿ

೨. ನನ್ನ ವಚನಗಳು

II ಗ್ರಂಥಸಂಪಾದನೆ–ಸಂಶೋಧನೆ

೧. ನೀಲಲೋಚನೆಯ ವಚನಗಳು

೨. ತಗರ ಪವಾಡ

III ಗದ್ಯ ಸಾಹಿತ್ಯ

೧. ಚೌಡಿಕೆಯವರು

೨. ಪ್ರಾಚೀನ ಆದರ್ಶ ಬಾಲಕರು

೩. ಗಾದೆಗಳ ಅಂತರಂಗ

೪. ಕರುಳ ಬಳ್ಳಿ

IV ಅಭಿವೃದ್ಧಿ ಸಾಹಿತ್ಯ

೧. ಕರ್ನಾಟಕ ಪ್ರಗತಿ ಪಥ

೨. ತಾಯಂದಿರಿಗೆ ತಿಳಿಯದಿರಲಿ

೩. ಆಧುನಿಕ ಹೈನುಗಾರಿಕೆಯ ನಿರ್ವಹಣೆ

೪. ಭಾರತದಲ್ಲಿ ಸಮುದಾಯ ಅಭಿವೃದ್ಧಿ ಯೋಜನೆ

೫. ನೆಹರು ಮತ್ತು ಸಮುದಾಯ ಅಭಿವೃದ್ಧಿ ಯೋಜನೆ

೬. ಕುಡಿತದ ಗೀಳು, ಬಾಳಿನ ಗೋಳು

V ಲೇಖನಗಳು

೧. ಒಡೆಯರ ಅವರ ಬಂಧುರ ಬಂಧು ಪ್ರೇಮ

೨. ಮರೆಯಲಾಗದ ದಿವ್ಯ ಸ್ಮರಣೆ

೩. ಬಿಳಿಜೋಡಿನ ಗುರು ಚನ್ನಯ್ಯ ಒಡೆಯರ್ ಅವರ ವಂಶಾವಳಿ

೪. ಒಡೆಯರ ಸಂಪ್ರದಾಯದ ಪ್ರಾಚೀನತೆ

೫. ಕರಿಯ ಕಂತೆ

೬. ಮರೆಯಲಾಗದ ಶ್ರೀಗುರು

೭. ತಗರ ಪವಾಡ ಮತ್ತು ಗುರು ಪರಂಪರೆ

೮. ಸಿದ್ಧರಾಮ ಚರಿತೆ : ಕುರುಬರ ಗುರು ಪರಂಪರೆಯನ್ನು ತಿಳಿಸುವ ಕೃತಿ

ಕೊನೆ ಟಿಪ್ಪಣಿಗಳು

೧. ಹಳ್ಳಿಕೇರಿ ಎಫ್.ಟಿ. (ಡಾ)(ಸಂ) ಹಾಲುಮತ ವ್ಯಾಸಂಗ ೩, ಪು. ೨೭೯.

೨. ಅದೇ ಪು. ೨೭೯.

೩. ಅದೇ ಪು. ೨೮೦.

೪. ಅದೇ ಪು. ೨೭೬.

ಅಧ್ಯಾಯ : ಮೂರು

ಸಿ.ಕೆ. ಪರಶುರಾಮಯ್ಯ ಅವರ ಸಮಗ್ರ ಸಾಹಿತ್ಯ

೩.೧. ಕಾವ್ಯ
೩.೨. ಗ್ರಂಥಸಂಪಾದನೆ
೩.೩. ಗದ್ಯ ಸಾಹಿತ್ಯ
೩.೪. ಇತರೆ ಸಾಹಿತ್ಯ
೩.೫. ಲೇಖನಗಳು

ಅಧ್ಯಾಯ – ಮೂರು
ಸಿ.ಕೆ. ಪರಶುರಾಮಯ್ಯನವರ ಸಮಗ್ರ ಸಾಹಿತ್ಯ

ಸಿ.ಕೆ. ಪರಶುರಾಮಯ್ಯನವರು ಸರ್ಕಾರಿ ಕೆಲಸದ ಜೊತೆಗೆ ಸಾಹಿತ್ಯಾಭಿರುಚಿಯನ್ನು ಬೆಳೆಸಿಕೊಂಡು ಹದಿನೈದಕ್ಕೂ ಹೆಚ್ಚು ಕೃತಿಗಳನ್ನು ಮತ್ತು ಅನೇಕ ಲೇಖನಗಳನ್ನು ಬರೆದಿದ್ದಾರೆ. ಇವರು ಬರೆದಿರುವ ಕೃತಿಗಳನ್ನು ಸ್ಥೂಲವಾಗಿ ಕಾವ್ಯ, ಸಂಶೋಧನೆ, ಗದ್ಯ ಸಾಹಿತ್ಯ, ಅಭಿರುಚಿ ಸಾಹಿತ್ಯ ಎಂದು ವಿಂಗಡಿಸಬಹುದಾಗಿದೆ. ಪ್ರಸ್ತುತ ಈ ಅಧ್ಯಾಯದಲ್ಲಿ ಅವರ ಎಲ್ಲ ಕೃತಿಗಳನ್ನು ಮತ್ತು ಲೇಖನಗಳನ್ನು ತೌಲನಿಕವಾಗಿ, ವಿಮರ್ಶಾತ್ಮಕವಾಗಿ ಕಟ್ಟಿಕೊಡುವ ಪ್ರಯತ್ನ ಮಾಡಿದ್ದೇನೆ.

೩.೧. ಕಾವ್ಯ :

ಆಧುನಿಕ ಕನ್ನಡ ಸಾಹಿತ್ಯವನ್ನು ಅಧ್ಯಯನ ದೃಷ್ಟಿಯಿಂದ ನವೋದಯ, ಪ್ರಗತಿಶೀಲ, ನವ್ಯ ಹಾಗೂ ದಲಿತ ಬಂಡಾಯ ಎಂಬುದಾಗಿ ನಾಲ್ಕು ಘಟ್ಟಗಳಲ್ಲಿ ಗುರುತಿಸಲಾಗಿದೆ. ನವೋದಯ ಸಾಹಿತಿಗಳಾದ ಬಿ.ಎಂ.ಶ್ರೀ., ಕುವೆಂಪು, ದ.ರಾ. ಬೇಂದ್ರೆ, ಕೆ.ಎಸ್. ನರಸಿಂಹಸ್ವಾಮಿ, ಮಾಸ್ತಿ, ಡಿ.ವಿ.ಜಿ. ಪ್ರಗತಿಶೀಲ ಸಾಹಿತಿಗಳಾದ ಅ.ನ.ಕೃ., ರಾಮಚಂದ್ರಶರ್ಮ, ಶ್ರೀರಂಗ, ನಿರಂಜನ. ಹಾಗೂ ನವ್ಯ ಸಾಹಿತಿಗಳಾದ ಗೋಪಾಲಕೃಷ್ಣ ಅಡಿಗರು, ಅನಂತಮೂರ್ತಿ, ಪಿ. ಲಂಕೇಶ್, ಶಾಂತಿನಾಥ ದೇಸಾಯಿ ಮತ್ತು ದಲಿತ ಬಂಡಾಯ ಸಾಹಿತಿಗಳಾದ ದೇವನೂರು ಮಹಾದೇವ, ಸಿದ್ಧಲಿಂಗಯ್ಯ ಇನ್ನೂ ಮುಂತಾದವರ ಸಾಹಿತ್ಯವನ್ನು ಅಲ್ಪಸ್ವಲ್ಪ ಓದಿಕೊಂಡು ಅವುಗಳಲ್ಲಿರುವ ಭಾಷಾಶೈಲಿ, ಭಾವಗೀತಾತ್ಮಕ ಲಯ, ಛಂದಸ್ಸು, ನುಡಿಗಟ್ಟು, ಹಾಡುಗಬ್ಬ, ಪ್ರಾಸಪದಗಳು ಮುಂತಾದವುಗಳಿಂದ ಸಿ.ಕೆ. ಪರಶುರಾಮಯ್ಯನವರು ಪ್ರಭಾವಿತರಾಗಿ ತಮ್ಮದೇ ಆದ ಶೈಲಿಯಲ್ಲಿ ಕಾವ್ಯಗಳನ್ನು ಬರೆದಿದ್ದಾರೆ. ಸಿ.ಕೆ.ಪಿ. ಅವರು ಕವಿತೆಗಳನ್ನು ಬರೆದು ನಾಡಿನ ಬೇರೆ ಬೇರೆ

ಪತ್ರಿಕೆಗಳಿಗೆ ಕಳುಹಿಸುತ್ತಿದ್ದರಂತೆ. ಅವು ಪತ್ರಿಕೆಗಳಲ್ಲಿ ಮುದ್ರಣಗೊಂಡಾಗ ಸಂತೋಷಗೊಂಡು ಬರೆಯುತ್ತಾ ಹೋದೆ ಎಂದು ಹೇಳುತ್ತಾರೆ.

ಪ್ರಸ್ತುತ ಸಿ.ಕೆ. ಪರಶುರಾಮಯ್ಯನವರು 'ದಲಿತ ಧಮನಿ', 'ನನ್ನ ವಚನಗಳು' ಎಂಬ ಎರಡು ಕವನ ಸಂಕಲನಗಳನ್ನು ರಚಿಸಿದ್ದಾರೆ.

೧. ದಲಿತ ಧಮನಿ :

ಸಮಾಜದಲ್ಲಿ ಶೋಷಿತ ವರ್ಗದ ಬದುಕಿನ ಕೆಲವು ದುರ್ಬಲ ಸನ್ನಿವೇಶಗಳ ಚಿತ್ರಣ 'ದಲಿತ ಧಮನಿ' ಕೃತಿ. ಈ ಜನರ ಜೀವನವನ್ನು ಕುರಿತ ಇನ್ನೂ ಇಂತಹ ಪ್ರಸಂಗಗಳಿಗೆ ಲೆಕ್ಕವೇ ಇಲ್ಲ. ಸಮಾಜದಲ್ಲಿ ಉಳ್ಳವರು ತಮ್ಮ ಇಲ್ಲದವರ ಬದುಕಿನ ಅಂತರ ದಿನೇ ದಿನೇ ಹೆಚ್ಚುತ್ತ ಸಾಗುತ್ತಿರುವ ಸಂಗತಿ ಮುಚ್ಚಿಡುವಂತಹುದ್ದೇನಲ್ಲ. ಈ ಏರು–ಪೇರು, ತಾರತಮ್ಯವನ್ನು ಪರಿಹರಿಸುವ ಕಾರ್ಯ ಸರ್ಕಾರ ಮತ್ತು ಸಾಮಾಜಿಕ ಸಂಘ–ಸಂಸ್ಥೆಗಳಿಂದ ನಡೆಯುತ್ತಿದೆ. ಆದರೂ ಈ ಕೆಲಸ ನಿರೀಕ್ಷಿತ ಫಲವನ್ನು ನಿರ್ದಿಷ್ಟ ಸುಧಾರಣೆಯನ್ನು ಪರಿಣಾಮಕಾರಿಯಾಗಿ ತರಲು ಸಾಧ್ಯವಾಗಿಲ್ಲ ಎಂಬುದು ಎಲ್ಲರಿಗೂ ತಿಳಿದಿರುವಂತಹ ನೋವಿನ ಸಂಗತಿಯಾಗಿದೆ.

ವಾರ್ತಾ ಮತ್ತು ಪ್ರಚಾರ ಇಲಾಖೆಯ ಅಧಿಕಾರಿಗಳಾಗಿ ಈಗ ನಿವೃತ್ತರಾಗಿರುವ ಸಿ.ಕೆ. ಪರಶುರಾಮಯ್ಯನವರು ತಮ್ಮ ಕಾಲವನ್ನು ಪೂರ್ಣವಾಗಿ ಸಾಹಿತ್ಯಕ್ಕಾಗಿಯೇ ಮೀಸಲಿಟ್ಟಿದ್ದಾರೆ. ಅವರು 'ದಲಿತ ಧಮನಿಯ'ಯನ್ನು ಮಿಡಿಯುತ್ತಿದ್ದಾರೆ. "ಅವರು ಈ ಕಾವ್ಯಗಳಲ್ಲಿರುವ ನೂರೆಂಟು ಕವಿತೆಗಳನ್ನು ನೂರೆಂಟು ಚಿತ್ರಗಳೆಂದೆ ಕರೆದಿದ್ದಾರೆ. ಅವುಗಳನ್ನು ಎರಡು ವರ್ಗಗಳಾಗಿ ವಿಂಗಡಿಸಬಹುದು. ಒಂದು ವರ್ಗ ದಲಿತರ ನೋವಿನ ಚಿತ್ರಗಳು ಮತ್ತೊಂದು ವರ್ಗ ಬಡತನ ಸಿರಿತನಗಳ ಚಿತ್ರಗಳಿಂದ ಕೂಡಿರುವುದು."[೧]

ಪ್ರಸ್ತುತ 'ದಲಿತ ಧಮನಿ' ಸಂಕಲನದಲ್ಲಿ ಮಾನವೀಯ ತುಡಿತವಿರುವ ನೂರೆಂಟು ಆಯ್ದ ಕವನಗಳನ್ನು ಕಟ್ಟಿಕೊಟ್ಟಿದ್ದಾರೆ. "ಸರಳವಾದ ಚಿತ್ರಗಳ ಮೂಲಕ ಹಾಗೆಯೇ ಬಡತನ–ಸಿರಿತನಗಳನ್ನು ಮುಖಾಮುಖಿಯಾಗಿಸುವ ಸಂಕೀರ್ಣ ಚಿತ್ರಗಳ ಮೂಲಕ ಪರಶುರಾಮಯ್ಯನವರ 'ದಲಿತ ಧಮನಿ' ವಿಶಿಷ್ಟ ರೀತಿಯಲ್ಲಿ ಮಿಡಿಯುತ್ತದೆ"[೨] ಈ ಧಮನಿಯಲ್ಲಿ ರೋಷವಿಲ್ಲ, ಹಗೆತನವಿಲ್ಲ, ಹೋರಾಟದ ಕಿಚ್ಚಿಲ್ಲ, ಅನುಕಂಪದ ಅಲೆ ಇದೆ. ಎಲ್ಲದರ ಹಿಂದೆ ಮಾನವರ ನೋವಿಗೆ ಮಿಡಿಯುವ ತುಂಬ ಅಂತಃಕರಣವಿದೆ. ಸರಳವಾಗಿ ನೇರ ಮನಮುಟ್ಟುವ ಕಾವ್ಯದ ಸಾಲುಗಳು ಇಲ್ಲಿವೆ. ಇಲ್ಲಿನ ಪ್ರತಿಯೊಂದು ರಚನೆಯೂ ಸಮಾಜದ ಅವಜ್ಞೆಗೊಳಗಾಗಿದ್ದರೂ ದುಡಿದು, ಉಂಡು, ನೆಲಕ್ಕೆ ತಲೆ ಇಟ್ಟೊಡನೆ ನಿರಾಳವಾಗಿ ನಿದ್ರಿಸುವ ಶ್ರಮಜೀವಿಗಳ ನಿಜ ಚಿತ್ರಗಳನ್ನು

ಕಣ್ಣಮುಂದೆ ನಡೆಯುತ್ತದೆ. ಹೃದಯವಿದ್ದವರು ಮಾತ್ರ ಇಲ್ಲಿ ಅಭಿವ್ಯಕ್ತವಾಗಿರುವ ಬೆವರಿನ ಬೆಲೆಯನ್ನು ಅರಿಯಬಲ್ಲರು.

ಸಾಮಾನ್ಯವಾಗಿ ಆರೇಳು ಅಥವಾ ಎಂಟು ಸಾಲುಗಳ ರಚನೆಗಳೇ ಇಲ್ಲಿವೆ. ಆದರೆ 'ನಮ್ಮವರೆ' ಎಂಬ ಒಂದು ಕವಿತೆ ಇಪ್ಪತ್ತೆಂಟು ಸಾಲಿನದ್ದಾಗಿದ್ದು, ಅದು ಪರಶುರಾಮಯ್ಯನವರ ಈ ಸಂಕಲನದ Manifesto ಇದ್ದಂತಿದೆ. ಈ ಕವಿತೆಯ ಕೆಲವು ಸಾಲುಗಳನ್ನು ಗಮನಿಸಬಹುದು.

> "ನಮ್ಮವರೆ,
> ನಮ್ಮ ಹಟ್ಟಿಯಲ್ಲಿ ಹುಟ್ಟಿ ಬೆಳೆದವರು
> ಮೊನ್ನೆ ಮೊನ್ನೆಯವರೆಗೆ ನಮ್ಮ ಜೊತೆಯಲ್ಲೇ ಇದ್ದವರು
> ಗಾಳಿ ಬಂದಾಗ ತೂರಿಕೊಂಡವರು
> ಗದ್ದುಗೆಗೆ ಏರಿದವರು...
> ....
> ಮೇಲೇರಲು ನೆರವಾದ ವಾಣಿಯನೆ ಒದ್ದವರು
> ಇವರು ನಮ್ಮವರೆ."[೩]

ಕವಿಯ ಸ್ವಾಗತದಂತೆ ತೋರುವ ಆರಂಭದ ಈ 'ನಮ್ಮವರೆ' ಎಂಬ ಪದ್ಯ ಇಡೀ ಸಂಗ್ರಹದ ಧ್ವನಿಯಾಗಿದೆ. ಪುಸ್ತಕಕ್ಕೆ ಮುನ್ನುಡಿ ಬರೆದಿರುವ ಕವಿ ಜಿ.ಎಸ್. ಸಿದ್ಧಲಿಂಗಯ್ಯನವರು ಇದು ಪರಶುರಾಮಯ್ಯನವರ ಈ ಸಂಕಲನದ Manifesto ಇದ್ದಂತಿದೆ ಎಂದು ಅಭಿಪ್ರಾಯಪಟ್ಟಿರುವುದಕ್ಕೆ ನನ್ನದೂ ಸಹಮತವಿದೆ.

ಮೊದಲ ಮೂರು ಸಾಲುಗಳು ಜೊತೆಯಲ್ಲಿ ಬೆಳೆದವರ ರೀತಿಯನ್ನು ಚಿತ್ರಿಸಿದರೆ, ಕೊನೆಯ ಎರಡು ಸಾಲುಗಳಲ್ಲಿ ಮೊದಲನೆಯ ಸಾಲು ಸ್ವಾರ್ಥದ ಕಾರಣವಾಗಿ ಕೆಲವರು ನೆರವಾದವರನ್ನೆ ತುಳಿದು ನಾಶಮಾಡುವ ದಾಷ್ಟ್ಯ-ಕ್ರೌರ್ಯಗಳನ್ನು ಧ್ವನಿಸುತ್ತವೆ. ಮುಂದಿನ ಸಾಲು ಅಂಥವರನ್ನು ನಮ್ಮವರೆ ಎಂದು ನೋವಿನಿಂದ ಒಪ್ಪಿಕೊಳ್ಳುವ ದಲಿತ ಧಮನಿಯ ಅನುಕಂಪವನ್ನು ಸೂಚಿಸುತ್ತದೆ. ಒಂದರ್ಥದಲ್ಲಿ ಈ ಪದ್ಯ 'ದಲಿತ ಧಮನಿ'ಯ ಪ್ರಾತಿನಿಧಿಕ ಮಿಡಿತವಾಗಿದೆ ಎನ್ನಬಹುದು.

ಇಲ್ಲಿ ಸಂಗ್ರಹಿಸಲಾದ ನೂರೆಂಟು ಪದ್ಯಗಳು, ನೂರೆಂಟು ಪುಟಗಳ ಮಿತಿಯಲ್ಲಿಯೇ ಪುಟಕ್ಕೊಂದು ಪದ್ಯದಂತೆ ಅಡಕವಾಗಿರುವುದು ವಿಶೇಷ. ಮಾನವೀಯ ಅನುಕಂಪ, ಹಸಿವು, ಸಾಮಾಜಿಕ ಅಸಮಾನತೆ, ಶೋಷಣೆ ಇಲ್ಲಿನ ಬಹುತೇಕ ಪದ್ಯಗಳ ಆತ್ಮವಾಗಿದೆ. ವರ್ಗ-ದಲಿತರ ನೋವಿನ ಚಿತ್ರಗಳನ್ನು ಹರಳು ಗಟ್ಟಿಸುವಂತೆ ತಮ್ಮ ಪದ್ಯಗಳಲ್ಲಿ ಸಿ.ಕೆ.ಪಿ. ಅವರು ಕಟ್ಟಿಕೊಡುತ್ತಾರೆ.

ಈ ವರ್ಗಕ್ಕೆ ಸಂಬಂಧಿಸಿದಂತೆ "ಹಸಿವ ಮರೆತಳು ತಾಯಿ" ಎಂಬ ಪದ್ಯವೊಂದನ್ನು ಗಮನಿಸಬಹುದು.

"ದಿನವೆಲ್ಲ ಕೂಲಿ ಕುಂಬಳ ಮಾಡಿ
ಮನೆ ಬಾಗಿಲಿಗೆ ಬಂದೊಡನೆ
ಕಾಲಿಗೆ ಸುತ್ತಿದ ಕರುಳ ಬಳ್ಳಿಯನೆತ್ತಿ
ಮುದ್ದಾಡಿ, ತೂಪಿರಿದು
ಶಿರವವಾಘ್ರಾಣಿಸಿ,
ಹೊಸ್ತಿಲಲೆ ಕುಳಿತು ಮೊಲೆಯೂಡಿಸುತ
ಹಸಿವ ಮರೆತಳು ತಾಯಿ"[೪]

ಇದೊಂದೆ ಪದ್ಯ ಸಾಕು ಸಿ.ಕೆ.ಪಿ. ಅವರ ಕಾವ್ಯ ಧೋರಣೆಗೆ ಉತ್ತಮ ನಿದರ್ಶನವಾಗಿ ಮೇಲಿನ ಪದ್ಯ ಕರುಳು ಮಿಡಿಯುವಂಥದ್ದು. ಕೂಲಿ ಮಾಡಿ ಬಂದರೂ ಹಸಿವನ್ನು ಹಿಂಗಿಸಲು ಸಾಧ್ಯವಿಲ್ಲದ ಬಡತನವನ್ನು ಒಂದೆಡೆ ಧ್ವನಿಸಿದರೆ, ಅಂಥ ದಾರಿದ್ರ್ಯದಲ್ಲೂ 'ಬದುಕಿನ ದ್ರವ್ಯ' ತಾಯ್ತನವಾಗಿ ಉಣ್ಣುವುದನ್ನೂ ಮತ್ತು ತಾಯ್ತನದಲ್ಲೇ ಧನ್ಯತೆ, ತೃಪ್ತಿಯನ್ನು ಅನುಭವಿಸುವ, ಬಡತನದಲ್ಲೂ ಬದುಕುವಂಥ ಮಹಾಸತ್ವವಾಗಿ ಇರಬಲ್ಲದು ಎಂಬುದನ್ನು ಸೂಚಿಸುವಂತೆ ಇನ್ನೂ ಈ ಸಂಕಲನದ ಕಡೆಯ ರಚನೆಯಲ್ಲಿ ಬರುವ ಬಡವರ ಒಡಲಿನಾಳದ ಬವಣೆ-ಬೇಗುದಿ, ದುಗುಡ-ದುಮ್ಮಾನ, ಕಷ್ಟ-ಸಂಕಷ್ಟಗಳನ್ನು ಒಡೆದು ವಿವರಿಸಿ, ಬಗೆದು ಬಣ್ಣಿಸಲು ಹೊರಟರೆ ಪುಟಗಳು ಸಾಲವು, ಸಂಪುಟಗಳು ಸೋಲುವವು' ಎಂಬ ಮಾತುಗಳನ್ನು ಬಡತನದ ಘೋರ ದುರಂತವನ್ನು ಹತ್ತಿರದಿಂದ ಕಂಡಿರುವ ಸಿ.ಕೆ.ಪಿ. ಅವರಂತಹ ಸಂವೇದನಾಶೀಲ ಹೃದಯಗಳು ಮಾತ್ರ ಅರಿಯಬಲ್ಲವು.

ಇನ್ನೂ ನಾಲ್ಕನೆಯ ಪದ್ಯವಾಗಿರುವ "ತತ್ತರಿಸಿ ಬಾಲೆಯ ಬಡದೇಹ" ಎಂಬ ಪದ್ಯದಲ್ಲಿರುವ ಚಿತ್ರ ಸ್ವಲ್ಪ ವಿಭಿನ್ನವಾದದ್ದೆಂದೇ ಹೇಳಬೇಕು. ಕಾಂಕ್ರೀಟು ತುಂಬಿದ ಬಾಣಂತಿಯನ್ನು ಹೊರಲಾರದೆ ಹೊತ್ತು ಸಾರುವೆಯ ಮೆಟ್ಟಿಲನ್ನು ನರಳಿ ನರಳಾಡುತ್ತಿರುವ ಸೊರಗಿದ ಬಾಲೆಯನ್ನು ನಮ್ಮೆದುರು ನಿಲ್ಲಿಸುತ್ತದೆ. ಹರಕು ಚಿಂದಿಯನ್ನು ಹೊದ್ದು ಭಿಕ್ಷೆಗಾಗಿ ಕೊರಗುತ್ತಿರುವ ನತದೃಷ್ಟ ಕಂದನ ಚಿತ್ರಣವನ್ನು ಈ ಪದ್ಯದಲ್ಲಿ ಕೊಡುತ್ತಾರೆ. ಮತ್ತೊಂದು ಪದ್ಯ "ಸೊಪ್ಪು ಮಾರುವ ಹೆಂಗಸು" ಎಂಬ ಪದ್ಯದಲ್ಲಿ ದುಡಿಯುವ ಹೆಣ್ಣಿನ ಚಿತ್ರಣ ಕೊಡುತ್ತಾರೆ.

"ಸಂತೆ ಜನ ಕರಗುತಿದೆ
ಕತ್ತಲಾಗುತಿದೆ

ಬಿಕರಿಯಾಗದೆ ಉಳಿದು ಬಾಡಿದ
ಸೊಪ್ಪಿನ ಕಂತೆಗಳನು
ಎತ್ತಿ ತುಂಬಿತಿಹಳು ಮಂಕರಿಗೆ
ಸಪ್ಪೆ, ಮೋರೆಯ, ಸೊರಗಿದ ದೇಹದ
ಸೊಪ್ಪು ಮಾರುವ ಹೆಂಗಸು"[೫]

ಬೆಳಗಿನಿಂದ ಸಂಜೆಯವರೆಗೆ ಸೊಪ್ಪಿನ ವ್ಯಾಪಾರ ಮಾಡಿ ಸಂತೆ ಮುಗಿದಾಗ ಮಾರಾಟವಾಗದ ಅಳಿದು–ಉಳಿದ ಸೊಪ್ಪಿನ ಕಂತೆಗಳನ್ನು ಮಂಕರಿಗೆ ತುಂಬುತ್ತಿರುವ ಸಪ್ಪೆಮೋರೆಯ ಸೊರಗಿದ ದೇಹದ ಸೊಪ್ಪು ಮಾರುವ ಹೆಂಗಸಿನ ಚಿತ್ರಣವನ್ನು ಕೊಡುತ್ತಾರೆ.

"ನಾಳೆಗಿಟ್ಟರೆ ಮತ್ತಷ್ಟು ನಷ್ಟ
ಕೂಗಿ ಕೂಗಿ ಅಗ್ಗದ ಬೆಲೆಗೆ ಮಾರುತಿಹರು
ಲಾಭ–ನಷ್ಟವನು ಲೆಕ್ಕಿಸದೆ
ಹೂವು–ಹಣ್ಣು, ಸೊಪ್ಪು–ಸೆದೆ
ಕಾಯಿಪಲ್ಲೆಗಳನು
ಅಸಹಾಯಕ ಬೆಳೆಗಾರರು"[೬]

ಹೂವು, ಹಣ್ಣು, ಸೊಪ್ಪು, ಸೆದೆ, ಕಾಯಿಪಲ್ಲೆಗಳನ್ನು ಬೆಳೆದು ಸರಿಯಾದ ಬೆಲೆ ಸಿಗದೆ ಅಸಹಾಯಕರಾದ ಬೆಳೆಗಾರರನ್ನು ಕುರಿತು ಇಲ್ಲಿ ಚರ್ಚಿಸಲಾಗಿದೆ.

ಈ ಮೇಲಿನ ಎಲ್ಲ ಪದ್ಯಗಳಲ್ಲೂ ಕರುಳನ್ನು ಮಿಡಿಯುವ ಚಿತ್ರಗಳನ್ನೇ ನೀಡುತ್ತಾರೆ. ಇಲ್ಲೆಲ್ಲಾ ಪರಶುರಾಮಯ್ಯನವರು ಅಂತಃಕರಣ ತುಂಬಿದ ಕಣ್ಣಾಗಿದೆ. ಮಾತುಗಳೆಲ್ಲ ಅವರ ನೋವು, ನರಳಿಕೆಗಳತ್ತಲೇ ಗಮನ ಹರಿಸುತ್ತವೆ. ಇಂಥವೇ ಚಿತ್ರಗಳು ಇನ್ನೂ ಹಲವಾರಿವೆ. ಈ ಸಂಕಲನದ್ದಲ್ಲಿ ಉದಾಹರಣೆಗೆ : 'ಬೇಡುವ ಜೀವಿಗೆ ಕಾಡುವ ರೋಗ', 'ಕರುಳ ಹಂಬಲ', 'ಹೆಣವಾದ ಕಾರ್ಮಿಕ' ಈ ಪದ್ಯಗಳಲ್ಲಿ ಬಡತನದ ಅಸಹಾಯಕ ಸ್ಥಿತಿಯ ಚಿತ್ರಣ ನೀಡುತ್ತಾರೆ.

ಇನ್ನು ಬಡತನ, ಸಿರಿತನವನ್ನು ಮುಖಾಮುಖಿಯಾಗಿಸುವ ಚಿತ್ರಣಗಳನ್ನು ಗಮನಿಸಬಹುದು.

"ಓಣಿ ಓಣಿಯಲ್ಲು
ದೀಪಾವಳಿಯ ಸಡಗರ
ಝುಗ ಝುಗಿಸುವ ದೀಪಾಲಂಕಾರ
ಬಣ್ಣ ಬಣ್ಣದ ಉಡುಗೆ ತೊಡುಗೆಗಳ ತೊಟ್ಟು,

ರಂಗು ರಂಗಿನ ಪಟಾಕಿ
ಹೂಬಾಣ ಬಿರುಸುಗಳ ಹಚ್ಚಿ
ಕುಣಿದು ಕುಪ್ಪಳಿಸುತಿಹವು ಮಕ್ಕಳು
ನಕ್ಕು ನಲಿಯುತಿಹರು ಹೆತ್ತವರು
ಅರೆ ಸುಟ್ಟು ಪುಸ್ಸೆಂದು ಪಟಾಕಿ
ಕಾಗದದ ಸುರುಳಿ, ಪೊಟ್ಟಣಗಳ
ಆಯ್ದು ರಾಶಿ ಹಾಕಿ ಬೆಂಕಿ ಹೊತ್ತಿಸಿ
ಕೇಕೆ ಹಾಕುತಿಹವು ಸಂತಸದಿ
ಪಕ್ಕದ ಕೊಳೆಗೇರಿಯ ಮಕ್ಕಳು"[೭]

ಈ ಕವಿತೆ ಸಿರಿತನ ಪ್ರಾಪ್ತವಾಗಿರುವ ಸಂಭ್ರಮದ ಎದುರು ಬಡತನ ತನ್ನ ದಾರುಣ ಸ್ಥಿತಿಯಲ್ಲೇ ತೃಪ್ತಿಪಟ್ಟುಕೊಳ್ಳುವ ಬಡತನದ ಅಸಹಾಯಕತೆಯನ್ನು ತಿಳಿಸುತ್ತದೆ. ಊರಿನ ಎಲ್ಲ ಬೀದಿಗಳಲ್ಲೂ ದೀಪಾವಳಿಯ ಹಬ್ಬ. ಅಲ್ಲಿ ಶ್ರೀಮಂತ ಮಕ್ಕಳು ಹೊಸ ಹೊಸ ಬಟ್ಟೆ ಧರಿಸಿ, ಹಲವು ಬಗೆಯ ಪಟಾಕಿಗಳ ಸಂತೋಷದಿಂದ ಹಚ್ಚುವರು. ತನ್ನ ಮಕ್ಕಳ ಸಂತೋಷವನ್ನು ಕಂಡು ಸಿರಿವಂತ ತಂದೆ-ತಾಯಿಗಳು ನಕ್ಕು-ನಲಿಯುವರು. ಅದೇ ಬಡಮಕ್ಕಳು ಶ್ರೀಮಂತ ಮಕ್ಕಳು ಅರೆಬರೆ ಸುಟ್ಟ ಪಟಾಕಿಗಳನ್ನು ರಾಶಿಮಾಡಿ, ಬೆಂಕಿಹಚ್ಚಿ ಸಂತೋಷಪಡುತ್ತಾರೆ.

"ಮನೆಯೊಡತಿಯ ಹದಿನಾಲ್ಕರ ಹರೆಯದ ಮಗಳಿಗೆ
ಮೈನೆರೆದ ಒಸಗೆಯ ಸಡಗರ
ಅರಿಸಿನ ಎಣ್ಣೆಯ ಮಜ್ಜನ
ಹೊಸ ಸೀರೆ ಒಡವೆಯ ಸಿಂಗಾರ
....
ತೇಲಿಬಂದು ಮರೆಯಾಯಿತು
ಕರುಳ ಕುಡಿಯ ಮುಗ್ಧಮೊಗ
ಮೂಲೆಯಲಿ ಕುಳಿತಿದ್ದ ಆ ತಾಯಿಯ ಮನದ ತೆರೆಯ ಮೇಲೆ"[೮]

ಈ ಕವಿತೆಯ ಚಿತ್ರ ಮಗಳು ಮೈನೆರೆದುದನ್ನು ಒಂದು ಹಬ್ಬವಾಗಿಸುವ ಶ್ರೀಮಂತಿಕೆಯ ಆಚರಣೆಯ ಡೌಲು-ದಿಮಾಕಗಳನ್ನು ಒಂದೆಡೆಗಿಟ್ಟಿದೆ. ಅದಕ್ಕೆ ಮುಖಾಮುಖಿಯಾಗಿಸುವುದು ಅಂಥದೇ ಸ್ಥಿತಿಯ ಬಡತನದ ಕನ್ಯೆ. ಕೂಲಿಯ ಕೆಲಸದಲ್ಲಿ ನಿರತಳಾಗಿ ನವೆಯುವುದನ್ನು ಈ

ಬಡ ಕನ್ಯೆಯ ತಾಯಿಯ ಕಣ್ಣೆದುರು ಎರಡೂ ಚಿತ್ರಗಳು ಒಂದಾದ ಮೇಲೊಂದು ಸುಳಿದಾಡುವುದು. 'ದಲಿತ ಧಮನಿಯ' ನೋವಿನ ತುಡಿತವನ್ನು ಮಿಡಿಯುತ್ತವೆ. ಇಲ್ಲಿಯ ಚಿತ್ರಗಳಲ್ಲಿ ಸಿರಿತನ-ಬಡತನಗಳ ಮುಖಾಮುಖಿ ಆದರೂ ಅವು ಬಡತನದ ದೀನಸ್ಥಿತಿಗೆ ಒತ್ತು ನೀಡುತ್ತವೆ.

"ದುಡಿದುಂಡ ಗಂಜಿಯಲೆ
ಅಮೃತದ ಸವಿ ಕಂಡು
ನೆಲಕೆ ತಲೆಯನೊಡ್ಡಿದ ಮರು ಘಳಿಗೆಯಲೆ
....
ಕಣ್ ರೆಪ್ಪೆ ಕೂಡಿಸಲಾಗದೆ
ತೊಳಲಾಡುತಿಹುದು;
ವಣಿಕ, ಧನಿಕ, ರಾಜಕಾರಣಿ ವರ್ಗ"[೯]

ಈ ಪದ್ಯದ ಚಿತ್ರ ಈ ಧಮನಿಯ ಇನ್ನೊಂದು ಮಿಡಿತದಲ್ಲಿ ದುಡಿದ ಗಂಜಿಯ ಅಮೃತವುಂಡು ಸುಖ ನಿದ್ದೆಯಲಿ ಮುಳುಗುವ ದುಡಿಮೆಯ ವರ್ಗದ ಬದುಕಿನ ತೃಪ್ತಿಯನ್ನೂ, ಶ್ರೀಮಂತಿಕೆಯಲ್ಲಿದ್ದು ಅಂತಸ್ತು, ಅಧಿಕಾರಗಳ ಗುಂಗಿನಲ್ಲಿ ಅತೃಪ್ತವಾಗಿರುವ ವಣಿಕೆ, ಧನಿಕೆ, ರಾಜಕಾರಣಿ ವರ್ಗದ ನರಳಿಕೆಯನ್ನು ಸೂಚಿಸುತ್ತದೆ. ಬಡತನದಲ್ಲಿ ತೃಪ್ತಿಪಟ್ಟುಕೊಳ್ಳುವುದು ಸಾಧ್ಯ ಅನಿಸಿದರೂ ಆ 'ತೃಪ್ತಿ' ಅಲ್ಪ ತೃಪ್ತಿಯಾಗಿ ಶ್ರೀಮಂತ ವರ್ಗದ ಶೋಷಣೆಗೆ ಅವಕಾಶವಾಗುವುದಿಲ್ಲವೆ ಅನ್ನಿಸಿಬಿಡಬಹುದು.

ಬದುಕನ್ನು ಜನರ ಸ್ಥಿತಿಗತಿಗಳನ್ನು ಕುರಿತ ಇಂತಹ ಬರವಣಿಗೆಗಳು ಈಗಾಗಲೇ ಸಾಕಷ್ಟು ಬಂದಿವೆ. ಆದರೂ ಸಾಮಾಜಿಕ ಬದಲಾವಣೆಗೆ ಪ್ರೇರಣೆ ನೀಡಬಹುದಾದ ಇಂತಹ ಪ್ರಯತ್ನಗಳು ನಿರಂತರವಾಗಿ ಸಾಗುತ್ತಲೇ ಇರಬೇಕಾಗುತ್ತದೆ. ಇದರಿಂದ ಕೆಲವರಲ್ಲಾದರೂ ಜಾಗೃತಿ ಮೂಡಿ ಈ ವರ್ಗದ ಸುಧಾರಣೆಗೆ ಪ್ರೇರಣೆ ದೊರೆತರೆ ಈ ಪ್ರಯತ್ನಗಳು ಸಾರ್ಥಕವಾಗುತ್ತವೆ. ಅಂತಹ ಕಿರು ಪ್ರಯತ್ನವೇ "ದಲಿತ ಧಮನಿಯ" ಅಂತರಾಳದ ಧ್ವನಿ.

೨. ನನ್ನ ವಚನಗಳು :

"ವಿಶ್ವ ಸಾಹಿತ್ಯದಲ್ಲಿ ಕನ್ನಡಕ್ಕೊಂದು ಗೌರವದ ಸ್ಥಾನವನ್ನು ಕೊಟ್ಟ ಕೀರ್ತಿ ವಚನ ಸಾಹಿತ್ಯಕ್ಕೆ ಸಲ್ಲುತ್ತದಷ್ಟೆ. ಅದು 'ಬಸವ ಯುಗ', 'ಸಿದ್ಧಲಿಂಗೇಶ್ವರ ಯುಗ', 'ಸಿದ್ಧಯ್ಯ ಪುರಾಣಿಕ ಯುಗ'ಗಳೆಂಬ ಹಲವು ಹಂದರಗಳಲ್ಲಿ ಹಬ್ಬಿ, ಹರಡಿ ಹೊಸ ಕುಡಿಯೊಡೆದು ದಾಂಗುಡಿಯಾಡುತ್ತಾ ಬಂದಿರುವುದನ್ನು ಕುರಿತು ಅದರ ಅಂತಸತ್ವ ಹಾಗೂ ವಿನೂತನ ಶಿಲ್ಪ ಇವು ಸಾಕ್ಷಿ ಹೇಳುತ್ತವೆ"[೧೦]

ಈ ಪುಣ್ಯ ಪರಂಪರೆಯಲ್ಲಿ ಕಳೆದ ಯುಗದ ಕೊಂಡಿಯಾಗಿ, ಹೊಸ ಯುಗದ ಹೊಣೆಹೊತ್ತು ಬಂಡಿಯಾಗಿ ಪರಶುರಾಮಯ್ಯನವರ "ನನ್ನ ವಚನಗಳು" ಪಥಸಂಚಲನದಲ್ಲಿ ತೊಡಗಿದ್ದಾರೆ. ಶ್ರೀಯುತರ ಇಲ್ಲಿನ ರಚನೆಯಲ್ಲಿ ಕಸುವಿದೆ, ಕಾಂತಿಯಿದೆ, ಬೋಧೆಯಿದೆ, ಜೀವನ ದರ್ಶನವಿದೆ.

ಸಿ.ಕೆ. ಪರಶುರಾಮಯ್ಯನವರು ಕೆಲಸದ ನಡುವೆಯೂ "ಚೌಡಿಕೆಯ ಜೋಗಿ" ಎಂಬ ಅಂಕಿತದಲ್ಲಿ ಆಗಾಗ ವಚನಗಳನ್ನು ರಚಿಸುತ್ತಾ ಬಂದರೆಂದು ಹೇಳುತ್ತಾರೆ. ಅವರ ಹಲವಾರು ಉಪನ್ಯಾಸಗಳಲ್ಲಿ ಈ ವಚನಗಳನ್ನು ಉದಾಹರಿಸುತ್ತಾರೆ. ಈ ವಚನಗಳನ್ನು ಅವರಿಂದ ಓದಿಸಿ ಕೇಳಿ ಮೆಚ್ಚುಗೆ ವ್ಯಕ್ತಪಡಿಸಿದವರಲ್ಲಿ ಖ್ಯಾತ ಸಾಹಿತಿ ಡಾ. ಸಾ.ಶಿ. ಮರುಳಯ್ಯನವರು, ಮಿತ್ರ ಪ್ರಾ. ಮೊಹಮ್ಮದ್‌ಫೈರುದ್ಧೀನ್ ಹಾಗೂ ಸೋದರ ಅಳಿಯ ಡಾ. ಸಿ.ಎಂ. ರಮೇಶ್ ಪ್ರಮುಖರು. ಡಾ. ಮರುಳಯ್ಯನವರು ಇಲ್ಲಿನ ಹಲವಾರು ವಚನಗಳನ್ನು ಮತ್ತೆ ಮತ್ತೆ ಆಲಿಸಿ ಅವುಗಳನ್ನು ಓರೆ–ಕೋರೆಗಳನ್ನು ತಿದ್ದಿ ಔದಾರ್ಯವನ್ನು ತೋರಿದ್ದಾರೆ.

ಈ ವಚನಗಳಿಗೆ ಸಿ.ಕೆ.ಪಿ. ಅವರು ಕೊಟ್ಟಿರುವ ಅಂಕಿತದ ಬಗ್ಗೆ ಹೀಗೆ ಹೇಳುತ್ತಾರೆ. "ಸಾಮಾನ್ಯವಾಗಿ ಪ್ರಾಚೀನ ವಚನಕಾರರಾದಿಯಾಗಿ ಎಲ್ಲಾ ಆಧುನಿಕ ವಚನಕಾರರೂ ತಮ್ಮ ರಚನೆಗಳಿಗೆ ತಮ್ಮ ಇಷ್ಟ ದೈವದ ಅಂಕಿತವನ್ನು ಇಡುವುದು ಸಂಪ್ರದಾಯ. ನನ್ನ ವಚನಗಳಿಗೆ ಕೊಟ್ಟಿರುವ "ಚೌಡಿಕೆಯ ಜೋಗಿ" ಅಂಕಿತವೂ ಈ ಸಂಪ್ರದಾಯವನ್ನೇ ಅನುಸರಿಸಿದೆ. ನನ್ನ ಮನೆತನದ ಆರಾಧ್ಯ ದೇವತೆ ರೇಣುಕಾ ಎಲ್ಲಮ್ಮ ದೇವಿಯ ಸ್ತುತಿಗೀತೆಗಳನ್ನು ಹಾಡುವ ಆ ದಿವ್ಯ ಶಕ್ತಿಯ ಮಹಿಮೆಗಳನ್ನು ಮೈದುಂಬಿ ಹೊಗಳುವ ಕಲಾವಿದರೇ ಚೌಡಿಕೆಯ ಜೋಗಿಗಳು. "ಚೌಡಿಕೆ" ಎಂಬ ವಿಶಿಷ್ಟವಾದ ತಂತಿವಾದ್ಯವನ್ನು ವಿವಿಧ ಏರಿಳಿತಗಳಲ್ಲಿ ನುಡಿಸುತ್ತಾ ಹಾಡುವ ಗೀತೆ–ಕಥೆಗಳಿಗೆ ಜಾನಪದ ಗೀತೆ ಕ್ಷೇತ್ರದಲ್ಲಿ ವಿಶೇಷ ಸ್ಥಾನವಿದೆ. ವಾಗ್ದೇವಿಯ ಕರುಣೆಯಿಂದ ರಚಿಸಿರುವ ನನ್ನ ಈ ವಚನಗಳಿಗೆ ನನ್ನ ಕುಲದೇವತೆಯನ್ನು ಸ್ತುತಿಸುವ ಚೌಡಿಕೆ ಜೋಗಿಯ ಅಂಕಿತವನ್ನು ಇಟ್ಟಿರುವುದು ಅರ್ಥಪೂರ್ಣವಾಗಿದೆ ಎಂದು ಭಾವಿಸಿದ್ದೇನೆ" ಎಂದು ಹೇಳುತ್ತಾರೆ.

ಸಿ.ಕೆ.ಪಿ. ಅವರು ಕಂಡ ವ್ಯಕ್ತಿ ಮತ್ತು ಸಂದರ್ಭಗಳನ್ನು ಸುಲಲಿತವಾದ ಭಾಷೆಯಲ್ಲಿ ಸಾಮಾನ್ಯ ಸಹೃದಯರಿಗೂ ಸಹ ಅರ್ಥವಾಗುವ ರೀತಿಯಲ್ಲಿ ವಚನಗಳನ್ನು ಬರೆದಿದ್ದಾರೆ. ಅವುಗಳೆಂದರೆ

"ನಿ ತಿಳಿದಷ್ಟು ದೊಡ್ಡವನು ನೀನಲ್ಲ
ಅದರರಿವು ನಿನಗಿಲ್ಲ
ಮಧ್ಯಾಹ್ನದುರಿಬಿಸಿಲಿನಲಿ

ನಿನ್ನ ಪದತಲದಲೆ
ಕರಿಮುದ್ದೆಯಾಗಿ ಬಿದ್ದು
ಮೇಲೇರಲಾರದೆ ಹೊರಳುವ
ನೆಳಲ ನೋಡಿ ತಿಳಿ
ನೀನೆಂಥ ಕುಬ್ಜನೆಂಬ
ಸತ್ಯವನೆಂದ ಚೌಡಿಕೆಯ ಜೋಗಿ"೧೧

ಇಲ್ಲಿ ಲೇಖಕರು ಮೇಲ್ನೋಟಕ್ಕೆ ವ್ಯಕ್ತಿ ಬಾಹ್ಯ ಸ್ಥಿತಿಯ ಬಗ್ಗೆ ಹೇಳಿದಂತೆ ಕಂಡರೂ, ಒಳಗೆ ಹೊಕ್ಕು ನೋಡಿದರೆ ವ್ಯಕ್ತಿಯ ಆಂತರಿಕ ಮನಸ್ಥಿತಿಗೆ ಕೈಗನ್ನಡಿ ಹಿಡಿದಿದ್ದಾರೆ. ಮನುಷ್ಯ ಆರ್ಥಿಕವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ, ಶೈಕ್ಷಣಿಕವಾಗಿ ಎಷ್ಟು ಮುಂದುವರೆದಿದ್ದರೂ ಸಹ ಅವನ ಸಾಧನೆಗೆ ಕೊನೆಯೇ ಇಲ್ಲ. ಅವನು ಸಾಧಿಸಬೇಕಾಗಿದ್ದು ಇನ್ನೂ ಬಹಳ ಇದೆ ಎಂದಿದ್ದಾರೆ. ವ್ಯಕ್ತಿ ತನ್ನ ಸಾಧನೆ ಮಟ್ಟ ಎಷ್ಟಿದೆ ಎಂದು ತಿಳಿಯಲು ತನಗಿಂತ ಹೆಚ್ಚಿನ ಸಾಧನೆ ಮಾಡಿದವರನ್ನು ನೋಡಿದಾಗ ತಿಳಿಯುತ್ತದೆ ಎಂದಿದ್ದಾರೆ. ಒಂದು ಸಣ್ಣ ಸಾಧನೆ ಮಾಡಿ ನಾನು ದೊಡ್ಡ ಸಾಧನೆ ಮಾಡಿದೆ ಎಂದು ಬೀಗಬಾರದು. ಅಹಂಕಾರ ಪಡಬಾರದು. ವ್ಯಕ್ತಿಯು ಎಷ್ಟೇ ಮುಂದುವರೆದರೂ ಅವನು ಸಾಧನೆ ಮಾಡಬೇಕಾಗಿರುವುದು ಇನ್ನೂ ಬಹಳ ಇದೆ ಎಂದು ತಿಳಿದು ಜೀವನ ಮಾಡಬೇಕು ಎಂದಿದ್ದಾರೆ.

ಅದೇ ರೀತಿ "ಸತಿಸುತ ಸಾಮ್ರಾಜ್ಯ ಸಕಲ ಸಿರಿಸಂಪದ" ಎಂಬ ವಚನದಲ್ಲಿ ಸತ್ಯ ಹರಿಶ್ಚಂದ್ರನ ಜೀವನವನ್ನು ತಿಳಿಸುವುದರ ಮೂಲಕ ಸತ್ಯದ ಮೌಲ್ಯಕ್ಕೆ ಮತ್ತಷ್ಟು ಮೆರಗು ತಂದಿದ್ದಾರೆ. ಸತ್ಯ ಹರಿಶ್ಚಂದ್ರ ತಾನು ಕೊಟ್ಟ ಮಾತಿನಂತೆ ತನ್ನ ಸಾಮ್ರಾಜ್ಯ, ಅಂತಸ್ತು, ಹೆಂಡತಿ, ಮಗು ಎಲ್ಲವನ್ನು ದೂರ ಮಾಡಿಕೊಂಡರೂ ತನ್ನ ಸತ್ಯಕ್ಕೋಸ್ಕರ ಎಷ್ಟೇ ಕಷ್ಟ ಬಂದರೂ ಸುಳ್ಳನ್ನು ಹೇಳುವುದಿಲ್ಲ. ಅದೇ ರೀತಿ ಪ್ರಪಂಚದ ಯಾವುದೇ ಮನುಷ್ಯ ಎಷ್ಟೇ ಕಷ್ಟ ಬಂದರೂ ಸುಳ್ಳನ್ನು ಹೇಳಬಾರದು. ಸತ್ಯಕ್ಕೆ ಎಂದೂ ಸೋಲಿಲ್ಲ ಎಂದು ಹೇಳುತ್ತಾರೆ.

ಮತ್ತೊಂದು ವಚನವಾದ ಶಿಷ್ಯ ಪಾರ್ಥನಿಗೆ ಬಿಲ್ವಿದ್ಯೆಯನ್ನು ಬೋಧಿಸುತ್ತಿದ್ದ ಎಂಬ ವಚನದಲ್ಲಿ, ಮಹಾಭಾರತದಲ್ಲಿ ಬರುವ ಗುರು ದ್ರೋಣಾಚಾರ್ಯ ಮತ್ತು ಶಿಷ್ಯ ಪಾರ್ಥ (ಅರ್ಜುನ) ಇವರುಗಳ ಗುರು–ಶಿಷ್ಯರ ಸಂಬಂಧವನ್ನು ಕಲ್ಪಿಸುವುದರ ಮೂಲಕ ತನ್ನ ಗುರಿಯನ್ನು ಯಾವ ರೀತಿ ಸಾಧನೆ ಮಾಡಬೇಕು ಎಂದು ಈ ವಚನದಲ್ಲಿ ಹೇಳಿದ್ದಾರೆ. ಯಾವುದೇ ಒಬ್ಬ ವ್ಯಕ್ತಿ ತನ್ನ ಗುರಿಯನ್ನು ಮುಟ್ಟಬೇಕಾದರೆ ಅವನಿಗೆ ತಾನು ಆ ಗುರಿಯನ್ನು ಸಾಧಿಸುತ್ತೇನೆ

ಎಂಬ ದೃಢನಿರ್ಧಾರ, ವಿಶ್ವಾಸ, ನಂಬಿಕೆ, ಛಲ ಇರಬೇಕು. ಇದರ ಜೊತೆಗೆ ತನ್ನ ಗುರಿ ಸಾಧನೆಗೆ ಏನೇ ಅಡೆತಡೆ, ಕಷ್ಟಗಳು ಬಂದರೂ ಅದಕ್ಕೆ ಹೆದರಬಾರದು ಎಂದಿದ್ದಾರೆ. ಹೀಗೆ ಸಾಗಿದರೆ ಮಾತ್ರ ತನ್ನ ಗುರಿಯನ್ನು ಸುಲಭವಾಗಿ ಮುಟ್ಟ ಬಹುದು ಎಂದು ಈ ವಚನದ ಅರ್ಥ.

"ಹಸ್ತದಲಿಹ ಪುಸ್ತಕದ ಸಾರ
ಮಸ್ತಕಕೆ ಬಾರದಿರೆ;
ಮತ್ತಿನ ಮಹಿಮೆಯನರಿಯದೆ,
ಹೆಂಡದ ತಿತ್ತಿಯ ಹೊತ್ತು ಸಾಗಿದ
ಕತ್ತೆಯಂತಲ್ಲದೆ ಮತ್ತೇನೆಂದ ಚೌಡಿಕೆಯ ಜೋಗಿ"[೧೨]

ಇಲ್ಲಿ ಜ್ಞಾನ, ಏಕಾಗ್ರತೆಯ ಬಗ್ಗೆ ಹೇಳುತ್ತಾರೆ. ಯಾವುದೇ ಒಂದು ವಿಷಯವನ್ನು ಅರ್ಥಮಾಡಿಕೊಳ್ಳಬೇಕಾದರೆ ಆ ವಿಷಯದ ಬಗ್ಗೆ ಸಮಗ್ರವಾಗಿ ತಿಳಿದಿರಬೇಕು. ಅಲ್ಲಿನ ಒಳ್ಳೆಯ ವಿಷಯವನ್ನು ನಮ್ಮ ತಲೆಯಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಇಲ್ಲವಾದಲ್ಲಿ ಪ್ರಯೋಜನ ಇಲ್ಲದ ಕತ್ತೆಯಂತೆ ಎಂದಿದ್ದಾರೆ.

ಮತ್ತೊಂದು ವಚನ ಹುಟ್ಟಿದ್ದು ಸಾಯಲೇಬೇಕೆಂಬುದು ಪ್ರಕೃತಿಯ ನಿಯಮ ಎಂಬ ವಚನದಲ್ಲಿ ಹುಟ್ಟು-ಸಾವಿನ ಸಾರವನ್ನು ತಿಳಿಸಲೆತ್ನಿಸಿದ್ದಾರೆ. ಯಾವುದೇ ಒಂದು ಜೀವಿ ಹುಟ್ಟಿತ್ತೆಂದರೆ ಅದು ಸಾಯಲೇಬೇಕು. ಇದು ಪ್ರಕೃತಿ ನಿಯಮ. ಈ ಹುಟ್ಟು-ಸಾವುಗಳ ಮಧ್ಯೆ ದ್ವೇಷ, ಅಸೂಯೆ, ಮತ್ಸರ, ಅಹಂಕಾರಗಳೆಂಬ ದುರ್ಗುಣಗಳನ್ನು ಬಿಟ್ಟು ಪ್ರೀತಿ, ವಿಶ್ವಾಸ, ನಂಬಿಕೆ, ಸಹನೆ, ಅನುಕಂಪದಿಂದ ಬದುಕಿದರೆ ಅವನ ಜೀವನ ಹುಟ್ಟಿದ್ದಕ್ಕೂ ಸಾರ್ಥಕ ಎಂದು ಹೇಳಿದ್ದಾರೆ.

೩.೨. ಗ್ರಂಥ ಸಂಪಾದನೆ :

ಸಾಹಿತ್ಯವೆಂಬುದು ಬದುಕಿನ ಪ್ರತಿರೂಪವಾಗಿದೆ. ಹಾಗೆಯೇ ಆಯಾ ಕಾಲಘಟ್ಟದಲ್ಲಿ ರಚಿಸಿಕೊಂಡ ಕೃತಿಯು ಆಯಾ ಕಾಲದ ಪ್ರತಿನಿಧಿಯಾಗಿ ನಿದರ್ಶನಗೊಂಡಿದೆ. ಸಾಹಿತ್ಯ, ನಾಡು, ನುಡಿ, ಸಂಸ್ಕೃತಿ, ಪರಂಪರೆಯ ಸಂಪತ್ತನ್ನು ನಂತರ ಕಾಲದಲ್ಲಿ ಉಳಿಸಿ-ಬೆಳೆಸುವ ಕೆಲಸ ನಮ್ಮದಾಗಿದೆ. ಸೃಜನ ಸಾಹಿತ್ಯ, ಶಾಸ್ತ್ರ, ಅನುವಾದ, ಸಂಪಾದನೆ, ಸಂಶೋಧನೆ, ವಿಶ್ಲೇಷಣೆ ಹೀಗೆ ಅದು ಯಾವುದಾದರೂ ಜ್ಞಾನಮುಖಿಯಾಗಿ ಮನುಷ್ಯನ ಮನಸ್ಸನ್ನು ಪರಿವರ್ತಿಸಿ ಪ್ರಗತಿಗೆ ಪ್ರೇರಣೆ ನೀಡುತ್ತದೆ.

"ಸಾಹಿತ್ಯ ವಾಹಿನಿಯ ಕವಿ, ವಿಮರ್ಶಕ, ಸಹೃದಯ ಎಂಬ ತ್ರಿಪಥದಲ್ಲಿ ಜನಿಸಿ ಪ್ರವಹಿಸುತ್ತದೆ. ಕವಿ, ಸೃಜನ, ವಿಮರ್ಶಕ, ವಿಮರ್ಶನ, ಸಹೃದಯ, ರಸಸ್ವಾದನ, ಕ್ರಿಯಾನಿಷ್ಠರು, ಒಬ್ಬನ ಸೃಷ್ಟಿ ಇನ್ನಿಬ್ಬರ ಸೊತ್ತು, ದೈಹಿಕವಾಗಿ ಅಳಿದ ಗ್ರಾಂಥಿಕವಾಗಿ, ಅಮರರಾದ ಕವಿಗಳ ಅಳಿವು-ಉಳಿವು, ವಿಮರ್ಶಕ ಮತ್ತು ಸಹೃದಯರನ್ನು ಅವಲಂಬಿಸಿದೆ. ಕವಿ ನಿರ್ಮಿಸಿದ ಕೃತಿ ನಿರ್ಲಕ್ಷಿಸಿದಷ್ಟೂ ತೀವ್ರವಾಗಿ ನಾಶವಾಗುತ್ತದೆ. ಅಭ್ಯಸಿಸಿದಷ್ಟು ದೀರ್ಘಕಾಲ ಬಾಳಿ ಬದುಕುತ್ತದೆ. ಹೀಗೆ ಬದುಕುಳಿದ ಪ್ರಾಚೀನ ಗ್ರಂಥಗಳು ಪ್ರಕೃತಿ ವಿಕೋಪಕ್ಕೆ ಬಲಿಯಾಗಿ ಜನರ ಉದ್ದೇಶಿತ ಮತ್ತು ದುರುದ್ದೇಶಿತ ಪಠ್ಯ ವ್ಯತ್ಯಾಸಗಳು ಕೆಂಗಣ್ಣಿಗೆ ಗುರಿಯಾಗಿ ಕುರೂಪಗೊಳ್ಳುವುದು ಸಹಜ ಸ್ವಭಾವ."[೧೩]

ವ್ಯವಸ್ಥಿತ ವಿಧಾನಗಳಿಂದ ಅವುಗಳನ್ನು ಶುದ್ಧೀಕರಿಸಿ ಮೂಲರೂಪಕ್ಕೆ ತರಬೇಕು. ಇಂತಹ ಶುದ್ಧೀಕರಣ ಕ್ರಿಯೆಯೇ ಗ್ರಂಥ ಸಂಪಾದನೆ. ಇದು ಒಂದು ಶಾಸ್ತ್ರವಾಗಿ ಭಾರತಕ್ಕೆ ನಡೆದು ಬಂದುದು ಪಾಶ್ಚಿಮಾತ್ಯ ರಾಷ್ಟ್ರಗಳಿಂದ. ಈ ಶಾಸ್ತ್ರವು ಸರ್ವತೋಮುಖವಾಗಿ ಬೆಳೆದು ಗದ್ಯ, ಪದ್ಯ, ನಾಟಕ ಇತ್ಯಾದಿ ಪ್ರಕಾರಗಳಲ್ಲಿ ಪ್ರಯೋಗಿಸಲ್ಪಟ್ಟು, ಒಂದು ಖಚಿತ ಸ್ವರೂಪ ಪಡೆದು ೧೯ನೆಯ ಶತಮಾನದಲ್ಲಿ ಭಾರತವನ್ನು ಪ್ರವೇಶಿಸಿತು. ಭಾರತೀಯ ಹಿನ್ನೆಲೆಯಲ್ಲಿ ಬದುಕುತ್ತಿರುವ ಕನ್ನಡಿಗರಿಗೆ ಪ್ರಾಚೀನ ಕಾಲದಿಂದಲೂ ಗ್ರಂಥಸಂಪಾದನೆ ಆಸಕ್ತಿಯ ವಿಷಯ. ಪಾಶ್ಚಿಮಾತ್ಯ ವಿದ್ವಾಂಸರಾದ ಮೊಗ್ಲಿಂಗ್‌ನ ದಾಸರ ಕೀರ್ತನೆಗಳನ್ನು ಸಂಗ್ರಹಿಸಿ ಸಂಪಾದಿಸಿದರು. ಕಿಟೆಲ್ ಅವರು ನಾಗವರ್ಮನ ಛಂದೋಬುದಿ, ಕೇಶಿರಾಜನ ಶಬ್ದಮಣಿ ದರ್ಪಣ ಕೃತಿಗಳನ್ನು ಸಂಪಾದಿಸಿ, ಸಂಪಾದನೆ ಕ್ಷೇತ್ರಕ್ಕೆ ಗಟ್ಟಿ ಅಡಿಪಾಯ ಹಾಕಿದರು.

ಸಿ.ಕೆ.ಪಿ ಅವರು ನೀಲಲೋಚನೆಯ ವಚನಗಳು ಮತ್ತು ತಗರ ಪವಾಡ ಎಂಬ ಕೃತಿಗಳನ್ನು ಹಸ್ತಪ್ರತಿಗಳ ನೆರವಿನಿಂದ ಸಂಪಾದಿಸಿದ್ದಾರೆ.

೧. ನೀಲಲೋಚನೆಯ ವಚನಗಳು :

ಭರತ ಖಂಡದ ಧಾರ್ಮಿಕ, ಸಾಮಾಜಿಕ ಚರಿತ್ರೆಯಲ್ಲಿ ಸ್ತ್ರೀಯರ ಪಾತ್ರ ಆಗಾಧವಾದದ್ದು. ವೇದಗಳ ಕಾಲದಲ್ಲಿ ಗಾರ್ಗಿ, ಮೈತ್ರೇಯಿ, ಅಪಲ, ಲೋಪಮುದ್ರ ಮುಂತಾದ ಮಹಿಳೆಯರು ಉಜ್ವಲ ತತ್ವಜ್ಞಾನಿಗಳಾಗಿ ಬಾಳಿ ಬೆಳಗಿದ ಕಾಲವದು.

ಕರ್ನಾಟಕದ ದೃಷ್ಟಿಯಿಂದ ನೋಡುವುದಾದರೆ ೧೨ನೆಯ ಶತಮಾನದಲ್ಲಿ ಧಾರ್ಮಿಕ ಕ್ರಾಂತಿಯಿಂದ ಮಾನವನ ಜೀವನ ಹೊಸ ಮೌಲ್ಯವನ್ನು ಕಂಡುಕೊಂಡಿತು. ಬಸವಣ್ಣ, ಚೆನ್ನಬಸವಣ್ಣ, ಪ್ರಭುದೇವರಂಥ ನೇತೃತ್ವದಲ್ಲಿ ನಡೆದ ಆಂದೋಲನ ನಮ್ಮ ನಾಡಿನ ಸಂಸ್ಕೃತಿಯು ಚರಿತ್ರೆಯಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡತಕ್ಕದ್ದಾಗಿದೆ. ಈ ಕಾಲದಲ್ಲಿ ಸ್ತ್ರೀಯರಿಗೆ ಸಮಾನ ಅವಕಾಶ

ಕಲ್ಪಿಸಿಕೊಡಲಾಗಿತ್ತು. ಸಮಾಜ ಸಮಾನತೆಯ ರಾಜ್ಯ, ಹೆಣ್ಣು–ಗಂಡು, ಮೇಲು–ಕೀಳು ಇಂತಹ ದ್ವೈತ ಭಾವಕ್ಕೆ ಎಡೆಯಿಲ್ಲದಾಯಿತು. "ಮೊಲೆ ಮುಡಿಗಳಿದ್ದರೆ ಹೆಣ್ಣೆಂಬರು, ಗಡ್ಡ ಮೀಸೆಗಳು ಬಂದರೆ ಗಂಡೆಂಬರು, ಒಳಗೆ ಸುಳಿವ ಆತ್ಮ ಹೆಣ್ಣು ಅಲ್ಲ ಗಂಡೂ ಅಲ್ಲ ಎನ್ನುವಷ್ಟು ಶಿವಶರಣರ ದೃಷ್ಟಿ ದೂರ ಸರಿಯಿತು."[೧೪]

ಶಿವಶರಣರ ಈ ಕ್ರಾಂತಿಯು ಅನೇಕ ಜನ ಶಿವಶರಣೆಯರ ಮೇಲೆ ಪ್ರಭಾವ ಬೀರಿತು. ಇದು ಒಂದು ವಿಶೇಷವೆಂದು ಹೇಳಬಹುದು. ನಾಡಿನ ನಾನಾ ಮೂಲೆಗಳಲ್ಲಿ, ಹಳ್ಳಿಗಳಲ್ಲಿ ವಾಸ ಮಾಡಿಕೊಂಡಿದ್ದ ಅನೇಕ ಮಹಿಳೆಯರು ಈ ಯುಗದಲ್ಲಿ ದೈವತ್ವದ ಮಟ್ಟಕ್ಕೇರಿ ಅದ್ಭುತವಾದ ಕಾರ್ಯ ಮಾಡಿರುವರು. ಮುಕ್ತಾಯಕ್ಕ, ಅಕ್ಕಮಹಾದೇವಿ, ಸತ್ಯಕ್ಕ ಮುಂತಾದ ಶಿವಶರಣೆಯರ ವ್ಯಕ್ತಿತ್ವ ಶಬ್ದಕ್ಕೆ ನಿಲುಕದು. ನೀಲಲೋಚನೆಯು ಸಹ ಇವರ ಗುಂಪಿಗೆ ಸೇರುತ್ತಾಳೆ.

"ಶಿವಶರಣೆಯರ ವಚನಗಳು ಹೆಚ್ಚಾಗಿ ಸಿಕ್ಕದೇ ಇರುವಾಗ "ನೀಲಲೋಚನೆಯ ವಚನಗಳು" ಇನ್ನೂ ಹೆಚ್ಚು ಮಹತ್ವ ಪಡೆಯುತ್ತಿವೆ. ಶೂನ್ಯ ಸಂಪಾದನೆಯಲ್ಲಿ ಬರುವ ಕೆಲವು ವಚನಗಳು ಮತ್ತು ಡಾ. ಎಲ್. ಬಸವರಾಜು ಅವರು ಪ್ರಕಟಿಸಿರುವ "ಶಿವದಾಸ ಗೀತಾಂಜಲಿ"ಯಲ್ಲಿ ಬರುವ ಕೆಲವು ಹಾಡುಗಳು ಇವುಗಳಿಂದ ಮಾತ್ರ ನೀಲಲೋಚನೆಯ ಸಾಹಿತ್ಯ ಪರಿಚಯ ನಮಗಿತ್ತು."[೧೫] ಆದರೆ ಈಗ ನೀಲಲೋಚನೆ ಹೇಳಲಾದ ನಲವತ್ತೈದು ವಚನಗಳನ್ನು ಸಿ.ಕೆ.ಪಿ. ಅವರು ಸಂಗ್ರಹಿಸಿಕೊಟ್ಟಿದ್ದಾರೆ.

ನೀಲಲೋಚನೆಯು ಅನೇಕ ವಚನಗಳನ್ನು ಬರೆದಿದ್ದು, ಇಂತಹ ವಚನಗಳನ್ನು ಅನೇಕ ಲೇಖಕರು ಸಂಗ್ರಹಿಸಿ, ಪರಿಷ್ಕರಿಸಿ ಪುಸ್ತಕ ರೂಪದಲ್ಲಿ ಹೊರತಂದಿರುವುದು ಒಂದು ಹೆಮ್ಮೆಯ ವಿಷಯವಾಗಿದೆ. ಪ್ರಸಿದ್ಧ ಸಂಪಾದಕರಾದ ಆರ್.ಸಿ. ಹಿರೇಮಠ ಅವರು ೧೯೭೧ರಲ್ಲಿ ನೀಲಮ್ಮನ ೧೨೫ ವಚನಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಡಾ. ಸರೋಜಿನಿ ಚವಲಾರ ಎಂಬುವರು ೧೯೮೬ರಲ್ಲಿ "ನೀಲಾಂಬಿಕೆಯ ವಚನಗಳು" ಎಂಬ ಶೀರ್ಷಿಕೆ ಅಡಿಯಲ್ಲಿ ಒಟ್ಟು ೧೦೧ ವಚನಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಹಾಗೆಯೇ ಪ್ರೊ. ಎಸ್.ಎಸ್. ಭೂಸರೆಡ್ಡಿ ಅವರು ೧೯೮೬ರಲ್ಲಿ "ನೀಲಲೋಚನೆಯ ವಚನಗಳಲ್ಲಿ ಬಸವಣ್ಣ" ಎಂಬ ತಲೆಬರಹದಡಿಯಲ್ಲಿ ಒಟ್ಟು ೧೦೧ ವಚನಗಳನ್ನು ಸಂಪಾದಿಸಿದ್ದಾರೆ. ಅದೇ ರೀತಿ ಮತ್ತೋರ್ವ ಸಂಪಾದಕರಾಗಿರುವ ಡಾ. ವೀರಣ್ಣ ರಾಜೂರ ಅವರು ೧೯೯೩ರಲ್ಲಿ "ಶಿವಶರಣೆಯರ ವಚನ ಸಂಪುಟ" ಪುಸ್ತಕದಡಿಯಲ್ಲಿ ಒಟ್ಟು ೧೨೬ ವಚನಗಳನ್ನು ಸಂಪಾದಿಸಿ ಶಾಸ್ತ್ರೀಯವಾಗಿ ಪಾಠ ಪರಿಷ್ಕರಣ ಮಾಡಿ ಹೊರತಂದಿದ್ದಾರೆ.

ಇವರೆಲ್ಲರಕ್ಕಿಂತ ಮುಂಚಿತವಾಗಿ ಅಂದರೆ "೧೯೬೬ರಲ್ಲಿಯೇ ಸಿ.ಕೆ. ಪರಶುರಾಮಯ್ಯನವರು 'ಗುಬ್ಬಿ ತಾಲೂಕಿನ ಹಾಗಲ್ವಾಡಿ' ಗ್ರಾಮದಲ್ಲಿ ಅವರಿಗೆ ದೊರೆತ ಒಂದು ಓಲೆಯ ಕಟ್ಟಿನಲ್ಲಿ

ನೀಲಲೋಚನೆಯವೆಂದು ಹೇಳಲಾದ ೪೫ ವಚನಗಳನ್ನು"[೧೬] ಸಿ.ಕೆ.ಪಿ. ಅವರು ಶಾಸ್ತ್ರಬದ್ಧವಾಗಿ ಸಂಗ್ರಹಿಸಿ, ಪರಿಷ್ಕರಿಸಿ "ನೀಲಲೋಚನೆಯ ವಚನಗಳು" ಎಂಬ ಪುಸ್ತಕದಡಿಯಲ್ಲಿ ಪ್ರಕಟಿಸಿದ್ದಾರೆ.

ಇಲ್ಲಿ ನೀಲಾಂಬಿಕೆಯ ಕುರಿತ ಹಲವು ಅಂಶಗಳನ್ನು ಒಂದೆಡೆ ತರಲು ಪ್ರಯತ್ನಿಸಿದ್ದೇನೆ. ಇಲ್ಲಿರುವ ವಚನಗಳು ತುಂಬಾ ಮೌಲ್ಯಯುತವಾದವುಗಳಾಗಿವೆ. ಬಸವಣ್ಣನವರು ಐಕ್ಯವಾದ ಮೇಲೆ ಆ ಮಹಾ ವ್ಯಕ್ತಿತ್ವದ ಸ್ಮರಣೆಯಿಂದ ಉದ್ಗಾರಗಳಂತಿದೆ. ಈ ಎಲ್ಲಾ ವಚನಗಳಲ್ಲಿ ಏಕಮುಖವಾದ ಭಾವ ಮಿಡಿಯುತ್ತಿವೆ. ಇವಲ್ಲದೆ ಇನ್ನೂ ಅನೇಕ ವಚನಗಳನ್ನು ನೀಲಾಂಬಿಕೆ ಬರೆದಿದ್ದಿರಬೇಕು. ಅವುಗಳು ಸಿಕ್ಕಿದ್ದರೆ ಆಕೆಯ ಕಾವ್ಯ ಶಕ್ತಿಯ ಮೇಲೆ ಹೆಚ್ಚು ಬೆಳಕು ಬೀಳಲು ಸಾಧ್ಯವಾಗುತ್ತಿತ್ತು.

ನೀಲಲೋಚನೆಯ ಜೀವನ ವೃತ್ತಾಂತ :

"ಕನ್ನಡ ಸಾಹಿತ್ಯ ಇತಿಹಾಸದಲ್ಲಿ ಒಟ್ಟು ಮೂರು ಜನ ನೀಲಮ್ಮನೆಂಬ ಹೆಸರಿನ ಶರಣೆಯರು ದೊರೆಯುತ್ತಾರೆ. ಒಬ್ಬಳು "ಬಲದೇವ ಮಂತ್ರಿಯ ತಮ್ಮ ಸಿದ್ದಣ್ಣನಿಗೂ ಪದ್ಮಗಂಧಿಗೂ ಮಗಳಾಗಿದ್ದಳು" ಎರಡನೆಯದಾಗಿ ನೀಲಮ್ಮ ಮೊರಬದಲ್ಲಿದ್ದ ಶರಣೆ, ಮೂರನೆಯದಾಗಿ ನೀಲಮ್ಮ ಬಲ್ಲಾಳಪುರದಲ್ಲಿದ್ದ ವೀರಭಕ್ತೆ"[೧೭] ಇದರಲ್ಲಿ ಮೊದಲನೆಯ ನೀಲಮ್ಮನ ವಚನಗಳನ್ನು ಸಿ.ಕೆ.ಪಿ. ಅವರು ಸಂಪಾದಿಸಿದ್ದಾರೆ.

ನೀಲಲೋಚನೆಯ ವಿಷಯವಾಗಿ ತಿಳಿದುಬರುವ ಸಂಗತಿಗಳು ತೀರ ವಿರಳ. "ನೀಲಮ್ಮ, ನೀಲಾಂಬಿಕೆ, ನೀಲಲೋಚನೆ ಈ ಹೆಸರುಗಳಿಂದ ಪ್ರಸಿದ್ಧಳಾದವಳು. "ನೀಲಾಂಬಿಕೆ ಈಕೆ ಬಸವಣ್ಣನವರ ಮೊದಲನೆಯ ಹೆಂಡತಿಯಾದ ಗಂಗಾಂಬಿಕೆ ಸೋದರ ಮಾವನಾದ ಬಲದೇವರಾಯನ ಮಗಳು ಎಂದು ಸ್ಪಷ್ಟವಾಗಿದೆ. ಲಕ್ಕಣ್ಣದಂಡೇಶ ಇವಳನ್ನು ಬಿಜ್ಜಳನ ತಂಗಿ ಎಂದು ನೇರವಾಗಿ ಹೇಳಿದರೆ, ವೀರಶೈವಾಮೃತ ಪುರಾಣ ಸಿದ್ಧರಸನ ಮಗಳೆಂದು ಬಾಯಿಬಿಟ್ಟು ಹೇಳುತ್ತಾನೆ. ಈ ಎರಡೂ ಅಭಿಪ್ರಾಯಗಳನ್ನು ಸಮೀಕರಿಸಿ ನೋಡಿದರೆ ನೀಲಲೋಚನೆ ಸಿದ್ಧರಸನ ಮಗಳು. ಬಿಜ್ಜಳನ ಸಾಕುತಂಗಿ ಎಂದು ಸಿಂಗಿರಾಜನು ಸೂಚಿಸುತ್ತಾನೆ. ಇವಳಿಗೆ "ಬಾಲ ಸಂಗಯ್ಯ" ಹೆಸರಿನ ಮಗ ಇದ್ದನು. ಚಿಕ್ಕ ವಯಸ್ಸಿನಲ್ಲೇ ತೀರಿಹೋದನೆಂದು ತಿಳಿದುಬರುತ್ತದೆ"[೧೮]

ನೀಲಲೋಚನೆಯ ವಚನಗಳಲ್ಲಿನ ಅಂಕಿತನಾಮದ ಸಮಸ್ಯೆಗಳು :

"ನೀಲಮ್ಮನ ಹೆಸರಿನಲ್ಲಿ ಮೂರು ವಿಧವಾದ ಅಂಕಿತಗಳು ದೊರೆಯುತ್ತವೆ. ಸಂಗಯ್ಯ, ಬಸವಪ್ರಿಯ, ಕೂಡಲಸಂಗಮದೇವ ಇವುಗಳಲ್ಲಿ ಎರಡನೆಯ ಅಂಕಿತ ಹೊಂದಿದ ವಚನಗಳು ಇದುವರೆಗೂ ದೊರೆತಿಲ್ಲ. ದೊರೆತಿರಬಹುದಾದ ವಚನಗಳು. ನೀಲಮ್ಮನವಾಗಿರದೆ ಅಂಕಿತ ಮಧ್ಯೆ 'ಚೆನ್ನ' ಪದವನ್ನು ತಿಳಿದುಕೊಂಡ ಸಂಗಂಮೇಶ್ವರ ಅಪ್ಪಣ್ಣನ ವಚನಗಳಾಗಿರಬೇಕು. ಮೂರನೆ

ಅಂಕಿತದ ವಚನಗಳಲ್ಲಿ ಪುರುಷ ಸಂಬೋಧನೆಯ ರೀತಿ ಕಂಡುಬರುವುದರಿಂದ ಅವುಗಳ ಕರ್ತೃ ಭಿನ್ನವೆಂದು ಹೇಳಲಾಗುತ್ತಿದೆ. ಇನ್ನು ಉಳಿದ 'ಸಂಗಯ್ಯ' ಎಂಬ ಅಂಕಿತ ಪ್ರಾಚೀನ ತಾಳೆಗರಿ ಹಸ್ತಪ್ರತಿಗಳಲ್ಲಿ ನೀಲಮ್ಮನ ಹೆಸರಿನಡಿಯಲ್ಲಿ ಸಂಗ್ರಹವಾದ ವಚನಗಳಲ್ಲಿ ನಿಯತವಾಗಿ ದೊರೆಯುತ್ತದೆ. ಈ ಕಾರಣದಿಂದ ಇದೇ ನೀಲಮ್ಮನ ನಿಜ ಅಂಕಿತವೆಂದು ಪರಿಗಣಿಸಲಾಗಿದೆ.

ನೀಲಲೋಚನೆಯ ಜೀವನದ ವಿವರಗಳು ನಮಗೆ ಅಷ್ಟಾಗಿ ತಿಳಿದುಬರದಿದ್ದರೂ, ಬಸವಣ್ಣನವರ ಬದುಕಿನಲ್ಲಿ ಇವಳ ಪ್ರವೇಶ ಅತಿ ಮುಖ್ಯವಾದುದೆಂದು ವಚನ ಸಾಹಿತ್ಯ, ಕಾವ್ಯ, ಸಾಹಿತ್ಯಗಳು ಸ್ಪಷ್ಟಪಡಿಸುತ್ತವೆ. ಧಾರ್ಮಿಕ, ಸಾಮಾಜಿಕ ಸುಧಾರಣೆಯ ಜಾಗೃತಿಯ ಮಹಾಮಹಿಮವನ್ನು ಹೊತ್ತ ಬಸವಣ್ಣನಿಗೆ ಹಿನ್ನೆಲೆ, ಮುನ್ನೆಲೆಯಾಗಿ ದುಡಿದ ಇವಳು ಅವನ ಜೀವನ ಪಥದಲ್ಲಿ ನಿಜವಾದ ಅರ್ಥದಲ್ಲಿ ಸಹ ಧರ್ಮಿಣಿಯಾಗಿ ಹೆಜ್ಜೆ ಹಾಕಿದ್ದಾಳೆ. ಕಲ್ಯಾಣ ಕ್ರಾಂತಿಯ ಸಂದರ್ಭದಲ್ಲಿ ಇವಳು ತಂಗಡಿಗೆಯಲ್ಲಿ ಐಕ್ಯಳಾದಳೆಂದು ಪ್ರತೀಕವಿದೆ.

ನೀಲಾಂಬಿಕೆಗೆ 'ಬಸವ' ಎಂಬ ಮಂತ್ರವು ಪಂಚಪ್ರಾಣವೆಂದು ವಚನಗಳಲ್ಲಿ ಎದ್ದು ಕಾಣುತ್ತದೆ. ಅವನ ಮೇಲೆ ಅನನ್ಯ ಭಕ್ತಿ 'ಬಸವಾ' ಎನ್ನುವ ಮೂರಕ್ಷರಗಳು ಅವಳಿಗೆ ಪರಮಾತ್ಮನ ಹಂಗನ್ನು, ಪ್ರಾಣದ ಸಂಗವನ್ನು ಹರಿದೊಗೆಯಲು ಸಹಾಯಕವಾಗಿದೆ.

ಬಸವನಂಥ ಅನುಭಾವಿ ಶರಣನನ್ನು ಪ್ರಶ್ನಿಸಿ, ಉಚ್ಚರಿಸುವಾಗ ಧೈರ್ಯವು ನೀಲಾಂಬಿಕೆಗೆ ಇದೆ ಬಸವನು ಪತಿ ಮಾತ್ರವಲ್ಲ ಅವಳಿಗೆ ಗುರು, ಸರ್ವಸ್ವವೂ ಹೌದು. ತತ್ವ, ಭಕ್ತಿ, ಮುಕ್ತಿಯ ಭ್ರಮೆ ಬಿಡಿಸಿದವನು. ಲಿಂಗ–ಸಂಗ–ಪ್ರಾಣ–ಪ್ರಸಾದ–ಪ್ರಭೆಯ ಮೂರ್ತಿಯಾಗಿದ್ದಾನೆ. ತನು–ಮನ–ನೆನಹಿನ ಉಭಯ ಗುಣವಳಿದ ಬಸವನೆ ಅವಳಿಗೆ ಇಹಪರ ನಾಯಕ, ಸಕಲ ಸ್ವರೂಪಕ್ಕೂ ಕಾರಣ.

ನೀಲಲೋಚನೆಯ ವಚನಗಳ ವಿಶ್ಲೇಷಣೆ

"ಎರಡಲ್ಲದೆ ವಸ್ತುವೆ ನೀನೆರಡಾದೆಯಲ್ಲ ಬಸವಯ್ಯ
ಎರಡನೆಲೆಕಲಿಸಿ ಭ್ರಮೆಯ ಬಿಡಿಸಿದೆಯಲ್ಲ ಬಸವಯ್ಯ
ಭ್ರಮೆಯನಳಿದು ಪರಿಣಾಮದ ಸಂಗವ ಮಾಡಿದೆಯಲ್ಲ ಬಸವಯ್ಯ
ತೆರಹಿಲ್ಲದ ವಸ್ತುವಾದೆಯಲ್ಲಾ ಬಸವಯ್ಯ ಗುರುವೇ
ಸಂಗಯ್ಯನಲ್ಲಿ ಸದುಹೃದಯನಾದೆಯಲ್ಲ ಬಸವಯ್ಯ"[೧೯]

ಈ ಒಂದು ವಚನದಲ್ಲಿ ಎರಡಿಲ್ಲದ ವಸ್ತುವೇ ನೀನೆರದೆಯಲ್ಲ ಎಂಬ ಮಾತಿನಲ್ಲಿ ಸದ್ವೈತದಲ್ಲಿ ದ್ವೈತ ಭಾವವನ್ನು ತೋರಿದ ಬಸವಣ್ಣನು ಜೀವಾತ್ಮನಾಗಿ ಬಂದು ಪರಮಾತ್ಮನಲ್ಲಿ ಒಂದಾಗುವ

ಬಗೆಯನ್ನು ತೋರಿಸಿ ದ್ವೈತ ಭಾವವನ್ನು ಹೋಗಲಾಡಿಸಿ ಏಕಮೇದಾ ದ್ವಿತೀಯವಾದ ಅಖಂಡವಾದ ಪರತತ್ವವನ್ನು ತಿಳಿಸಿ ದ್ವೈತ–ಅದ್ವೈತಗಳ ಜೀವಶಿವರ ನಡುವಿರುವ ಬೇಧವನ್ನು ಕಳೆದು ಆ ಪರತತ್ವದಿಂದ ಪರಮಾನಂದವನ್ನು ಹೊಂದಿ ಈ ಜಗತ್ತನೇ ಆವರಿಸಿದ ಬಸವಣ್ಣನು ತನ್ನ ಗುರುವಿನಲ್ಲಿ ಸಹೃದಯರಾದರು ಎಂದು ಸಕಲ ಚರಾಚರ ವ್ಯಾಪ್ತಿಯನ್ನು ಕುರಿತು ಹೇಳಿದ್ದಾಳೆ.

“ಮಡದಿಯೆನಲಾಗದು ಬಸವಂಗೆ ಎನ್ನನು
ಪುರುಷನೆನಲಾಗದು ಬಸವನನೆನಗೆ
ಉಭಯದ ಕುಲವಹರಿದು ಬಸವಗೆ ಶಿಶುವಾದೆ
ಬಸವನೆನ್ನ ಶಿಶುವಾದ
ಪ್ರಮಥ ಪುರಾತನರು ಸಾಕ್ಷಿಯಾಗಿ ಸಂಗಯ್ಯನಿಕ್ಕಿದ
ದಿವ್ಯವಮೀರದೆ ಬಸವನೊಳಗಾನಡಗಿದೆ”[೨೦]

ನೀಲಲೋಚನೆ ಬಸವಣ್ಣನ ಮೇಲಿದ್ದ ಅಪಾರ ಪ್ರೀತಿ, ವಾತ್ಸಲ್ಯಗಳನ್ನು ಈ ವಚನದಲ್ಲಿ ಹೇಳಿದ್ದಾಳೆ. ಸತಿ–ಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ ಎನ್ನುವಂತೆ ಇವರದು ಅರ್ಥಪೂರ್ಣ ದಾಂಪತ್ಯವಾಗಿದ್ದು ಸಮರಸದಿಂದ, ಸಮಾನತೆಯಿಂದ ಇದ್ದರೆಂಬುದು ಈ ವಚನದಿಂದ ತಿಳಿದುಬರುತ್ತದೆ. ಇಲ್ಲಿ ಬಸವ ಮತ್ತು ನೀಲಲೋಚನೆ ಇಬ್ಬರೂ ಪರಸ್ಪರರಿಗೆ ಶಿಶುಗಳಾದರೂ ಒಬ್ಬರು ಇನ್ನೊಬ್ಬರನ್ನು ಹಾಗೆ ನೋಡಿಕೊಂಡು ಇಲ್ಲಿ ಗಂಡ–ಹೆಂಡಿರ ಮಧ್ಯದ ಆಳವಾದ ಪ್ರೀತಿ ವ್ಯಕ್ತವಾಗುವಂತೆ ಸಾಂಸಾರಿಕವಾಗಿ ಅವರು ಸರಿಸಮಾರಾಗಿ ನಡೆದುಕೊಂಡದ್ದು ಈ ವಚನದಲ್ಲಿ ಧ್ವನಿಯಾಗಿದೆ.

“ಕಾಯಕವಿಲ್ಲದೆ ಪುಷ್ಪಕವ ಕಂಡ ನಮ್ಮ ಬಸವಯ್ಯನು
ನಮ್ಮ ಬಸವಯ್ಯನ ನೆಲೆಮಾಡ ಕರುಮಾಡವಾಯಿತ್ತು
ನಮ್ಮ ಬಸವಯ್ಯ ಹೂವಿನ ರಥವನೇಯದ
ನಮ್ಮ ಬಸವಯ್ಯ ಸಂಗಯ್ಯನಾದ ಬಸವನ ರೂಪ ತದ್ರೂಪವಾಯಿತ್ತು”[೨೧]

ಇಲ್ಲಿ ಭಾವದ ಕೋಮಲತೆಯಾಗಲಿ, ಪದಗಳ ಲಾಲಿತ್ಯವಾಗಲಿ, ಅಪೂರ್ವ ಅವುಗಳ ಹಿಂದಿನ ಶೋಕಭಾವ ಹೃದಯಸ್ಪರ್ಶಿಯಾದುದು. ಅವಳ ವಚನಗಳ ಸ್ಥಾಯಿ ಕರುಣರಸ ಆದರೆ ಅವಳ ದುಃಖದಲ್ಲಿಯೂ ಒಂದು ವಿಶೇಷ ಮಾದರಿಯ ನೀಳ ವಚನವೆಂದು ವಿಮರ್ಶಕರು ಗುರುತಿಸಿರುವುದು ಸರಿಯಾಗಿದೆ.

“ಎಲೆ ಅಯ್ಯ ಎಲೆ ಅಯ್ಯ ಏಕಾಕ್ಷರರೂಪ ಬಸವಾ
ಎಲೆ ಅಯ್ಯ ಎಲೆ ಅಯ್ಯ ನಿರಕ್ಷರರೂಪ ಬಸವಾ
ಎಲೆ ಅಯ್ಯ ಎಲೆ ಅಯ್ಯ ಪ್ರಣವಸ್ವರೂಪ ಬಸವಾ
ಎಲೆ ಅಯ್ಯ ಎಲೆ ಅಯ್ಯ ಎಲೆ ಬಸವಾ
ಏನಯ್ಯ ಸಂಗಯ್ಯ ಮುನಿಮಾರ್ಗ ಶೀಲ ಬಸವಾ
ಎಲೆಯಿಲ್ಲದ ವೃಕ್ಷವಾದ ಬಸವಯ್ಯನು”[೨೨]

ಏಕಾಕ್ಷರ ರೂಪವಾದ, ನಿರಕ್ಷರ ರೂಪನಾದ, ಪ್ರಣವ ಸ್ವರೂಪನಾದ, ಮುನಿಮಾರ್ಗ ಶೀಲನಾದ ಬಸವಯ್ಯನು ಕೂಡಲಸಂಗಯ್ಯನಲ್ಲಿ ಐಕ್ಯವಾದನು. “ಎಲೆಯಿಲ್ಲದ ವೃಕ್ಷವಾದ ಬಸವಯ್ಯನು” ಎಂದು ಹೇಳುತ್ತಾಳೆ. ಅಂದರೆ ಎಲೆ ತುಂಬಿಕೊಂಡಿರುವ ಮರವು ಜೀವಂತದ ಪ್ರತೀಕ ಆದರೆ ಇಲ್ಲಿ ಎಲೆಗಳೆಲ್ಲ ಇದ್ದಕ್ಕಿದ್ದಂತೆ ಉದುರಿಬಿದ್ದಾಗ ಸ್ತಬ್ಧವಾಗುತ್ತದೆ. ಮರ ಸತ್ತಿಲ್ಲ ಆದರೆ ಬದುಕಿನ ಚಿಹ್ನೆಯೂ ಇಲ್ಲ, ಬಸಣ್ಣನ ಸಾವಿಲ್ಲದ ಸಾವನ್ನು ಆ ಮಹಾವಿನಾಶದ ಅನುಭವವನ್ನು ಇದಕ್ಕಿಂತ ಪರಿಣಾಮಕಾರಿಯಾಗಿ ಹೇಳಲು ಸಾಧ್ಯವಿಲ್ಲ ಎಂದು ಹೇಳಬಹುದು.

“ಬೆಳಗಿನ ಪ್ರಭೆ ಥಳಥಳಿಸಿ ಹೊಳೆಯಲು
ಆ ಬೆಳಗಿನೊಳಗೆ ಬೆಳೆದ ಶಿಶುವಾನಯ್ಯ
ಕಳೆಯಜೆಯದೆ ಬೆಳೆದೆನು
ತಿಳುಹಿಲ್ಲದೆ ನಿಂದೆನು
ಸಂಗಯ್ಯನಲ್ಲಿ ಬಸವಾ ಬಸವಾ ಎನುತಿರ್ದೆನು”[೨೩]

ಬಸವಣ್ಣನೆಂಬ ಆಧ್ಯಾತ್ಮಿಕ ಬೆಳಗಿನ ಪ್ರಭೆಯಲ್ಲಿ ಬೆಳೆದ ಶಿಶು ತಾನು. ಇಲ್ಲಿ ಬಸವಣ್ಣನು ಭಕ್ತಿಯ ಬೆಳಗಿನ ಪ್ರಭೆಯಾಗಿದ್ದು ನೀಲಲೋಚನೆ ಅಂತಹ ಮಹಾ ಭಕ್ತಿಯ ಆತ್ಮಜ್ಞಾನಿಯ ಬೆಳಗಿನಲ್ಲಿ ಅಂದರೆ ಮಾರ್ಗದರ್ಶನದಲ್ಲಿ ಬೆಳೆದ ಶಿಶು ನಾನು ಎಂದು ಹೇಳಿಕೊಳ್ಳುತ್ತಿದ್ದಾಳೆ. ಇಂತಹ ಮಹಾಜ್ಞಾನಿಗಳ ಒಡನಾಟದಲ್ಲಿದ್ದರಿಂದ ಹಾಗೂ ಬಸವಯ್ಯನ ಧ್ಯಾನದಿಂದ ಅರಿಷಡ್ವರ್ಗ ಎಂಬ ಕಳೆಯ ಭಯವಿಲ್ಲದೆ ಮುಕ್ತಳಾಗಿ ಬೆಳೆದೆನು ಎನ್ನುತ್ತಾಳೆ.

“ಅಂಗದ ಸಂಗಿಗನಲ್ಲ ನಮ್ಮ ಬಸವಯ್ಯನು
ಪ್ರಾಣದ ಭ್ರಮೆಯವನಲ್ಲ ನಮ್ಮ ಬಸವಯ್ಯನು
ವಿಭಯದ ಸಂಗವನಳಿದು ಉಪಮಾತೀತನಾದ ನಮ್ಮ ಬಸವಯ್ಯನು
ಸಂಗಯ್ಯನಲ್ಲಿ ಕೂಡಿ ನಿರಾಳ ಮೂರ್ತಿಯಾದ ನಮ್ಮ ಬಸವಯ್ಯನು”[೨೪]

ನೀಲಲೋಚನೆಯು ಬಸವಣ್ಣನ ಮೇರು ವ್ಯಕ್ತಿತ್ವವನ್ನು ಕುರಿತು ಈ ವಚನದಲ್ಲಿ ಹೀಗೆ ಹೇಳುತ್ತಾಳೆ. ದೇಹದ ಹಂಗನ್ನು ತೊರೆದು, ಪ್ರಾಣದ ಭ್ರಮೆಯನ್ನು ತೊರೆದು ಈ ಎರಡರಿಂದ ಮುಕ್ತನಾದ ಬಸವಣ್ಣನು ಉಪಮೂರ್ತಿಯಾಗಿ ಕೂಡಲಸಂಗಮದಲ್ಲಿ ಐಕ್ಯಹೊಂದಿದ ಮಹಾತ್ಮನಿವನು ಎಂದು ಹೇಳುತ್ತಾಳೆ.

ಒಟ್ಟಾರೆಯಾಗಿ ನೀಲಮ್ಮನ ಹೆಚ್ಚಿನ ವಚನಗಳು ಬಸವಣ್ಣನರ ಅಗಲಿದ ನೋವಿನ ಶೋಕ ಗೀತೆಗಳಾಗಿವೆ. ಅವಳ ದುಮ್ಮಾನದ ಭಾವೋನ್ಮಾದದಲ್ಲಿ ಹೊರಹೊಮ್ಮಿದ ಸುಂದರ ಭಾವಗೀತೆಗಳಾಗಿವೆ. ಅವರ ಆದರ್ಶ ದಾಂಪತ್ಯದ, ಆಧ್ಯಾತ್ಮಿಕ ಜೀವನದ ಇಣುಕು ನೋಟವಾಗಿವೆ. ಕಾಯಕ ನಿಷ್ಠೆಯ ಕಾಯ ಕಲ್ಪಗಳಾಗಿವೆ. ಶ್ರದ್ಧೆಯ ಶ್ರೇಯಸ್ಸನ್ನು ಸಾರುತ್ತವೆ. ಭಕ್ತಿಯ ಮುಕ್ತಕಗಳಾಗಿವೆ. ಅವಳ ವಚನದಲ್ಲಿ ಶಿವಾನುಭಾವ, ತಾತ್ವಿಕ ದೃಷ್ಟಿ ಸ್ಫುಟವಾಗಿ ಮೂಡಿವೆ. ಅವಳ ವಚನಗಳು ಆಧ್ಯಾತ್ಮಿಕ ಸಾಹಿತ್ಯದಲ್ಲಿ ಉನ್ನತಮಟ್ಟವನ್ನು ಪಡೆಯಲು ಅರ್ಹವಾಗಿವೆ. ಅವಳ ವಚನಗಳು ವಚನ ಭಂಡಾರಕ್ಕೆ ಅಮೂಲ್ಯ ರತ್ನಗಳಾಗಿವೆ.

೨. ತಗರ ಪವಾಡ :

ಕರ್ನಾಟಕದ ಜನಸಮುದಾಯಗಳಲ್ಲಿ ಒಂದಾದ ಕುರುಬ ಜನಾಂಗವು ತನ್ನದೇ ಆದ ಚಾರಿತ್ರಿಕ ಅಂಶಗಳನ್ನು ಒಳಗೊಂಡಿದೆ. ಈ ಸಮುದಾಯದ ಪರಂಪರೆ, ಇತಿಹಾಸ, ಸಂಸ್ಕೃತಿ, ಸಾಹಿತ್ಯ, ಆಚರಣೆಗಳ ಬಗ್ಗೆ ಅನೇಕ ಅಧ್ಯಯನಗಳು, ಸಂಶೋಧನೆಗಳು ನಡೆಯುತ್ತಿವೆ. ವಿ.ಆರ್. ಹನುಮಂತಯ್ಯ, ಶಂಬಾ ಜೋಶಿ, ಎಂ.ಎಂ. ಕಲಬುರ್ಗಿ, ಶಿವಾನಂದ ಗುಬ್ಬಣ್ಣವರ ಒಡೆಯರ್, ಡಿ. ಹೆಗ್ಗಡೆ, ಎಫ್.ಟಿ. ಹಳ್ಳಿಕೇರಿ, ಲಿಂಗದಹಳ್ಳಿ ಹಾಲಪ್ಪ ಮುಂತಾದವರು ಈ ಸಮುದಾಯದ ಬಗ್ಗೆ ಸಂಶೋಧನೆಗಳನ್ನು ನಡೆಸಿ ಹೊಸ ಹೊಸ ಸಂಗತಿಗಳನ್ನು ಹೊರ ತಂದಿದ್ದಾರೆ. ಇಂತಹ ಮಹಾನೀಯರ ಶ್ರಮ ಮತ್ತು ಹುಡುಕಾಟದ ಫಲವಾಗಿ ಕುರುಬರ ಗುರು ಪರಂಪರೆಯನ್ನು ನಿರೂಪಿಸುವ ಎರಡು ಸಾಂಗತ್ಯ ಕೃತಿಗಳು ಲಭ್ಯವಾಗಿವೆ. ಮೊದಲನೆಯದು ಎಂ.ಎಂ. ಕಲಬುರ್ಗಿ ಮತ್ತು ಡಾ. ವೈ.ಸಿ. ಭಾನುಮತಿ ಅವರು ಸಂಶೋಧಿಸಿರುವ 'ಸಿದ್ದಮಂಕ ಚರಿತೆ', ಎರಡನೆಯದಾಗಿ ಡಾ. ಎಂ.ಎಂ. ಕಲಬುರ್ಗಿ, ಡಾ. ಎಫ್.ಟಿ. ಹಳ್ಳಿಕೇರಿ ಮತ್ತು ಸಿ.ಕೆ. ಪರಶುರಾಮಯ್ಯ ಅವರು ಸಂಪಾದಿಸಿರುವ 'ತಗರ ಪವಾಡ' ಗ್ರಂಥಗಳು ಬಹುಮುಖ್ಯವಾಗಿವೆ.

"ತಗರ ಪವಾಡ ಕೃತಿಗೆ ಮೂಲ ಆಕರಗಳೆಂದರೆ ತುಮಕೂರು ಜಿಲ್ಲೆಯ ಚಿಕ್ಕನಾಯ್ಕನಹಳ್ಳಿಯ ರೇವಣಸಿದ್ಧೇಶ್ವರ ಮಠದಲ್ಲಿ ಸಿಕ್ಕ ಕಾಗದದ ಹಸ್ತಪ್ರತಿ ಮತ್ತು ತುಮಕೂರು ಜಿಲ್ಲೆ ತುರುವೇಕೆರೆ ತಾಲೂಕಿನ ಶ್ರೀ ರೇವಣಸಿದ್ಧೇಶ್ವರ ಮಠದ ಹರಿವಾಣದ ಗೌಡರಾದ ಶ್ರೀ ಪರಶೇಗೌಡ ಅವರಲ್ಲಿದ್ದ ಐದು ತಾಮ್ರ ಪತ್ರಗಳು."[೨೫]

ಈ ಕೃತಿ ಕುರುಬರ ಗುರು ಶಾಂತಮುತ್ತಯ್ಯನ ಚರಿತ್ರೆಯನ್ನು ನಿರೂಪಿಸುವ ಸಾಂಗತ್ಯ ಕೃತಿ. ಕುರುಬರ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಸಂಗತಿಗಳನ್ನು ಸವಿಸ್ತಾರವಾಗಿ ತಿಳಿಸುವ ಕೃತಿ. ಹನ್ನೆರಡನೆಯ ಶತಮಾನದಲ್ಲಿ ನಡೆದಿರಬಹುದಾದ ಸಾಮಾಜಿಕ ಏಕೀಕರಣವನು ಸಾರುವ ಚಾರಿತ್ರಿಕ ಮಹತ್ವದ ಕೃತಿ ಇದಾಗಿದೆ.

ತಗರ ಪವಾಡ ಕೃತಿಯ ಕಥಾಸಾರ ಮತ್ತು ವೈಶಿಷ್ಟ್ಯ :

ತಗರ ಪವಾಡ ಕೃತಿಯು ಎಂಟು ಸಂಧಿಗಳಿಂದ ಕೂಡಿದ ೬೪೯ ಸಾಂಗತ್ಯ ಪದ್ಯಗಳನ್ನು ಒಳಗೊಂಡ ಗ್ರಂಥ. ಈ ಗ್ರಂಥದ ಕರ್ತೃವಿನ ಮತ್ತು ಕಾಲದ ಬಗ್ಗೆ ಎಲ್ಲಿಯೂ ಆಧಾರಗಳು ದೊರೆತಿಲ್ಲ. ಪ್ರತಿಕಾರನು ಗ್ರಂಥದಲ್ಲಿ ಎಲ್ಲಿಯೂ ತನ್ನ ಹೆಸರನ್ನಾಗಲಿ, ಕಾಲವನ್ನಾಗಲಿ ತಿಳಿಸಿಲ್ಲ. ಕವಿ ಚರಿತ್ರೆಯಲ್ಲೂ ಕೂಡ ಈ ಗ್ರಂಥದ ಹೆಸರು ಬಂದಿಲ್ಲ. ಆದರೆ ಎರಡನೆಯ ಸಂಧಿಯ ಮೊದಲ ಪದ್ಯದಲ್ಲಿ "ವಿವರಿಸಿ ಪೇಳ್ವ ಸಿದ್ದೇಶ" ಎಂಬ ಉಕ್ತಿ ಇರುವುದರಿಂದ ಇದನ್ನು ಬರೆದವನು ಸಿದ್ದೇಶ ಎಂದು ಸಂಶೋಧಕರು ಊಹಿಸಿದ್ದಾರೆ.

ಈ ಕೃತಿಯ ನಾಯಕ 'ಸರವೂರು ಶಾಂತ ಮುತ್ತಯ್ಯ' ಎಂಬುದು ಖಚಿತವಾಗಿದೆ. ಈತನು ಪದುಮಣ್ಣನ ಮೊದಲ ಹೆಂಡತಿ ಲಿಂಗಮ್ಮನ ಮಗ. ಪದುಮಣ್ಣನ ಮೊದಲನೆಯ ಹೆಂಡತಿಯ ಮಕ್ಕಳು. 'ಹತ್ತಿ ಕಂಕಣವರೆಂದೂ', ಎರಡನೆಯ ಹೆಂಡತಿಯ ಮಕ್ಕಳು 'ಉಣ್ಣೆ ಕಂಕಣ'ದವರೆಂದೂ ಇಲ್ಲಿ ಕುರುಬರಲ್ಲಿಯ ಕಂಕಣ ಬೇಧವನ್ನು ಈ ಕೃತಿಯು ದಾಖಲಿಸುತ್ತದೆ. ಪದುಮಣ್ಣನ ಮಗನಾದ ಒಬ್ಬ ಮಹಾನ್ ಶಿವಭಕ್ತ. ಸಿದ್ಧ ಪುರುಷನೆಂಬುದು ಒಂದು ಕರಗ ಅಂಬಲಿಯಲ್ಲಿ ಒಂಬತ್ತು ಲಕ್ಷ ಜಂಗಮರಿಗೆ ಪ್ರಸಾದವನ್ನು ಮಾಡಿಸುವುದು, 'ಚಕೋರ ಹೊಳೆ'ಯಲ್ಲಿ ನಿಂತು ಧ್ಯಾನ ಮಾಡುವಾಗ ತೊಡರು ಮಾಡಲು ಬಂದ ಬಂಡಿಗಳನ್ನೆಲ್ಲಾ ನುಚ್ಚುನೂರಾಗಿಸಿ ಮತ್ತೆ ಅವುಗಳನ್ನೆಲ್ಲಾ ಒಂದಾಗಿಸಿ ಬಂಡಿಕಾರರಿಂದ ಶಿವನಿಗಾಗಿ ಒಂದು ದೇವಾಲಯವನ್ನು ನಿರ್ಮಿಸಿದ ಪ್ರಸಂಗಗಳಿಂದ ಸ್ಪಷ್ಟವಾಗುತ್ತದೆ. ಆತನ ಭಕ್ತಿಗೆ ಮೆಚ್ಚಿದ ಶಿವನು ದರ್ಶನವನ್ನು ನೀಡಿ ದೀಕ್ಷೆಯನ್ನು ಕೊಡುತ್ತಾನೆ. ಆತನ ದೀಕ್ಷೆಯ ಸಮಯದಲ್ಲಿ ಕರಿಯ ಮಲ್ಲಿಗೆ ಸರಗಳು ಸುರಿದಿರುವುದರಿಂದ ಅದು ಪ್ರಸಿದ್ಧವಾದ 'ಸರವೂರು' ಕ್ಷೇತ್ರವಾಯಿತೆಂದು ಸರವೂರಿಗೆ ಆ ಹೆಸರು ಬಂದಿರುವುದರ ಬಗ್ಗೆ ಹೇಳಲಾಗಿದೆ. ಪ್ರಸ್ತುತ ಕೃತಿಯು ಶಿವನನ್ನು ಮತ್ತು ರೇವಣಸಿದ್ಧನನ್ನು ಭಿನ್ನವಾಗಿ ಭಾವಿಸಿರುವುದರಿಂದ ಶಾಂತಯ್ಯನಿಗೆ ದೀಕ್ಷೆಯನ್ನು ನೀಡಿದವನು ಶಿವನೋ ಅಥವಾ ರೇವಣಸಿದ್ಧನೋ ಎಂಬ ಸಂದೇಹ ಮೂಡುತ್ತದೆ. ಆದರೆ ರಸ್ತಾಪುರ ಭೀಮಕವಿಯು ಹಾಲುಮತೋತ್ತೇಜಕ ಪುರಾಣವು ಶಾಂತಯ್ಯನಿಗೆ ದೀಕ್ಷೆಯನ್ನು ನೀಡಿದವನು ರೇವಣಸಿದ್ಧನೆಂದು ಸ್ಪಷ್ಟವಾಗಿ ಹೇಳುವುದರಿಂದ

ಮತ್ತು ಒಡೆಯರುಗಳು ಕೂಡ ಇದೇ ಅಭಿಪ್ರಾಯವನ್ನು ಹೇಳುವುದರಿಂದ ಶಾಂತಯ್ಯನಿಗೆ ದೀಕ್ಷೆಯನ್ನು ನೀಡಿದವನು ರೇವಣಸಿದ್ಧನೆಂದು ಹೇಳಬಹುದು. ಇದು ಈ ಕೃತಿಯ ಪ್ರಮುಖ ಸಂಗತಿಯಾಗಿದೆ. ಕಲ್ಯಾಣ ಪಟ್ಟಣದೊಳಗೆ ಹಾಲಕಂಬಿಯ ಮೇಲೆ ಸತ್ತ ಕುರಿಯನ್ನು ಹೊತ್ತು ಮಾರಿದ ಪ್ರಮಾದಕ್ಕೆ ಹನ್ನೆರಡು ವರ್ಷ ಬಹಿಷ್ಕಾರಕ್ಕೆ ಒಳಗಾದ ಕುರುಬರನ್ನು ಬಿಜ್ಜಳ, ಬಸವಣ್ಣ ಮುಂತಾದ ನೆರೆದ ಜನ ಸಮ್ಮುಖದಲ್ಲಿ ಸತ್ತಿರುವ ತಗರನ್ನು ಬದುಕಿಸಿ ತಗರ ಪವಾಡ ಮೆರೆದು ಬಹಿಷ್ಕಾರಕ್ಕೆ ಒಳಗಾದ ಕುರುಬರನ್ನು ಮತ್ತೆ ಕಲ್ಯಾಣ ಪಟ್ಟಣದೊಳಗೆ ಬರುವಂತೆ ಮಾಡುತ್ತಾನೆ. ಅದೇ ಸಂದರ್ಭದಲ್ಲಿ ಬಸವಣ್ಣನರು ಕುರುಬ ಕುಲಕ್ಕೆ ಒಡೆಯನನ್ನಾಗಿ ಅವರ ಕುರುಹಾಗಿ ಮೂರೇಣಿನ ಕಂಥೆಯನ್ನು ನೀಡಿ ಶಾಂತಯ್ಯನನ್ನು ಕುರಿತು ಆಡುವ ಮಾತುಗಳು ಅವನ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ.

ಸಿದ್ಧಮಮಂಕ ಚರಿತ್ರೆ ಮತ್ತು ತಗರ ಪವಾಡ ಕೃತಿಗಳ ನಡುವಿನ ಹೋಲಿಕೆ ಮತ್ತು ವ್ಯತ್ಯಾಸಗಳು

ಕುರುಬರ ಗುರು ಪರಂಪರೆ ಪ್ರಾಚೀನತೆ ಮತ್ತು ವೈಶಿಷ್ಟ್ಯವನ್ನು ಅರಿಯಲು ಮತ್ತು ಕುಲಂಕೂಷವಾಗಿ ಅಧ್ಯಯನ ಮಾಡಲು ಈ ಎರಡು ಗ್ರಂಥಗಳು ಸಮಗ್ರವಾದ ಸಾಮಗ್ರಿಯನ್ನು ಒದಗಿಸುತ್ತವೆ.

೧. ಈ ಕೃತಿಗಳನ್ನು ಓದಿದಾಗ ಈ ಎರಡರಲ್ಲಿಯೂ ಇರುವ ವಿಷಯವು ಕಲ್ಯಾಣ ಎಂಬ ಊರಿನಲ್ಲಿ ಇದ್ದ ಕುರುಬರು ಹಾಲಿನ ಅಡ್ಡೆಯ ಮೇಲೆ ಸತ್ತ ಕುರಿಯನ್ನು ಊರೊಳಕ್ಕೆ ತಂದಿದ್ದರಿಂದ ಶರಣರು ಕುರುಬರನ್ನು ರಟ್ಟ ಮತದವರೆಂದು ಪರಿಗಣಿಸಿ ಕಲ್ಯಾಣದ ಪಟ್ಟಣದಿಂದ ಹೊರಕ್ಕೆ ಏಳು ಬೇಲಿಗಳಿಂದ ಆಚೆ ಹಾಕಿದ್ದ ಪ್ರಸಂಗಕ್ಕೆ ಸಂಬಂಧಿಸಿದುದು. ಈ ಘಟನೆಯನ್ನು ಗಮನಿಸಿದರೆ ೧೨ನೆಯ ಶತಮಾನದಲ್ಲಿದ್ದ 'ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು' ಎಂಬ ಮಾತು ಸುಳ್ಳೆಂದು ತಿಳಿದುಬರುತ್ತದೆ. ವಚನಕಾರರಲ್ಲೂ ಜಾತಿಯತೆಯ ಬೀಜ ಆಳವಾಗಿ ಬೇರೂರಿತ್ತು ಎಂಬ ವಿಷಾದನೀಯ ಅಂಶ ತಿಳಿದುಬರುತ್ತದೆ.

೨. ಸಿದ್ದಮಂಕ ಚರಿತ್ರೆಯಲ್ಲಿ ಬರುವ ಮರುಳಮಂಕ ಮತ್ತು ತಗರ ಪವಾಡದಲ್ಲಿ ಬರುವ ಶಾಂತಮುತ್ತಯ್ಯ ಇಬ್ಬರೂ ಕುರುಬರ ಉದ್ಧಾರಕ್ಕಾಗಿ ಗುರುಕೃಪೆಯಿಂದ ಬಂದವರಾಗಿದ್ದಾರೆ. ಇಬ್ಬರೂ ಸಾಕ್ಷಾತ್ ಶಿವನಿಂದಲೇ ಆಶೀರ್ವಾದ ಪಡೆದು ವರ ಪಡೆದಿರುವಂತವರಾಗಿದ್ದಾರೆ. ಇದನ್ನು ಗಮನಿಸಿದರೆ ಶಿವನು ಪರೋಕ್ಷವಾಗಿ ಕುರುಬರ ಧಾರ್ಮಿಕ ಉದ್ಧಾರಕ್ಕಾಗಿ ನೆಲೆ ನಿಂತಿದ್ದ ಎಂಬ ವಿಷಯ ತಿಳಿದುಬರುತ್ತದೆ. ಅಲ್ಲದೆ ಕುರುಬ ಜನಾಂಗದವರು ಶಿವನು ಮೆಚ್ಚುವಂತಹ ಕೆಲಸ ಕಾರ್ಯಗಳನ್ನು, ಧಾರ್ಮಿಕ ಆಚರಣೆಗಳನ್ನು ನಡೆಸುತ್ತಿದ್ದರು ಎಂಬುದು ಗೊತ್ತಾಗುತ್ತದೆ.

೩. ಈ ಎರಡೂ ಕೃತಿಯ ಕಥಾನಾಯಕರು ತಮ್ಮ ಪವಾಡವನ್ನು ಮೆರೆಯುವುದರ ಮೂಲಕ ಕಲ್ಯಾಣದ ಶಿವಶರಣರ ಮನಸ್ಸನ್ನು ಗೆಲ್ಲುತ್ತಾರೆ. ಅಂದಿನ ಬಸವಾದಿ ಪ್ರಮಥರು ಮತ್ತು ಶರಣರ ಸಮ್ಮುಖದಲ್ಲಿ ಸತ್ತ ತಗರನ್ನು ಬದುಕಿಸಿ, ಪವಾಡವನ್ನು ಮೆರೆದ ಶಾಂತಮುತ್ತಯ್ಯನ್ನು ಶರಣ ಸಮುದಾಯದ ಮನ್ನಣೆಗೆ ಪಾತ್ರವಾದ ಪ್ರಸಂಗ ತಗರ ಪವಾಡ ಗ್ರಂಥದಲ್ಲಿ ವಿಸ್ತಾರವಾಗಿ ತಿಳಿದುಬರುತ್ತದೆ. ಅದೇ ರೀತಿ ಬಂಡೆಯ ಮೇಲಿನ ಸೂಜಿಯ ಮೇಲೆ ಮಂಡೆಯನ್ನು ನಿಲ್ಲಿಸಿ ಉಗ್ರತಪಸ್ಸನ್ನು ಮಾಡಿ ಸಿದ್ಧರಾಮರಾದಿಯಾಗಿ ಸಕಲ ಶರಣರ ಮನ್ನಣೆಯನ್ನು ಸಿದ್ಧಮಂಕ ಚರಿತೆಯ ಮರುಳಮಂಕನು ಗಳಿಸುತ್ತಾನೆ. ಇಂತಹ ಪವಾಡಗಳ ಮೂಲಕ ಜನರ ಕಣ್ಣಿಗೆ ಪವಾಡ ಪುರುಷರಾಗಿ, ದೈವರೂಪದ ಸ್ವರೂಪಿಗಳಾಗಿ ಕಂಡುಬರುತ್ತಾರೆ.

೪. ಈ ಇಬ್ಬರು ಕಥಾನಾಯಕರ ಗುರಿ ಒಂದೇ ಆಗಿರುತ್ತದೆ. ಶರಣರಿಂದ ಹೊರದಬ್ಬಲ್ಪಟ್ಟ ಕುರುಬರನ್ನು ಕಲ್ಯಾಣ ಪಟ್ಟಣದೊಳಗೆ ಕರೆತರಬೇಕೆಂಬ ಛಲ, ಈ ಇಬ್ಬರು ನಾಯಕರ ನಿಷ್ಠೆ, ಹೋರಾಟ, ಲಿಂಗ ಜಂಗಮ ಪ್ರೀತಿ, ಆವಜ್ಞೆಗೆ ಒಳಗಾಗಿದ್ದ ತಮ್ಮ ಕುಲ ಬಾಂಧವರನ್ನು ಅಸ್ಪೃಶ್ಯರೆಂಬ ಕಳಂಕದಿಂದ ವಿಮುಕ್ತರನಾಗಿ ಮಾಡಬೇಕೆಂಬ ಅಂತಃಕರಣ ತುಂಬಿದ ಕಳಕಳಿ ಈ ಕಾವ್ಯದಲ್ಲಿ ದಟ್ಟವಾಗಿ ಮೂಡಿದೆ. ಪರಿಣಾಮವಾಗಿ ಈ ಇಬ್ಬರು ಮೂಲ ಪುರುಷರು ನಾಡಿನ ಕುರುಬ ಸಮಾಜಕ್ಕೆ ಗುರು ಸ್ಥಾನದಲ್ಲಿರುವ ಮಾರ್ಗದರ್ಶಕರೆಂದು ಸ್ವತಃ ಗುರುಲಿಂಗ ಜಂಗಮ ಪ್ರೇಮ, ಸಮಾಜ ಸುಧಾರಕ, ಭಕ್ತಿಭಂಡಾರಿ ಬಸವಣ್ಣನ ಸಮ್ಮುಖದಲ್ಲಿ ನಿರ್ಣಯವಾದ ಪ್ರಸಂಗವು ಈ ಎರಡೂ ಗ್ರಂಥಗಳಲ್ಲಿ ವಿಸ್ತಾರವಾಗಿ ಬಂದಿದೆ. ಈ ಕೃತಿಗಳ ವಸ್ತು ಒಂದೇ ಆದರೂ ಇಬ್ಬರು ಕವಿಗಳೂ ಈ ಆಶಯವನ್ನು ಬೇರೆ ಬೇರೆ ರೀತಿಯಲ್ಲಿ ನಿರೂಪಿಸಿದ್ದಾರೆ.

೫. ಎರಡು ಕೃತಿಗಳ ಕಥಾನಾಯಕರು ಕುರುಬ ಕುಲದಲ್ಲಿ ಜನಸಿದವರೇ ಆಗಿದ್ದಾರೆ. ಅವರ ಉದ್ದೇಶವನ್ನು ಈಡೇರಿಸಿ ಕುರುಬ ಸಮಾಜದ ಗುರು ಸ್ಥಾನವನ್ನು ನೀಡಿ ಧರೆಗೆ ಪರಿಚಯಿಸಿ ಆಶೀರ್ವಾದಿಸಿದ ಪ್ರಸಂಗವು ಅತ್ಯಂತ ಕತೂಹಲಭರಿತವಾಗಿದೆ.

೩.೩. ಗದ್ಯ ಸಾಹಿತ್ಯ :

ಸಿ.ಕೆ. ಪರಶುರಾಮಯ್ಯ ಅವರು ಗದ್ಯದಲ್ಲಿ ವಿಶೇಷವಾದ ಗ್ರಂಥಗಳನ್ನು ರಚಿಸಿ ಪ್ರಕಟಿಸಿದ್ದಾರೆ. ಚೌಡಿಕೆಯವರು ಗಾದೆಗಳ ಅಂತರಂಗ, ಪ್ರಾಚೀನ ಆದರ್ಶ ಬಾಲಕರು ಮತ್ತು ಕರುಳ ಬಳ್ಳಿ ಇದಕ್ಕೆ ನಿದರ್ಶನವಾಗಿವೆ. ಅವುಗಳ ಬಗ್ಗೆ ಈ ರೀತಿ ಅವಲೋಕಿಸಲಾಗಿದೆ.

೧. ಚೌಡಿಕೆಯವರು :

ಸಂಪ್ರದಾಯ ಆಚರಣೆಗಳ ಬಗ್ಗೆ ತನ್ನದೇ ಆದ ವಿಶಿಷ್ಟ ಆಸಕ್ತಿ, ಅಭಿಪ್ರಾಯ, ಕುತೂಹಲಗಳನ್ನು ಇಟ್ಟುಕೊಂಡಿರುವ ಸಿ.ಕೆ.ಪಿ. ಅವರು ದಟ್ಟ ಧಾರ್ಮಿಕ ಕುರುಬ ಜನಾಂಗಕ್ಕೆ ಸೇರಿದವರು. ಈ

ಜನಾಂಗದ ಆಚಾರ, ವಿಚಾರ, ರೂಢಿ, ಸಂಪ್ರದಾಯ, ನೈತಿಕ ನಿಯಮಗಳ ಬಗ್ಗೆ ಒಲವನ್ನು ಇಟ್ಟುಕೊಂಡ ಇವರು ಸಂಶೋಧನೆಯ ಮೂಲಕ ಈ ಸಂಪ್ರದಾಯಗಳ ಒಳತಿರುವುಗಳನ್ನು ಹೆಕ್ಕಿ ತೆಗೆಯುವ ಪ್ರಯತ್ನವನ್ನು ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿಯೇ ಪ್ರಕಟವಾದ ಕೃತಿ 'ಚೌಡಿಕೆಯವರು'.

'ಚೌಡಿಕೆಯವರು' ಈ ಕೃತಿಯು "ಸಂಪ್ರದಾಯ ಮತ್ತು ಆಚರಣೆ"ಯ ಕುರಿತ ಅಧ್ಯಯನ ಕೃತಿ. ಚಿಕ್ಕನಾಯಕನಹಳ್ಳಿಯ ಕುರುಬ ಜನಾಂಗದ ಶ್ರೀರೇಣುಕಾಯಲ್ಲಮ್ಮ ದೇವಿಯ ಸ್ತುತಿ ಪರಂಪರೆಯಲ್ಲಿ ಬಂದಿರುವ ಗ್ರಂಥ. ಇಲ್ಲಿ ಚಿಕ್ಕನಾಯಕನಹಳ್ಳಿ ಮತ್ತು ಶಿರಾ ತಾಲೂಕಿನ ಸುತ್ತಮುತ್ತಣ ಪ್ರದೇಶ ಹಾಗೂ ಮೈಸೂರು ಜಿಲ್ಲೆಯ ಹುಣಸೂರು ಪಟ್ಟಣದಲ್ಲಿರುವ ಕುರುಬ ಜನಾಂಗದ ಚೌಡಿಕೆ ವಂಶಸ್ಥರು. ತಲೆತಲಾಂತರಗಳಿಂದ ಪಾಲಿಸಿಕೊಂಡು ಬಂದಿರುವ ಸಂಪ್ರದಾಯಗಳಿಗೆ ಮಾತ್ರ ಸೀಮಿತವಾಗಿದೆ.

ಸಂಸ್ಕೃತಿ ಪ್ರಿಯರಾದ ಸಿ.ಕೆ.ಪಿ. ಅವರು ನೇರ ಚೌಡಿಕೆ ಸಂಪ್ರದಾಯಕ್ಕೆ ಸೇರಿದವರು. ಅದೇ ವಂಶಸ್ಥರು ಸ್ವತಃ ಚೌಡಿಕೆ ದೀಕ್ಷೆ ಪಡೆದವರು. ತಂದೆ-ತಾತಂದಿರ ಆಚರಣೆಗಳನ್ನು ಕಣ್ಣಾರೆ ಕಂಡವರು. ತಾವು ಭಾಗವಹಿಸಿ ಧನ್ಯರಾದವರು. ದೈವ, ಧರ್ಮದ ಬಗ್ಗೆ ಅಚಲವಾದ ನಂಬಿಕೆ ಉಳ್ಳವರಾಗಿದ್ದರಿಂದ ಚೌಡಿಕೆ ಸಂಪ್ರದಾಯಕ್ಕೆ ಸಂಬಂಧಿಸಿದ ಅವರ ಅನುಭವದ ಮಾತುಗಳು ಸತ್ಯಕ್ಕೆ ಹತ್ತಿರವಾಗಿವೆ. ಅರ್ಥಪೂರ್ಣ ಸತ್ವಯುತವುಗಳಾಗಿವೆ.

ಈ ಕೃತಿಯಲ್ಲಿ ಚೌಡಿಕೆ, ಭಂಡಾರ ಮತ್ತು ಹಡಲಿಗೆಯ ವಿವರಣೆಯನ್ನು ಸಂಗ್ರಹಿಸಿ ವಿವರಿಸಿದ್ದಾರೆ. ಅಷ್ಟೇ ಅಲ್ಲದೆ ಇಲ್ಲಿ ವಿಶಿಷ್ಟವಾದ ಚೌಡಿಕೆ, ಗೀತ ಗಾಯನ, ಚೌಡಿಕೆ ವಾದ್ಯ ತಯಾರಿಕೆ, ಜೋಗಪ್ಪ-ಜೋಗತಿಯರ ದೀಕ್ಷೆ, ಚೌಡಿಕೆಯವರ ಆಚರಣೆ, ಶಕ್ತಿ ದೇವತೆ ಯಲ್ಲಮ್ಮ ದೇವಿಯ ಜಾತ್ರೆ ಅದರಲ್ಲಿ ಪಾಲ್ಗೊಳ್ಳುವವರ ಬಗ್ಗೆ ಪ್ರಸ್ತಾಪವಿದೆ. "ಚೌಡಿಕೆಯವರ ವಿಶಿಷ್ಟ ಆರಾಧನೆಯಾದ 'ಸಾಖೀ ಪೂಜೆ'ಯ ಪ್ರಸ್ತಾಪದಲ್ಲಿ 'ಸಾಖೀ' ಶಬ್ದದ ಮೂಲವನ್ನು ಒಳಹೊಕ್ಕು ನೋಡಿದ್ದಾರೆ. ಜೊತೆಗೆ ಕೇಲ್, ಘಟ, ತಂತ್ರಾಣಿ, ಕರಿಬಾನು ಸಾಲು ಮುಂತಾದ ಮಣ್ಣಿನ ಪವಿತ್ರ ಪರಿಕರಗಳ ಬಗ್ಗೆ ಕೊಟ್ಟಿರುವ ವಿಶ್ಲೇಷಣಾತ್ಮಕ ವಿವರಣೆಯು ಚೌಡಿಕೆಯವರ ಆಚರಣೆಯಲ್ಲಿ ಮಣ್ಣಿನಿಂದ ಮಾಡಿದ ಈ ವಸ್ತುಗಳಿಗೆ ಇರುವ ಪಾವಿತ್ರ್ಯತೆ ಮತ್ತು ಪ್ರಾಮುಖ್ಯತೆಯನ್ನು ಪರಿಚಯಿಸುತ್ತದೆ."[೨೬]

ನಿರ್ಧಿಷ್ಟ ಪ್ರದೇಶದ, ನಿರ್ಧಿಷ್ಟ ಜನರ ರೋಗ-ಕಾಯಿಲೆಗಳ ನಿವಾರಣೆಗೆ ಹುಟ್ಟಿಕೊಂಡ ಗಡಿ ದೇವತೆ ಅಥವಾ ಗ್ರಾಮದೇವತೆ ಯಲ್ಲಮ್ಮ ಅಸಾಧಾರಣ, ಅಲೌಕಿಕ ಶಕ್ತಿ ದೇವತೆಯಾಗಿ

ಬೆಳೆದಿರುವುದು ಹಲವು ಪುರಾಣ, ಐತಿಹಾಸಿಕ ಕಥೆಗಳಿಗೆ ಕಾರಣವಾಗಿದೆ. ಜನರ ಸಂರಕ್ಷಣೆಯ ಜೊತೆಗೆ ಸಮೃದ್ಧಿ ದೇವತೆಯಾಗಿಯೂ ರೂಪಗೊಂಡಿದೆ. "ಚೌಡಿಕೆಯವರಿಗೆ ಯಲ್ಲಮ್ಮದೇವಿ 'ಮನದೇವಿ', 'ಮನೆದೇವಿ' ಮನನದೇವಿಯಾಗಿ ರಾರಾಜಿಸುತ್ತಿದ್ದಾಳೆ. ಇಲ್ಲಿ ಲೇಖಕರು ಭಕ್ತಿ-ಗೌರವದಿಂದ ಯಲ್ಲಮ್ಮನ ಆರಾಧನೆಯ ವಿಧಿ-ವಿಧಾನಗಳನ್ನು ವಿಶದೀಕರಿಸಿದ್ದಾರೆ. ಲೇಖಕರ ಶೋಧನೆಯ ಫಲಿತಗಳು ನಮ್ಮ ಸನಾತನ ಸಾಂಸ್ಕೃತಿಕ ಪರಿಕಲ್ಪನೆಗೆ ನೆರವಾಗುತ್ತದೆ."[೨೭]

ಚೌಡಿಕೆಯವರು ಯಲ್ಲಮ್ಮನ ಪೂಜಾ ಸಂದರ್ಭದಲ್ಲಿ ಬಳಸುವ ಕೆಲವು ಪ್ರಾಚೀನ ವಸ್ತುಗಳನ್ನು ಇಂದಿಗೂ ಉಳಿಸಿಕೊಂಡು ಬಂದಿದ್ದಾರೆ ಎಂದು ಲೇಖಕರು ಹೇಳುತ್ತಾರೆ. 'ದರ್ಶನ ಮಣಿಗಳು', 'ರುದ್ರಾಕ್ಷಿ ಮಣಿಗಳು', 'ಕಾಯಿಕೋಲ' ಇನೂ ಮುಂತಾದ ಪ್ರಾಚೀನ ಮಾತ್ರ ಪೂಜೆಯ ನಿಗೂಢ ಸಂಕೇತಗಳು ಅವಶೇಷಗಳಂತೆ ಈಗಲೂ ಉಳಿಸಿಕೊಂಡು ಬಂದಿರುವುದು ಚೌಡಿಕೆಯರಿಗೆ ಪ್ರಾಚೀನ ವಸ್ತುಗಳ ಮೇಲಿದ್ದ ಭಕ್ತಿ, ಆಸಕ್ತಿ, ಕಾಳಜಿಯನ್ನು ಎತ್ತಿ ಹಿಡಿಯುತ್ತದೆ.

ಈ ಕೃತಿಯಲ್ಲಿರುವ ಇನ್ನೊಂದು ಕುತೂಹಲಕಾರಿಯಾದ ಅಂಶವೆಂದರೆ 'ಜೋಗಿತಿ ಸಂಪ್ರದಾಯ' ಇದು ಪೂರ್ವಕಾಲದಿಂದಲೂ ನಡೆದುಕೊಂಡು ಬಂದಿರುವ ಪದ್ಧತಿ. ಉತ್ತರ ಕರ್ನಾಟಕದ ಬೆಳಗಾವಿ, ಧಾರವಾಡ, ವಿಜಯಪುರ, ಕಲಬುರಗಿ, ರಾಯಚೂರು, ಬಳ್ಳಾರಿ ಜಿಲ್ಲೆಯ ಹುಲಿಗಿ, ಶಿವಮೊಗ್ಗ ಜಿಲ್ಲೆಯ ಚಂದ್ರಗುತ್ತಿಗಳಲ್ಲಿ, ತುಮಕೂರು ಜಿಲ್ಲೆಯ ಅಲ್ಲಲ್ಲಿ ಈ ಸಂಪ್ರದಾಯ ವ್ಯಾಪಿಸಿದೆ. ಇಂದಿನ ಆಧುನಿಕ ಯುಗದಲ್ಲಿ ಈ ಪದ್ಧತಿಯನು ತೊಡೆದು ಹಾಕಬೇಕೆಂಬ ಸರ್ಕಾರ ಮತ್ತು ಸ್ವಯಂ ಸೇವಾಸಂಸ್ಥೆಗಳ ಸತತ ಪ್ರಯತ್ನದ ನಡುವೆಯೂ ಈ ಪದ್ಧತಿಯು ಇನ್ನೂ ಮುಂದುವರೆದಿರುವುದು ವಿಷಾದನೀಯ ಸಂಗತಿ. ಇದನ್ನು ಅನುಸರಿಸುತ್ತಿರುವ ಪ್ರಮುಖ ವರ್ಗವೆಂದರೆ ಹರಿಜನರು ತಮ್ಮ ಮನೆತನದ ಒಬ್ಬ ಹೆಣ್ಣು ಮಗಳಿಗಾದರೂ ದೇವಿಯ ಹೆಸರಿನಲ್ಲಿ ಜೋಗಿತಿ ದೀಕ್ಷೆ ಕೊಡುತ್ತಾರೆ. ತಾವು ದೇವಿಯ ಪ್ರಕೋಪಕ್ಕೆ ಗುರಿಯಾಗುತ್ತೇವೆ ಎಂಬ ರೂಢಮೂಲವಾದ ಮತ್ತು ಭಯವೇ ಈ ಪದ್ಧತಿಯು ಇನ್ನೂ ಅಸ್ತಿತ್ವದಲ್ಲಿರಲು ಮುಖ್ಯ ಕಾರಣ. ಇದರ ಜೊತೆಗೆ ಬಡತನ, ಅನಕ್ಷರತೆ, ಬಲಾಢ್ಯ ಜನರ ಶೋಷಣೆಯಿಂದಾಗಿಯೂ ಈ ಪದ್ಧತಿಯನ್ನು ತೊಡೆದು ಹಾಕುವ ಪ್ರಯತ್ನಕ್ಕೆ ನಿರೀಕ್ಷಿತ ಫಲ ಸಿಕ್ಕಿಲ್ಲ. ಆದರೂ ಈ ನಿಟ್ಟಿನಲ್ಲಿ ಜನರ ಮನ ಒಲಿಸುವ ಕಾರ್ಯವಂತೂ ನಿರಂತರವಾಗಿ ಸಾಗುತ್ತಿದೆ.

ಜೋಗಿತಿ ಸಂಪ್ರದಾಯವನ್ನು ಹೇಳುತ್ತ ಅವರು ಚಿಕ್ಕನಾಯಕನಹಳ್ಳಿಯ ವಿವಿಧ ಯಲ್ಲಮ್ಮದೇವಿಯ ಗುಡಿಗಳ 'ಗೃಹಿಣಿ ಜೋಗಿತಿ'ಯವರ ಬಗ್ಗೆ ವಿವರಿಸಿದ್ದಾರೆ. ಇಲ್ಲಿ ಮದುವೆಯಾದ ಹೆಂಗಸು ಜೋಗತಿ ದೀಕ್ಷೆ ಪಡೆದು ಶ್ರೀದೇವಿಯ ಸೇವೆಗೆ ನಿಯುಕ್ತಳಾಗಿದ್ದುಕೊಂಡೇ ಗಂಡನೊಡನೆ ಬಾಳ್ವೆ

ಮಾಡುವ ಗೃಹಿಣಿ ಆಕೆ ದೇವದಾಸಿಯಲ್ಲ. ಪತಿ ಮರಣದ ನಂತರವೂ ಮುತ್ತೈದೆ, ಜೋಗತಿಯರ ಕೊರಳಲ್ಲಿ ದೇವಿಯ ಸಂಕೇತವಾದ ದರ್ಶನದ ಬಿಳಿಮಣಿ ಮತ್ತು ಗೃಹಣಿಯ ಸಂಕೇತವಾದ ಮಾಂಗಲ್ಯ ಎರಡೂ ಇರುತ್ತವೆ. ಇದು ಸ್ತ್ರೀಕುಲಕ್ಕೆ ಸಂದಿರುವ ಒಂದು ಸಾಮಾಜಿಕ ಮನ್ನಣೆ. ಚಿಕ್ಕನಾಯಕನಹಳ್ಳಿಯ ಗ್ರಾಮ ದೇವತೆ ಶ್ರೀ ಮಾವುರದ ಯಲ್ಲಮ್ಮದೇವಿಯ ವಾರ್ಷಿಕ ಜಾತ್ರೆಯ ವೈಶಿಷ್ಟ್ಯ ಮತ್ತು ವೈಭವದ ವಿವರಣೆಯನ್ನು ಕಣ್ಣಿಗೆ ಕಟ್ಟುವಂತೆ ಸ್ವ ಅನುಭವದಿಂದ ಜಾನಪದೀಯ ಶೈಲಿಯಲ್ಲಿ ವಿವರಿಸಿದ್ದಾರೆ.

ಇಲ್ಲಿ ಕುರುಬ ಜನಾಂಗದ ಸಂಪ್ರದಾಯ, ಆಚರಣೆಗಳನ್ನು ಹೇಳುವುದರ ಜೊತೆಗೆ ಈ ಜನಾಂಗದ ನಾಲ್ಕು ವಂಶಸ್ಥರನ್ನು ಹೆಸರಿಸುತ್ತಾರೆ. ಮೊದಲನೆಯದು 'ಕಣಿಯನ ಕುರುಬರ ವಂಶದವರು', ಎರಡನೆಯದು 'ಹಾಲುಕುರುಬ ವಂಶದವರು', ಮೂರನೆಯದಾಗಿ 'ಅರಸು ಕುಲದ ವಂಶಸ್ಥರು, ಇನ್ನು ನಾಲ್ಕನೆಯದು 'ಬೋಸಲ ಕುರುಬ' ವಂಶದವರು. ಶ್ರೀ ರೇಣುಕಾದೇವಿ ಯಲ್ಲಮ್ಮನಿಗೆ ಸಂಬಂಧಿಸಿದ ಈ ಎಲ್ಲಾ ವಂಶದ ಆಚರಣೆಗಳು ಏಕರೂಪವಾಗಿರದೆ ಭಿನ್ನತೆಯಿಂದ ಕೂಡಿರುತ್ತವೆ ಎಂದಿದ್ದಾರೆ.

ಚೌಡಿಕೆ ಮೇಳದ ಬಗ್ಗೆ ಹೇಳುತ್ತ ಮೇಳವನ್ನು ನಡೆಸುವ ಕಲಾವಿದರ ಉಡುಗೆ-ತೊಡುಗೆ ಬಹುಮುಖ್ಯವಾಗಿವೆ. ಜೋಗಯ್ಯನಾದವನು ಬಿಳಿ ಅಥವಾ ಹಳದಿ ಬಣ್ಣದ ಪಂಚೆ, ಬಿಳಿ ನಿಲುವಂಗಿ ಮೇಲೆ ಕರಿಕೋಟು, ಅದರ ಮೇಲೆ ಕೊರಳಿನಿಂದ ಎರಡು ಕಡೆ ಇಳಿಬಿಟ್ಟ ಬಿಳಿಧೋತ, ತಲೆಗೆ ಹಳದಿ ಕೆಂಪು ಅಥವಾ ಬಿಳಿ ಪೇಟ, ಕಾಲಿಗೆ ಗೆಜ್ಜೆ, ಹಣೆಯಲ್ಲಿ ಭಂಡಾರದ ಬೊಟ್ಟು, ಕೊರಳಲ್ಲಿ ದರುಶನದ ಮಣಿ ಧರಿಸುತ್ತಾರೆ. ಜೋಗಿತಿಯರು ಕೆಂಪು, ಹಸಿರು, ಹಳದಿ ಬಣ್ಣಗಳ ದೊಡ್ಡ ಸೀರೆ, ಕುಪ್ಪಸ, ಕೈತುಂಬ ಕೆಂಪು ಅಥವಾ ಕಪ್ಪು ಬಳೆ ತೊಟ್ಟಿರುತ್ತಾರೆ. ಹೀಗೆ ಚೌಡಿಕೆಯವರ ಉಡುಗೆ-ತೊಡುಗೆ ಮತ್ತು ಆಭರಣ, ಅಲಂಕಾರಗಳನ್ನು ವರ್ಣಿಸಲಾಗಿದೆ. ಹೀಗೆ ಅಲಂಕೃತರಾದ ಜೋಗಯ್ಯ-ಜೋಗಿತಿಯರು ಹಾಡಿ, ಕುಣಿದು, ಕುಪ್ಪಳಿಸಿ ಪ್ರೇಕ್ಷಕರ ಮನಗೆಲ್ಲುವ ಕಲೆ ಹೊಂದಿರುತ್ತಾರೆ.

ಚೌಡಿಕೆಯವರು ಪೌರಾಣಿಕ, ರಾಮಾಯಣ ಮತ್ತು ಮಹಾಭಾರತದಂತಹ ಮಹಾಕಾವ್ಯಗಳ ಕಥಾವಸ್ತುವನ್ನೇ ಆಧರಿಸಿ ಕಥೆಕಟ್ಟಿ ಪೂರಕವಾಗಿ ಹೇಳುತ್ತಾರೆ. ಇಲ್ಲಿ ಯಲ್ಲಮ್ಮದೇವಿಯ ಮೇಲೆ ಪ್ರೀತಿ, ವಿಶ್ವಾಸ ಮತ್ತು ಭಕ್ತಿಯನ್ನು ಹುಟ್ಟಿಸಿ ಮಾನವೀಯ ಮೌಲ್ಯಗುಣಗಳನ್ನು ಕಥೆ ರೂಪದಲ್ಲಿ ಬಿತ್ತರಿಸುತ್ತಾರೆ. ಸಾಮಾಜಿಕ ಹೊಣೆಗಾರಿಕೆ, ಜೀವನಾಭವ, ಜನಪದರ ಕಲೆ, ಸಾಂಸ್ಕೃತಿಕ ಆಯಾಮಗಳ ಆದರ್ಶ ನೀತಿಗಳನ್ನು ಹೇಳುವ ಮೌಢ್ಯತೆಗಳನ್ನು ತೊಲಗಿಸುವ ನಿದರ್ಶನಗಳನ್ನು ಈ ಕೃತಿಯಲ್ಲಿ ಕಟ್ಟಿಕೊಡಲಾಗಿದೆ.

ಈ ಗ್ರಂಥದ ಕೊನೆಯಲ್ಲಿ ಚೌಡಿಕೆ ಯಲ್ಲಮ್ಮನನ್ನು ಕುರಿತು ಕೆಲವು ಸ್ತುತಿ ಗೀತೆಗಳಿವೆ. ಇವುಗಳಲ್ಲಿ ಮಾಯಗಾತಿ ಯಲ್ಲಮ್ಮದೇವಿಯ ಇತಿವೃತ್ತ ಮೈದುಂಬಿಕೊಂಡಿದೆ. ಈ ಸ್ತುತಿಗೀತೆಗಳನ್ನು ಜೋಗಪ್ಪ-ಜೋಗಿತಿರಿಬ್ಬರೂ ಹಾಡುತ್ತಾರೆ.

ಇಲ್ಲಿ ಹೇಳಿರುವ ಸಂಪ್ರದಾಯ ಕಲೆಗಳು ಜೀವನೋತ್ಸಾಹ, ನೈತಿಕತೆ, ಕಷ್ಟ, ಸಹಿಷ್ಣತೆ, ಆತ್ಮ ವಿಶ್ವಾಸ, ಸಾಹಸ ಮನೋಭಾವಗಳನ್ನು ಬಿತ್ತುವ ತಾಕತ್ತಿದೆ. ಬದುಕನ್ನು ಆತ್ಮೀಯವಾಗಿ ಕಂಡು ಆರಾಧಿಸುವ ಚೈತನ್ಯವನ್ನು ತುಂಬುವ ದೃಷ್ಟಿಕೂಡ ಇದೆ.

ಒಟ್ಟಿನಲ್ಲಿ ನಮ್ಮ ಜೀವನ ವಿಧಾನಗಳು, ವಿಚಾರಗಳು ಶರವೇಗದಲ್ಲಿ ಬದಲಾಗುತ್ತಿರುವ ಸನ್ನಿವೇಶದಲ್ಲಿ ಯಲ್ಲಮ್ಮದೇವಿಯನ್ನು ಆಧಾರವಾಗಿಟ್ಟುಕೊಂಡು ಮಾಡುವಂತಹ ನೃತ್ಯ, ನಾಟಕ, ಕತೆ, ಹಾಡುಗಳು ಎಷ್ಟು ಸುಸಂಗತ? ಸಾಮಾಜಿಕ, ಸಾಂಸ್ಕೃತಿಕ, ಕಲಾತ್ಮಕ ಪರಿವರ್ತನೆಯನ್ನು ತಡೆದು ಇಂತಹ ಸಂಪ್ರದಾಯ ಕಲಾವಿದರನ್ನು ಯಥಾಸ್ಥಿತಿಯಲ್ಲಿಡಬೇಕೆ? ಅಥವಾ ಅವರನ್ನು ತಿರಸ್ಕರಿಸಬೇಕೆ? ಎಂಬ ಮುಂತಾದ ಹಲವು ಪ್ರಶ್ನೆಗಳು ನಮ್ಮನ್ನು ಕಾಡುತ್ತವೆ. ಗತಕಾಲದ್ದೆಂಬ ಒಂದೇ ಕಾರಣದಿಂದ ಈ ಕಲಾಪ್ರಕಾರವನ್ನು ಸಾರಾಸಗಟವಾಗಿ ತಳ್ಳಿಹಾಕುವ ಮುನ್ನ ಪ್ರಸ್ತುತಕ್ಕೆ ತಕ್ಕಂತೆ ಅದನ್ನು ಚಲನಶೀಲಗೊಳಿಸಿ ಜನರನ್ನು ಹಿಡಿದಿಡುವಂತೆ ಮಾಡಲು ಸಾಧ್ಯವಿದೆಯೇ? ಸೂಕ್ತ ವಾತಾವರಣವೊಂದನ್ನು ನಿರ್ಮಿಸಿ ಜಾನಪದ ಅಂಶಗಳನ್ನು ಆಧುನಿಕ ಧೋರಣೆಗೆ ಒಗ್ಗಿಸುವುದರ ಸಾಧಕ-ಬಾಧಕಗಳೇನು ಎಂಬ ಬಗ್ಗೆ ಯೋಚಿಸಬೇಕಾಗಿದೆ.

ಇಂತಹ ಜಾನಪದ ಕಲೆಗಳು ಉಳಿದು ಬಾಳಬೇಕೆಂದರೆ ಇಡೀ ಜನಸಮುದಾಯದ, ಸಮಾಜದ ಅಭಿಮಾನ, ಸಕ್ರೀಯ ಆಸಕ್ತಿ, ಪೋಷಣೆಗಳು ಬೇಕೆ ಬೇಕು. ಸರ್ಕಾರ ಪ್ರೋತ್ಸಾಹದ ನೆರವು ಅತಿ ಮುಖ್ಯವಾಗಿದೆ. ಅವರ ಆರ್ಥಿಕ ಪರಿಸ್ಥಿತಿಗಳು ಸದೃಡಗೊಳ್ಳಬೇಕು. ಚೌಡಿಕೆಯವರು ಕೇವಲ ತಮ್ಮದಾದ ಅನುವಂಶಿಕ ಕಲೆಯನ್ನು ಕಾಪಾಡಿಕೊಳ್ಳದಿದ್ದಲ್ಲಿ ಕಾಲಕ್ಕೆ ತಕ್ಕಂತೆ ಹೊಸ ದೃಷ್ಟಿ, ಹೊಸ ಸಾಧನೆ, ಹೊಸ ಸಿದ್ಧತೆ ಮಾಡಿಕೊಳ್ಳುವುದು ಅತ್ಯವಶ್ಯಕವಿದೆ.

೨. ಗಾದೆಗಳ ಅಂತರಂಗ :

ಮಾತನಾಡುವಾಗ, ಬರೆಯುವಾಗ ಗಾದೆಗಳನ್ನು ಸಂದರ್ಭೋಚಿತವಾಗಿ ಬಳಸುವುದು ರೂಢಿ. ಪಂಡಿತರು, ವಿದ್ವಾಂಸರು ತಮ್ಮ ವಾದವನ್ನು ಸಮರ್ಥನೆಗಾಗಿ ವೇದ-ಉಪನಿಷತ್ತುಗಳ ವಾಕ್ಯಗಳನ್ನು ಪ್ರಯೋಗಿಸಿದರೆ, ಜನಸಾಮಾನ್ಯರು ಗಾದೆಗಳನ್ನು ಯಥೋಚಿತವಾಗಿ ಉಪಯೋಗಿಸುತ್ತಾರೆ. ಆದ್ದರಿಂದಲೇ ಜ್ಞಾನಿಗಳಿಗೆ ವೇದವು ಗಾದೆಯಾದರೆ, ಪಾಮರರಿಗೆ ಗಾದೆಯೇ ವೇದ ಎನ್ನುವ ಮಾತು ಸತ್ಯವೆನಿಸಿವೆ.

'ಗಾದೆ' ಎನ್ನುವ ಪದವು 'ಗಾಥಾ' ಎಂಬ ಶಬ್ದದಿಂದ ಹುಟ್ಟಿಕೊಂಡಿದೆ. 'ಗಾಥಾ' ಎಂದರೆ ಹಾಡು, ಸೂಕ್ತಿ ಅಥವಾ ಸೂತ್ರ. ತಲೆಮಾರಿನಿಂದ ತಲೆಮಾರಿಗೆ ಪರಂಪರಾಗತವಾಗಿ ಹರಿದು ಬಂದ ಸೂಕ್ತಿಯೇ ಗಾದೆ. ಇದಕ್ಕೆ ಸಂವಾದಿಯಾಗಿ ನಾಣ್ಣುಡಿ, ಲೋಕೋಕ್ತಿ ಒಲ್ನುಡಿ ಮುಂತಾದ ಪದಗಳು ಇವೆ.

'ವೇದ ಸುಳ್ಳಾದರು ಗಾದೆ ಸುಳ್ಳಾಗದು' ಎಂಬ ಮಾತು ನಮ್ಮಲ್ಲಿದೆ. ಅದು ನೂರಕ್ಕೆ ನೂರರಷ್ಟು ನಿಜ. ಅದರ ಅರ್ಥ ಅನುಭವದ ಮಾತುಗಳೇ ಈ ಗಾದೆಗಳು. ಅವು ವೇದಕ್ಕಿಂತಲೂ ಬಲಿಷ್ಟ ಮತ್ತು ಸತ್ವಯುತ.

ಗಾದೆಯೆಂಬುದು ಜನಪದ ಸಾಹಿತ್ಯದ ಒಂದು ಅಂಶವಾಗಿದೆ. ಸಾರ್ವತ್ರಿಕತೆಯನ್ನು ಹೊಂದಿದರೂ ಮೂಲತಃ ಅದು ವ್ಯಕ್ತಿಯೊಬ್ಬನ ಉದ್ಗಾರವೇ ಹೌದು. ಯಾವುದೋ ವಿಶಿಷ್ಟ ಸಂದರ್ಭದಲ್ಲಿ ಒಬ್ಬರ ಮುಖದಿಂದ ಹೊಮ್ಮಿದ ಒಂದು ಉಕ್ತಿಯು ರಸಾತ್ಮಕವಾಗಿ ಚಮತ್ಕಾರ ಇದ್ದುದಾದರೆ ಅದು ಸಜೀವತೆ ಹೊಂದಿ ಚಂಡಿನಂತೆ ಪುಟಿದೇಳುತ್ತ ಒಬ್ಬರಿಂದ ಮತ್ತೊಬ್ಬರೆಡೆಗೆ ಚಲಿಸಿ ಸಾರ್ವತ್ರಿಕ ಚಲಾವಣೆಗೆ ಬರಬಹುದು. ಗಾದೆಗಳು ಎಂದೋ ಸೃಷ್ಟಿಯಾಗಿ ಮುಂದಿನ ಸಂಗತಿಗಳಲ್ಲಿ ಚಲನಶೀಲವಾದ ಸಮಾಜದಲ್ಲಿ ಗಾದೆಗಳೋ, ಗಾದೆಗಳಂಥ ಮಾತುಗಳೋ ಸೃಷ್ಟಿಯಾಗುತ್ತ ಹೋಗುತ್ತವೆ. ಆದರೆ ಒಬ್ಬ ವ್ಯಕ್ತಿ ಉದ್ದೇಶಪಟ್ಟು ಹಲವು ಗಾದೆಗಳನ್ನು ಸೃಷ್ಟಿಸಲು ಹೋಗುವುದು ವಿರಳ.

ಪ್ರತಿಯೊಂದು ಗಾದೆಯಲ್ಲೂ ಇರುವುದು ಲೋಕಾನುಭವದ ಸಾರ. ಅದನ್ನು ಯಾರಾದರೊಬ್ಬ ಚತುರ ಮಾತುಗಾರನು ಮೊದಲು ತನಗೆ ತೋಚಿದಂತೆ ಉದ್ಗರಿಸುತ್ತಾನೆ. ಅನಂತರ ಅನೇಕರು ತಿದ್ದಿ, ತೀಡಿ, ಹೊಳಪು ನೀಡಿ ಒಂದು ಮುದ್ರಾವಾಕ್ಯವಾಗಿ ರೂಪಿಸಿದಾಗ ಒಳ್ಳೆಯ ಗಾದೆ ನುಡಿಯಾಗಿ ಚಲಾವಣೆಗೆ ಬರುತ್ತದೆ. ಇಂತಹ ಗಾದೆಯ ಚೆಲುವು ಮತ್ತು ಮಾರ್ಮಿಕತೆಗಳಿಗೆ ಮನಸೋತ ಜನರು ಸಂದರ್ಭ ಒದಗಿದಾಗಲೆಲ್ಲ ಅದನ್ನು ಪ್ರಯೋಗಿಸಿ ಮಾತಿಗೆ ಪುಷ್ಟಿ ಕೊಡುತ್ತಾರೆ.

ಗಾದೆಗಳ ಅನುಭವ ಜಗತ್ತು ವಿಸ್ತಾರವಾದುದು, ಅನನ್ಯವಾದುದು. ಇವುಗಳ ಮುಖಾಂತರ ವ್ಯಕ್ತವಾಗುವ ವಿಚಾರ, ನೀತಿ, ವಿವೇಕ, ಸಹಜತೆ, ವಿನೋದಗಳಿಗೆ ಎಣೆಯಿಲ್ಲ. ಪ್ರಾಚೀನ ಕಾಲದಿಂದ ಇಂದಿನವರೆಗೂ ನೂತನವಾದ ಗಾದೆಗಳು ಸೃಷ್ಟಿಯಾಗುತ್ತಲೇ ಇವೆ.

ಕನ್ನಡದಲ್ಲಿ ಅನೇಕ ಲೇಖಕರು ಹೊಸ ಹೊಸ ಗಾದೆಗಳ ಸಂಕಲನ ಪುಸ್ತಕಗಳನ್ನು ಹೊರತಂದಿದ್ದಾರೆ. ಎಸ್.ವಿ. ಪರಮೇಶ್ವರ ಭಟ್ಟರು, ಶ್ರೀ ಎಚ್.ಜೆ. ಲಕ್ಕಪ್ಪಗೌಡರು, ಅಮೃತ

ಸೋಮೇಶ್ವರ, ವಿ.ಬಿ. ಅರ್ತಿಕಜೆ, ಡಾ. ಎಂ.ಎ. ನಾರಾಯಣ ರೆಡ್ಡಿ, ಡಾ. ಪಿ. ನಾರಾಯಣಸ್ವಾಮಿ, ಎಚ್.ಎಸ್. ಅಚ್ಚಪ್ಪ ಮುಂತಾದವರು. ಇವರುಗಳಲ್ಲಿ ಸಿ.ಕೆ. ಪರಶುರಾಮಯ್ಯನವರು ಸಹ ಪ್ರಮುಖರಾಗಿದ್ದಾರೆ.

ಸಿ.ಕೆ.ಪಿ. ಅವರು ೧೯೯೧ರಲ್ಲಿ 'ಜನಪದ' ಎಂಬ ಮಾಸ ಪತ್ರಿಕೆಯಲ್ಲಿ 'ಗಾದೆಗಳ ಅಂತರಂಗ' ಎಂಬ ಸ್ಥಿರ ಶೀರ್ಷಿಕೆಯಲ್ಲಿ ಪ್ರತಿ ತಿಂಗಳೂ ಒಂದು ಅಥವಾ ಎರಡು ಗಾದೆಗಳನ್ನು ಆಯ್ಕೆ ಮಾಡಿಕೊಂಡು ಅವುಗಳ ಅಂತರಂಗದಲ್ಲಿರುವ ಅರ್ಥ ಮತ್ತು ಆಶಯವನ್ನು ಅವರ ತಿಳುವಳಿಕೆಗೆ ನಿಲುಕಿದಷ್ಟು ರೀತಿಯಲ್ಲಿ ಬರೆಯುತ್ತಿದ್ದರು. ಹೀಗೆ ೧೯೯೧ರಲ್ಲಿ ಆರಂಭವಾದ ಈ ಲೇಖನ ಮಾಲೆಯು ೧೯೯೬ರವರೆಗೂ ಸಾಗಿತ್ತು. ಒಟ್ಟು ೨೩೬ ಗಾದೆಗಳ ವಿಶ್ಲೇಷಣೆಯನ್ನು ಈ ಕೃತಿಯಲ್ಲಿ ವಿವರಿಸಿದ್ದಾರೆ. ಸುತ್ತಮುತ್ತಣ ಗ್ರಾಮೀಣ ಜನ ಮತ್ತು ಸ್ನೇಹಿತ ಸಮುದಾಯದಲ್ಲಿ ಮಾತನಾಡುವಾಗ ಮಾತಿನೊಂದಿಗೆ ಸಹಜವಾಗಿ ಹೊಂದಿಕೊಂಡು ಬಳಕೆಯಾಗುವ ಗಾದೆಗಳಲ್ಲದೆ, ಗಾದೆಗಳನ್ನು ಕುರಿತು ಬಂದಿರುವ ಹತ್ತಾರು ಸಂಗ್ರಹಗಳಲ್ಲಿರುವ ಗಾದೆಗಳಲ್ಲಿ ಆಯ್ದ ಕೆಲವನ್ನು ಅವರಿಗೆ ತಿಳಿದ ಮಟ್ಟಿಗೆ ವಿಶ್ಲೇಷಿಸಿದ್ದಾರೆ.

ನಮ್ಮ ಜನಮನದಲ್ಲಿ ತಲೆ ತಲಾಂತರಗಳಿಂದ ನೆಲೆಯೂರಿ ಕಾಲಕಾಲಕ್ಕೆ ಆಯಾ ಸನ್ನಿವೇಶ ಸಂದರ್ಭಗಳಲ್ಲಿ ಮೈಗೂಡಿಸಿಕೊಂಡು ಕನ್ನಡ ಭಾಷೆಯ ಸೊಗಡು, ಸೌರಭಗಳನ್ನು ವೃದ್ಧಿಸಿರುವ ಒಂದಿಷ್ಟು ಗಾದೆಗಳ ಅಂತರಂಗವನ್ನು ತೆರೆದಿಡುವ ಪ್ರಯತ್ನವನ್ನು ಸಿ.ಕೆ.ಪಿ. ಅವರು ಮಾಡಿದ್ದಾರೆ. ಈ ಕೃತಿಯು ಉತ್ತಮ ಬರವಣಿಗೆಯಾಗಿದ್ದು, ನಮ್ಮ ಸಂಸ್ಕೃತಿ, ಸಂಪ್ರದಾಯ, ಆಚಾರ–ವಿಚಾರ, ನಡೆ–ನುಡಿಯ ಬಗ್ಗೆ ಕುರಿತ ಕೃತಿಯಾಗಿದೆ.

ಪರಶುರಾಮಯ್ಯನವರು ಗಾದೆಗಳ ಅಂತರಂಗವನ್ನು ಹೊಕ್ಕು ಅವುಗಳನ್ನು ವಿಶ್ಲೇಷಿಸಿರುವ ಕ್ರಮ ಕುತೂಹಲಕಾರಿಯಾಗಿದೆ. ಗಾದೆಗಳ ಬಳಕೆ ಕೆಲವೊಮ್ಮೆ ಆಡುಮಾತಿನಲ್ಲಿ ಸಹಜವಾಗಿ ಹೊಕ್ಕು ಹೆಚ್ಚಿನ ಭಾವವನ್ನು ಕೆರಳಿಸುವಷ್ಟು ಸಾಮಾನ್ಯವಾಗಿರುತ್ತವೆ. ಕೆಲವೊಮ್ಮೆ ನಿರಸವಾಗಿರುತ್ತವೆ. ಆದರೆ ಗಾದೆಗಳು ಹೊರಡಿಸುವ ಧ್ವನಿಯಲ್ಲಿ ಅಷ್ಟೊಂದು ಅರ್ಥ ಸಾಧ್ಯತೆಗಳಿರುವುದು ಈ ಕೃತಿಯನ್ನು ಓದಿದ ಸಹೃದಯರಿಗೆ ದರ್ಶನವಾಗುತ್ತದೆ.

ಇಲ್ಲಿ ಪರಶುರಾಮಯ್ಯನವರು ಗಾದೆಯನ್ನು ವಿಶ್ಲೇಷಿಸಲು ಬಳಸಿಕೊಂಡಿರುವ ಸಾಧನೆಗಳೂ ಅಷ್ಟೇ ಗಮನಾರ್ಹವಾಗಿವೆ. ಒಂದು ಗಾದೆಯ ಪ್ರತಿ ಪದದ ಅರ್ಥಗಳನ್ನು ವಿವರಿಸುತ್ತಾ ಅವು ಒಟ್ಟಾಗಿ ಕೂಡಿದಾಗ ಸೃಷ್ಟಿಸುವ ಬೆರಗನ್ನು ವಿಸ್ಮಯದಿಂದ ಕಟ್ಟಲು ತೊಡಗುತ್ತಾರೆ. ಹಾಗೆಯೇ ಪ್ರತಿ ಗಾದೆಗಳ ಸಾಮಾಜಿಕ ಹಿನ್ನೆಲೆ, ಜನಜೀವನದ ಜೊತೆಗೆ ಹೆಣೆದುಕೊಂಡಿರುವ ಸಂಬಂಧ,

ಸಾಂಸ್ಕೃತಿಕ ಪರಂಪರೆಯಲ್ಲಿ ಅವು ಪಡೆದುಕೊಂಡಿರುವ ಸ್ಥಾನ, ಬದಲಾದ ಸಾಮಾಜಿಕ ಪರಿಸರದಲ್ಲಿ ಅವುಗಳು ಹಾಯ್ದು ಬಂದಿರುವ ಪರಿವರ್ತನೆ ಹಾಗೂ ನುಡಿ ಮತ್ತು ಸಾಹಿತ್ಯ ಪರಿವರ್ತನೆಯಾಗುತ್ತದೆ. ಒಂದು ಸಾಮಾನ್ಯ ಗಾದೆ ತನ್ನ ಒಡಲಲ್ಲಿ ಹುದುಗಿಸಿಕೊಂಡಿರುವ ಬಟ್ಟೆಯೊಂದನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುವಲ್ಲಿ ಅವರು ಯಶಸ್ಸು ಸಾಧಿಸಿದ್ದಾರೆ.

ಸಿ.ಕೆ. ಪರಶುರಾಮಯ್ಯನವರ ಈ ಕೃತಿಯನ್ನು ಓದಿದಾಗ ಈ ಕೆಳಗಿನ ಪ್ರಮುಖ ಅಂಶಗಳನ್ನು ನಾವು ಗಮನಿಸಬಹುದು.

೧. ಗಾದೆಗಳ ವಿಶ್ಲೇಷಣೆ ಮಾಡುವಾಗ ಸಾಮಾಜಿಕ ಆಯಾಮಗಳ ಮೂಲಕ ವಿಶ್ಲೇಷಿಸಿದ್ದಾರೆ. ಆಧುನಿಕ ಸಮಾಜದಲ್ಲಿ ಮರೆಮಾಚುತ್ತಿರುವ ಆಚರಣೆ, ಅಡುಗೆ ಪದ್ಧತಿ, ಕೃಷಿಗೆ ಸಂಬಂಧಿಸಿದ ಕಸುಬುಗಳು, ಉಡುಪು ಮುಂತಾದ ಸಾಮಾಜಿಕ ವಿಷಯಗಳನ್ನು ಮೆಲುಕು ಹಾಕುತ್ತ ಪರಂಪರೆಯ ಇತಿಹಾಸವನ್ನು ಅನಾವರಣಗೊಳಿಸಿದ್ದಾರೆ. ಆದ್ದರಿಂದ ಇವರ ಬರಹಗಳು ಸಾಮಾಜಿಕ ಆಯಾಮಗಳಿಗೆ ಹತ್ತಿರವಾಗಿವೆ. ಉದಾ: "ತೆಂಗಿನ ಮರದ ಮೇಲೆ ಹರಿ ಸೇವೆ ಎಂದರೆ ದಾಸಿಮಯ್ಯ ಗುಡಿ ಇಲ್ಲದೆ ಮರ ಹತ್ತಿದ" ಈ ಗಾದೆಯನ್ನು ವಿಶ್ಲೇಷಿಸುವಾಗ ಸಿ.ಕೆ.ಪಿ ಅವರು ದಕ್ಷಿಣ ಕರ್ನಾಟಕದ ಕೆಲವು ಭಾಗಗಳಲ್ಲಿ ನಡೆಯುವ ವಿಷ್ಣು ಭಕ್ತರು ನಡೆಸುವ 'ಹರಿಸೇವೆ' ಎಂಬ ಆಚರಣೆಯ ಬಗ್ಗೆ ಹೇಳುತ್ತಾರೆ. ಈ ಹಬ್ಬದ ಸಂದರ್ಭದಲ್ಲಿ ನೂರೊಂದು ಎಡೆಯ ಸಂಪ್ರದಾಯ ಪದ್ಧತಿಯನ್ನು ತುಂಬಾ ಸ್ವಾರಸ್ಯಕರವಾಗಿ ಹೇಳುತ್ತಾರೆ. ಪ್ರತಿ ಎಡೆಗೂ ಬಾಳೆಹಣ್ಣಿನ ಚಿಪ್ಪು, ತೆಂಗಿನಕಾಯಿ, ಪಾನಕ, ಕೋಸಂಬರಿ, ತಂಬಿಟ್ಟು ಹೀಗೆ ನಾನಾ ವಿಧದ ವಸ್ತುಗಳನ್ನು ಇಡಲಾಗುತ್ತದೆ. ಇಲ್ಲಿ ಗ್ರಾಮೀಣ ವಾದ್ಯಗಳಾದ ದಿಮ್ಮಿ, ಕರಡೆ, ಮೌರಿ, ಶಂಖ, ಜಾಗಟೆ, ಬಾನಕಿ ಮೊದಲಾದ ಗ್ರಾಮೀಣ ವಾದ್ಯಗಳ ಪರಿಚಯ ಮಾಡಿಕೊಡುತ್ತಾರೆ. ಹೀಗೆ ಗಾದೆಗಳ ವಿಶ್ಲೇಷಣೆಯ ಜೊತೆ ಜೊತೆಯಲ್ಲಿಯೇ ಇಂದು ಮರೆಯಾಗುತ್ತಿರುವ ಆಚರಣೆಗಳನ್ನು ನೆನಪಿಸಿಕೊಡುತ್ತಾರೆ. ಅದೇ ರೀತಿ ಮತ್ತೊಂದು ಗಾದೆ "ದೊಡ್ಡ ಬಣ್ಣ ಉಟ್ಟುಕೊಂಡು ದಡಗರಿತಾಳೆ ಹಿಟ್ಟುಮಾಡು ಅಂದ್ರೆ ಲೊಟಗರಿತಾಳೆ"[೨೭] ಈ ಗಾದೆಯು ಶ್ರೀಮಂತಿಕೆಯನ್ನು ಬಯಸುವ ಸೋಮಾರಿ ಹೆಣ್ಣಿನ ಲಕ್ಷಣವನ್ನು ತೋರಿಸುವ ಗಾದೆಯಾದರೂ ಸಿ.ಕೆ. ಪರಶುರಾಮಯ್ಯನವರು ಈ ಗಾದೆಗೆ ವಿವರಣೆ ನೀಡುವಾಗ ಹಿಟ್ಟನ್ನು ಮಾಡುವ ವಿಧಾನವನ್ನು ಹೇಳುತ್ತಾರೆ. ಇಲ್ಲಿ ಹಿಟ್ಟು ಎಂದರೆ ಮುದ್ದೆ ಮಾಡುವುದು ಎಂದರ್ಥ. ಇದನ್ನು ತಿಳಿಸುವ ಮೂಲಕ ಗ್ರಾಮೀಣ ಜನರಿಗೆ ಇಷ್ಟವಾದ ಆಹಾರ ಪದ್ಧತಿಯ ಬಗ್ಗೆ ಪರಿಚಯ ಮಾಡಿಕೊಡುತ್ತಾರೆ. ಹಿಂದಿನ ಕಾಲದಲ್ಲಿ ಸಾಮಾಜಿಕ ಪರಿಸ್ಥಿತಿಯಲ್ಲಿ ಇಂತಹ ದೊಡ್ಡ ಸೀರೆ ಕೇವಲ ಶ್ರೀಮಂತರಾದ ಊರಿನ ಗೌಡ, ಪಟೇಲ, ಶಾನುಭೋಗರ

ಮನೆಯಲ್ಲಿ ಇರುತ್ತಿತ್ತು ಎಂಬ ಮಾಹಿತಿ ನೀಡಿ ಹಳ್ಳಿಯಲ್ಲಿರುವ ಏಣಿ–ಶ್ರೇಣಿ ಸಮಾಜದ ಚಿತ್ರಣವನ್ನು ಕೊಡುತ್ತಾರೆ. ಪ್ರಾಚೀನ ಕಾಲದ ಇಂತಹ ಉಡುಪುಗಳು ಈಗ ಕಣ್ಮರೆಗೊಳ್ಳುತ್ತಿವೆ ಎಂಬ ವಿಷಾದವನ್ನು ವ್ಯಕ್ತಪಡಿಸುತ್ತಾರೆ.

೨. ರೈತರ ಕೃಷಿಗೆ ಸಂಬಂಧಿಸಿದ ವಿಚಾರಗಳನ್ನು ತಿಳಿಸುವುದು ಈ ಕೃತಿಯ ಮತ್ತೊಂದು ಪ್ರಮುಖ ಲಕ್ಷಣವಾಗಿದೆ. “ರೈತರು ಮಾಡುವ ಕೃಷಿ ಚಟುವಟಿಕೆಗಳ ಬಗ್ಗೆ ಸಂದರ್ಭಕ್ಕೆ ತಕ್ಕಂತೆ ವಿವರಣಾತ್ಮಕವಾಗಿ ನಮೂದಿಸುವ ಕಾರ್ಯ”[೩೮] ಈ ಕೃತಿಯಲ್ಲಿ ಲೇಖಕರು ಮಾಡಿದ್ದಾರೆ. ರೈತರು ಬಳಸುವ ಯಾವುದೇ ಕೃಷಿ ಕೆಲಸದ ವಸ್ತುಗಳಿಗೆ ಬೇರೆ ಬೇರೆ ಪ್ರದೇಶದಲ್ಲಿ ಅವುಗಳ ಪರ್ಯಾಯ ಹೆಸರುಗಳನ್ನು ದಾಖಲಿಸಲಾಗಿದೆ. ರೈತರು ಮುಂಗಾರು ಮಳೆ ಪ್ರಾರಂಭವಾದಾಗ ನಡೆಸುವ ಬಿತ್ತನೆ ಕಾರ್ಯಗಳು, ಕೆಲಸಕ್ಕೆ ಬಳಸುವ ಕುಂಟೆ, ರಂಟೆ, ನೇಗಿಲು, ನೊಗ, ಬಾರಿಕೋಲು ಮುಂತಾದವುಗಳ ಮೂಲಕ ತನ್ನ ಹೊಲವನ್ನು ಹದಮಾಡುವುದರಿಂದ ಹಿಡಿದು, ಬಿತ್ತಿ ಕೊಯ್ಲು ಆಗುವವರೆಗೂ ಮಾಡುವ ಕೆಲಸ–ಕಾರ್ಯಗಳ ಬಗ್ಗೆ ಸವಿಸ್ತಾರವಾಗಿ ಹೇಳಿದ್ದಾರೆ. ರೈತರು ವ್ಯವಸಾಯದ ಜೊತೆಗೆ ಬೇಸಿಗೆ ಕಾಲದಲ್ಲಿ ಅಥವಾ ಬರಗಾಲದ ಸಂದರ್ಭದಲ್ಲಿ ಕೃಷಿ ಹೊರತಾದ ಕೆಲಸಗಳಾದ ಕುಂಬಾರ, ಕಮ್ಮಾರ, ಬಡಿಗೆ ಇತ್ಯಾದಿ ಕಸುಬುಗಳನ್ನು ಪ್ರಸ್ತಾಪಿಸುತ್ತಾರೆ. ಒಟ್ಟಾರೆ ಸಂಪೂರ್ಣ ಗ್ರಾಮೀಣ ಚಿತ್ರಣವನ್ನು ನಮ್ಮ ಮುಂದೆ ತಂದು ನಿಲ್ಲಿಸುತ್ತಾರೆ. ಹಾಗೆಯೇ ಕಾಲ ಕಳೆದಂತೆ ರೈತರು ಬಳಸುವ ನೈಸರ್ಗಿಕ ವಸ್ತುಗಳನ್ನು ಆಧುನಿಕ ಪ್ಲಾಸ್ಟಿಕ್ ಯುಗ ನುಂಗಿ ಹಾಕುತ್ತಿದೆ ಎಂಬ ವಿಷಾದವನ್ನು ಇಲ್ಲಿ ಲೇಖಕರು ಸಾಂದರ್ಭಿಕವಾಗಿ ದಾಖಲಿಸುತ್ತಾರೆ.

೩. ಸಾಹಿತಿಕ ಅಂಶಗಳನ್ನು ಅನಾವರಣಗೊಳಿಸಿದ್ದಾರೆ. ಅವರು ಬಳಸುವ ಸಾಹಿತಿಕ ಅಂಶಗಳು ಪ್ರಜ್ವಲಿಸುತ್ತವೆ. ಹಳೆಗನ್ನಡ, ನಡುಗನ್ನಡ ಸೇರಿದಂತೆ ಹಳಗನ್ನಡದ ಕಾವ್ಯಗಳು, ದಾಸ ಸಾಹಿತ್ಯ, ಜನಪದ ಹಾಡುಗಳು, ಕತೆಗಳು ಮತ್ತು ದೃಷ್ಟಾಂತಗಳನ್ನು ನೀಡಿ ಗಾದೆಗಳ ವಿಶ್ಲೇಷಣೆಗೆ ಒಂದು ಅಭೂತಪೂರ್ವ ಮೆರಗನ್ನು ತಂದಿದ್ದಾರೆ. “ಕೊನ್ನಾರಿ ಕಳೆಯಲ್ಲ, ಖಜ್ಜ ಗಂಡನಲ್ಲ” ಈ ಗಾದೆಯಲ್ಲಿ ರನ್ನನ ‘ಗದಾಯುದ್ಧ’ದ ಮಣಿಕನ ವಸ್ತು ವಿಭೂಷಣಂಗಳ...ಇರಿವ ಬೆಡಂಗ ಸಾಲುಗಳನ್ನು ಉದ್ಗರಿಸುತ್ತಾರೆ. ಮತ್ತು ಜನಪದ ತ್ರಿಪದಿಯ ಸಾಲುಗಳನ್ನು ಬಳಸಿಕೊಂಡಿದ್ದಾರೆ. “ಕೂಡಿದರೆ ಕೂಡ ಬೇಕು ಬೇಡರ ಹುಡುಗನ್ನ ಪಾವುಡದ ಜುಂಗ ಮೊಳದುದ್ದ ಬಿಟ್ಟುಕೊಂಡು ಓಡಿಹೋದಾಂಗ ಮೊಲವ ಹಿಡಿಯನ” ಮತ್ತೊಂದು ಗಾದೆಯ ಮಾತಿನಲ್ಲಿ ವಿವೇಕ ಪ್ರಜ್ಞೆಯನ್ನು ಸ್ಪಷ್ಟವಾಗಿ ತೆರೆದಿಟ್ಟಿರುವ ಬಸವೇಶ್ವರರ “ನುಡಿದರೆ ಮುತ್ತಿನ ಹಾರದಂತಿರಬೇಕು” ಎಂಬ ವಾಕ್ಯ ಬಳಸಿದ್ದಾರೆ. ಹರಿದಾಸರ “ನಂಬಿ ಕೆಟ್ಟವರಿಲ್ಲವೋ ಹರಿ ನಿನ್ನ; ನಂಬದೆ ಕೆಟ್ಟರೆ ಕೆಡಲಿ” ಎಂಬ

ವಚನದಲ್ಲಿ ನಂಬಿಕೆಗೆ ಇರುವ ಮಹತ್ವವನ್ನು ಮನದಟ್ಟು ಮಾಡಿದ್ದಾರೆ. ಆದಿಕವಿ ಪಂಪನಿಂದ ಮೊದಲ್ಗೊಂಡು ನೃಪತುಂಗ, ವಚನಕಾರರು, ಕುಮಾರವ್ಯಾಸ, ದಾಸರು, ಕುವೆಂಪು, ಡಿ.ವಿ.ಜಿ., ಬೇಂದ್ರೆಯಂತಹ ಕವಿ ವಚನಕಾರರ ಅರ್ಥಪೂರ್ಣ ಭಾವವನ್ನು ಆಯ್ದು ಆಯಾ ಗಾದೆಯಲ್ಲಿರುವ ಅರ್ಥವನ್ನು ಬಿಡಿಸಿ ಓದುಗರಿಗೆ ಮುಟ್ಟಿಸಿದ್ದಾರೆ.

"ಅಷ್ಟೆ ಅಲ್ಲದೆ ಈ ಕೃತಿಯ ಮೂಲಕ ಗ್ರಾಮೀಣ ಜನರು ಬಳಸುವ ಪದಗಳು ಹಾಗೂ ಅವು ಈಗ ಮರೆಯಾಗಿರುವ ಪದಗಳನ್ನು ಸಿ.ಕೆ.ಪಿ. ಅರ್ಥ ಸಹಿತ ವಿವರಿಸಿರುವುದು ಈ ಕೃತಿಯ ಮೌಲಿಕ ಅಂಶದಲ್ಲೊಂದು ಹೊಸ ಓದುಗರಿಗೆ ಇಲ್ಲಿನ ಪದಗಳು ಅಪರಿಚಿತವಾಗಿ ಕಂಡುಬರುತ್ತವೆ. ಅಂಥ ಪದಕೋಶವೊಂದು ಈ ಕೃತಿಯಲ್ಲಿ ಅಂತರ್ಗತವಾಗಿವೆ. ಉದಾ: ಪಾವುಡೆ (ಪಂಚೆ), ಅರಿ (ಕಂತೆ), ಕೋರಿ (ಹಣ್ಣು), ಪಾವುಡ (ಪಂಚೆ), ಬಾನ (ನೈವೇದ್ಯದ ಅಂಗಡಿ), ಉಪ್ಪಾರ (ನೈವೇದ್ಯ), ಉದ್ಕ (ನೀರು), ದುಂಡಿ (ಗಯ್ಯಾಳಿ), ಇಲಕು (ತೆನೆಯ ಎಸಳು) ಮುಂತಾದ ಪದಗಳ ಸೊಗಸನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ."[೨೮]

ಇಲ್ಲಿ ಮುಖ್ಯವಾಗಿ ಮಹಿಳೆಯರ ವರ್ತನೆ, ಗುಣ, ಸ್ವಭಾವಗಳಿಗೆ ಧಕ್ಕೆಯನ್ನು ಉಂಟುಮಾಡುವ ಕೆಲವು ಬೈಗುಳಗಳ ಪದಗಳನ್ನು ಕಾಣಬಹುದು. ಉದಾ: ಬಡ್ಡಿ, ಸೂಳೆ, ದುಂಡಿ, ಬಸವಿ, ಕಳ್ಳಮುಂಡೆ ಮುಂತಾದ ವಿಶೇಷಣಗಳನ್ನು ಬಳಸುವ ರೀತಿಯಲ್ಲಿ ಅವು ಮಹಿಳಾ ಸಮುದಾಯದ ಬಗ್ಗೆ ಸಮಾಜದಲ್ಲಿ ಸ್ಥಿರಗೊಂಡಿರುವ ಹೀನ ಭಾವನೆಗಳನ್ನು ಎತ್ತಿ ತೋರಿಸುತ್ತವೆ. 'ಸೂಳೆ ಕೈಲಿ ಭತ್ತ ಕುಟ್ಟಿಸ್ದಂಗೆಯಾ', 'ಹೊಲತಿ ಉಪ್ಪಿಕಾಯಿ ಹಾಕಿ ನೀರಿಗ್ಹೊಗಿ ಬಂದು ನೆಕ್ಕಿ ನೋಡಿದ್ಲು', 'ಮುಂಡೆ ಮನೆ ಹೆಣ್ಣು, ಮೂಗುದಾರವಿಲ್ಲದ ದನ', ಬೀಸಕ್ಕೊಗಿ ಸೊಸೆ ಕೆಟ್ಲು' ಇಲ್ಲಿ ಬಳಕೆಯಾಗಿರುವಂತಹ ಗಾದೆಗಳು ಮಹಿಳೆಯರ ಹೀನ ಪರಿಸ್ಥಿತಿಯನ್ನು ನಮಗೆ ನೆನಪು ಮಾಡಿಕೊಡುತ್ತವೆ. ಅದೇರೀತಿ ತಳಸಮುದಾಯಗಳು, ಬಡವರು ಮತ್ತು ಅಸಹಾಯಕರ ಬಗೆಗಿನ ಗಾದೆಗಳೂ ಸಹ ಆ ಸಮುದಾಯವನ್ನು ಹತ್ತಿಕ್ಕುವ ಮತ್ತು ಯಥಾಸ್ಥಿತಿಯನ್ನು ಕಾಪಾಡುವಂತಹ ಅಂತಹ ಮನೋಭಾವವನ್ನು ಹುಟ್ಟಿಸುವ ಕೆಲವು ಗಾದೆಗಳನ್ನು ಕಾಣಬಹುದು. ಉದಾ: 'ಬಡವಾ ನೀ ಮಡಗಿದ ಹಾಗಿರು'

ಹೀಗೆ ಪರಶುರಾಮಯ್ಯ ತಮ್ಮ ಓದು, ಅನುಭವ, ಲೋಕಜ್ಞಾನ, ಸಮಾಜವನ್ನು ತೆರೆದ ಕಣ್ಣಿನಿಂದ ನೋಡಿ ಕಂಡುಕೊಂಡ ದರ್ಶನಗಳನ್ನು ಬಳಸಿ ಗಾದೆಗಳ ಅಂತರಂಗವನ್ನು ಹೊಕ್ಕು ಅದರ ಮೂಲೆ ಮೂಲೆಗಳನ್ನು ಸ್ಪರ್ಶಿಸಿ ಅದರಲ್ಲಡಗಿರುವ ವಿವಿಧ ಧ್ವನಿಗಳನ್ನು ಒಗ್ಗೂಡಿಸಿದ ಅರ್ಥವಂತಿಕೆಯ ಸ್ವರಮೇಳವೊಂದನ್ನು ಸಂಯೋಜಿಸಿದ್ದಾರೆ.

೩. ಪ್ರಾಚೀನ ಆದರ್ಶ ಬಾಲಕರು :

ಸಿ.ಕೆ. ಪರಶುರಾಮಯ್ಯನವರು ಈ ಕೃತಿಯಲ್ಲಿ ಹತ್ತು ಬಾಲಕರನು ಆರಿಸಿಕೊಂಡು ಅವರು ಹೇಗೆ ತಮ್ಮ ಭಕ್ತಿ, ಶ್ರದ್ಧೆ, ಶೌರ್ಯದಲ್ಲಿ ಅಮರರಾದರು, ಆದರ್ಶಪ್ರಾಯರಾದರು ಎಂಬುದನ್ನು ಸ್ಥೂಲವಾಗಿ ಪರಿಚಯವನ್ನು ಮಾಡಿಕೊಟ್ಟಿದ್ದಾರೆ. ನಮ್ಮ ಪುರಾಣ, ಕಾವ್ಯ, ಇತಿಹಾಸಗಳಲ್ಲಿ ಆದರ್ಶ ಗುಣಗಳಿಗೆ ಶೌರ್ಯ ಪರಾಕ್ರಮಗಳಿಗೆ ಹೆಸರಾದ ಇಂತಹ ಇನ್ನೂ ಅನೇಕ ಬಾಲಕ-ಬಾಲಕಿಯರಿದ್ದಾರೆ. ಅವರ ಪರಿಚಯವನು ಮಾಡಿಕೊಡುವ ಉದ್ದೇಶ ಈ ಕೃತಿಯದ್ದಾಗಿದೆ. ಪ್ರಾಚೀನ ಬಾಲಕರ ಜೀವನ ವೃತ್ತಾಂತಗಳನ್ನು ಹೇಳುವ ಮೂಲಕ ಆಧುನಿಕ ಸಮಾಜದ ಮೇಲೆ ಮತ್ತು ಮಕ್ಕಳ ಮೇಲೆ ಈ ಕೃತಿಯ ಸತ್ವವು ತನ್ನದೇ ಆದ ಪ್ರಭಾವ ಬೀರಿದೆ.

ಪ್ರಸ್ತುತ ಈ ಕೃತಿಯಲ್ಲಿ ಸಿ.ಕೆ.ಪಿ. ಅವರು ಹತ್ತು ಜನ ಆದರ್ಶ ಬಾಲಕರಾದ ಶ್ರವಣ, ಲವಕುಶ, ಚಂದ್ರಹಾಸ, ಧ್ರುವ, ಪ್ರಹ್ಲಾದ, ಸಚಿಕೇತ, ಏಕಲವ್ಯ, ಅಭಿಮನ್ಯು, ಭರತ ಇವರುಗಳ ಭಕ್ತಿ ಶ್ರದ್ಧೆ, ಸಾಹಸ, ನಡವಳಿಕೆಗಳನ್ನು ಹೇಳುವುದರ ಮೂಲಕ ಈ ಕೃತಿಗೆ ಒಂದು ಮೆರಗು ತಂದಿದ್ದಾರೆ. ಇಲ್ಲಿ ಪ್ರತಿಯೊಂದು ಐತಿಹಾಸಿಕ ಕಥೆಯಲ್ಲಿ ಬಾಲಕರಿಗೆ ಜಯ ಆಗುತ್ತೆ ಹೊರತು ಅಪಜಯ ಆಗುವುದಿಲ್ಲ. ಹೀಗೆ ಕಥೆಯ ನಾಯಕರನ್ನು ಗೆಲ್ಲಿಸುವುದರ ಮೂಲಕ ಈ ಕೃತಿಯನ್ನು ಓದುವ ಸಹೃದಯರಿಗೆ ಸಂತೋಷ, ಕುತೂಹಲ, ಆಸಕ್ತಿಯನ್ನು ಬೆಳೆಸುತ್ತ ಹೋಗುತ್ತಾರೆ. ಏನೇ ಆಗಲಿ ಈ ಕೃತಿಯ ಎಲ್ಲಾ ಕಥೆಗಳು ಓದುಗರಿಗೆ ನವರಸಗಳನ್ನು ತಂದುಕೊಡುವ ಮೂಲಕ ಗಮನ ಸೆಳೆದಿದೆ.

ಮೊದಲನೆಯದಾಗಿ ಸೇವೆಯಲ್ಲಿ ಸಾವನ್ನಪ್ಪಿದ 'ಶ್ರವಣ' ಎಂಬ ಕಥೆಯಲ್ಲಿ ಶ್ರವಣಕುಮಾರ ಎಂಬ ಬಾಲಕ ತನ್ನ ಕುರುಡು ತಂದೆ-ತಾಯಿಯನ್ನು ನೋಡಿಕೊಳ್ಳುವ ಪರಿ ಹಾಗೂ ದಶರಥನ ಬಾಣದಿಂದ ಆದ ಶ್ರವಣಕುಮಾರನ ಸ್ಥಿತಿಗತಿಗಳು ಹಾಗೂ ದಶರಥನಿಗೆ ಶ್ರಾವಣನ ತಂದೆ-ತಾಯಿ ಶಾಪ ನೀಡುವುದನ್ನು ಕಥೆಯ ಒಟ್ಟು ಸಾರಾಂಶವಾಗಿ ಹೇಳಬಹುದು.

"ಮಾತಾ-ಪಿತೃಗಳು ದೇವರ ಸಮಾನ ಎಂಬ ಪ್ರಮುಖವಾದ ನಿಲುವನ್ನು ಇಟ್ಟುಕೊಂಡ ಶ್ರವಣ ಅವರನ್ನು ತುಂಬಾ ಚೆನ್ನಾಗಿ ನೋಡಿಕೊಳ್ಳುತ್ತಿದ್ದ. ತನ್ನ ತಂದೆ-ತಾಯಿಯವರೆ ದೇವರಿಗಿಂತ ಹೆಚ್ಚೆಂದು ತಿಳಿದುಕೊಂಡು ಅವರ ಅಸಹಾಯಕ ಸ್ಥಿತಿ ತಿಳಿದ ಇವನು ಅವರಿಗೆ ಸರ್ವಸ್ವ ಆಗಿದ್ದನು. ತನ್ನ ತಂದೆ-ತಾಯಿಗಳಿಗೆ ದಿನಿತ್ಯದ ಕರ್ಮಕಾರ್ಯಗಳು, ಆಹಾರ, ಸ್ನಾನ, ಪೂಜೆ ಇವನೇ ಮುಂದೆನಿಂತುಕೊಂಡು ನೆರವೇರಿಸುತ್ತಿದ್ದನು. ಅಷ್ಟೆ ಅಲ್ಲದೆ ಇವನು ಅನೇಕ ಪ್ರಾಣಿ-ಪಕ್ಷಿಗಳನು ಸಾಕಿದ್ದನು. ಮೊಲ, ಜಿಂಕೆ, ಕೋಗಿಲೆ, ಹಸು ಇವುಗಳಿಗೆ ಆಹಾರ, ನೀರು ಹಾಕುತ್ತಿದ್ದ. ಇಂತಹ ಪುಣ್ಯ ಕೆಲಸವನ್ನು ಶ್ರವಣಕುಮಾರ ಮಾಡುತ್ತಿದ್ದ.

ಹೀಗೆ ಒಂದುದಿನ ತನ್ನ ತಂದೆ-ತಾಯಿಗಳಿಗೆ ಕುಡಿಯಲು ನೀರು ತರಲು ನದಿಗೆ ಹೋದಾಗ ಬೇಟೆಗೆಂದು ಬಂದ ದಶರಥನ ಬಾಣಕ್ಕೆ ಬಲಿಯಾಗುತ್ತಾನೆ. ತಂದೆ-ತಾಯಿ ದಶರಥನು ಸಹ ಮಮ್ಮಲ ಮರುಗಿ, ಅತ್ತು ಗೋಳಾಡುತ್ತಾನೆ. ಶ್ರವಣಕುಮಾರನ ಈ ವಿಷಯ ತಿಳಿದ ತಂದೆ-ತಾಯಿಗಳು ದಶರಥನಿಗೆ "ಮುಪ್ಪಿನಲ್ಲಿ ನಮಗೆ ಆಸರೆಯಾಗಿದ್ದ ಮಗನನ್ನು ನೀನು ಕೊಂದು ನಮ್ಮನು ಅಪಾರ ದುಃಖದಲ್ಲಿ ತಳ್ಳಿರುವೆ ಆದ್ದರಿಂದ ಕಡೆಗಾಲದಲ್ಲಿ ನೀನೂ ಸಹ ಮಕ್ಕಳ ಅಗಲುವಿಕೆಯಿಂದಲೇ ಸಾಯುವೆ" ಎಂದು ಶಪಿಸಿ ಬೆಂಕಿಗೆ ಹಾರಿ ಪ್ರಾಣತ್ಯಾಗ ಮಾಡುತ್ತಾರೆ. ಅವರ ಶಾಪದಂತೆ ದಶರಥನು ಕಡೆಗಾಲದಲ್ಲಿ ರಾಮ-ಲಕ್ಷ್ಮಣರು ವನವಾಸದಲ್ಲಿದ್ದಾಗ ಪುತ್ರ ಶೋಕದಿಂದಲೇ ಸತ್ತು ಹೋದನು.

ಒಟ್ಟಿನಲ್ಲಿ ಈ ಕಥೆಯ ಮೂಲಕ ಶ್ರವಣ ಕುಮಾರನ ಆದರ್ಶ ಜೀವನಕ್ಕೆ ಕೈಗನ್ನಡಿ ಹಿಡಿದಿದ್ದಾರೆ. ಆ ಕಲ್ಲು ದೇವರ ಪೂಜೆ ಮಾಡುವುದರ ಬದಲು ಪ್ರತಿಯೊಬ್ಬ ವ್ಯಕ್ತಿಯು ತನ್ನ ಕಣ್ಣಮುಂದೆ ಜೀವಂತವಾಗಿರುವ ತಂದೆ-ತಾಯಿಗಳು ಅನಾಥರು, ವೃದ್ಧರು, ದೀನದಲಿತರು ಮುಂತಾದವರ ಸೇವೆಯನು ಮಾಡುವುದರ ಮೂಲಕ ಸಮಾಜಕ್ಕೆ ತನ್ನದೇ ಆದ ಅಮೂಲ್ಯ ಕೊಡುಗೆ ನೀಡಬೇಕು ಎಂಬ ಅಂಶವನ್ನು ಈ ಕಥೆ ಸಾರಿ ಸಾರಿ ಹೇಳುತ್ತದೆ. ಹೀಗೆ ಸಹಾಯ ಮಾಡುವುದರಿಂದ ನಮ್ಮ ಸಮಾಜಕ್ಕೆ ಕೊಡುಗೆ ನೀಡಬೇಕು ಆಗ ಮಾತ್ರ ಪ್ರತಿಯೊಬ್ಬ ವ್ಯಕ್ತಿ ಹುಟ್ಟಿದಕ್ಕೆ ಸಾರ್ಥಕ. ಆಧುನಿಕ ಜಗತ್ತಿನಲ್ಲಿ ಬಹುತೇಕ ಮಕ್ಕಳು ತನ್ನ ತಂದೆ-ತಾಯಿಗಳನ್ನು ವೃದ್ಧಾಶ್ರಮಕ್ಕೆ ಸೇರಿಸುವ ಪರಿ ಬೆಳೆದುಕೊಂಡು ಬಂದಿದೆ. ಇದನ್ನು ಕೈಬಿಟ್ಟು ಶ್ರವಣಕುಮಾರನ ಹಾದಿ ಹಿಡಿಯಬೇಕು ಎಂಬುದು ಈ ಕಥೆಯ ಸಾರ.

ಎರಡನೆಯ ಕಥೆ ಪಿತನೊಡನೆ ಸೆಣಸಿ ಗೆದ್ದ 'ಲವಕುಶ' ಎಂಬ ಕಥೆಯಲ್ಲಿ ಶ್ರೀರಾಮನ ಕಥೆ ಹೇಳುವುದರ ಮೂಲಕ ಶ್ರೀರಾಮನ ಹೆಂಡತಿ ಸೀತೆಯ ಶೋಷಣೆ, ಅಸಹಾಯಕ ಪರಿಸ್ಥಿತಿ ಮತ್ತು ಲವಕುಶರ ಶೌರ್ಯ, ಪರಾಕ್ರಮಗಳನ್ನು ಆಕರ್ಷಕವಾಗಿ ಹೆಳುವುದರ ಮೂಲಕ ಕಥೆಗೆ ಮೆರಗು ತಂದಿದ್ದಾರೆ.

ಶ್ರೀರಾಮನ ಹೆಂಡತಿ ಸೀತೆಯನ್ನು ಯಾರೊ ಒಬ್ಬ ಅಗಸನ ಮಾತು ಕೇಳಿದ ತನ್ನ ಮುದ್ದು ಮಡದಿಯ ಶೀಲದ ಮೇಲೆ ಅನುಮಾನಪಟ್ಟು ಪತಿವ್ರತೆ ಸೀತೆಯನ್ನು ತನ್ನ ತಮ್ಮ ಲಕ್ಷ್ಮಣನ ಮೂಲಕ ಕಾಡಿಗೆ ಬಿಡುವ ಪ್ರಯತ್ನ ಮಾಡುತ್ತಾನೆ. ಹೆಣ್ಣಿನ ಶೋಷಣೆ ಕೇವಲ ಆಧುನಿಕ ಕಾಲದ್ದಲ್ಲ. ಅದು ಪುರಾತನ ಕಾಲದಿಂದಲೂ ನಡೆದುಕೊಂಡುಬಂದ ಒಂದು ಅಮಾನವೀಯ ಘಟನೆ ಎಂಬುದು ಈ ಕಥೆಯ ಮೂಲಕ ತಿಳಿದುಬರುತ್ತದೆ. ಶ್ರೀರಾಮನು ತನ್ನ ಪತ್ನಿ ಸೀತೆ

ಗರ್ಭಿಣಿ ಆಗಿದ್ದರೂ ಸಹ ಕಾಡಿಗೆ ಕಳಿಹಿಸುವ ಪ್ರಯತ್ನ ಮಾಡುತ್ತಾನೆ. ಇಲ್ಲಿ ಸಹೃದಯರಿಗೆ ಕರುಣರಸ ಉಕ್ಕಿ ಬರುತ್ತದೆ.

ಹೀಗೆ ಕಾಡಿನಲ್ಲಿದ್ದ ತುಂಬು ಗರ್ಭಿಣಿಯನ್ನು ಕಂಡ ವಾಲ್ಮೀಕಿ ಮಹರ್ಷಿಯು ಸೀತೆಯನ್ನು ತನ್ನ ಆಶ್ರಮಕ್ಕೆ ಕರೆದುಕೊಂಡು ಹೋಗಿ ಅವಳನ್ನು ತನ್ನ ಮಗಳ ರೀತಿ ನೋಡಿಕೊಳ್ಳುತ್ತಾನೆ. ನಂತರ ಸೀತಾದೇವಿ ಎರಡು ಗಂಡು ಮಕ್ಕಳಿಗೆ ಜನ್ಮ ನೀಡುತ್ತಾಳೆ. ಅವರೆ ಲವ-ಕುಶರು. ಇವರಿಗೆ ವಾಲ್ಮೀಕಿಯೇ ಅಕ್ಷರಾಭ್ಯಾಸ ಮಾಡಿಸಿ, ಶಾಸ್ತ್ರ, ಪುರಾಣ, ಸಂಗೀತ, ಬಿಲ್ಲು ವಿದ್ಯೆಯನ್ನು ಕಲಿಸಿದನು. ನಂತರ ವಾಲ್ಮೀಕಿಯು ತಾನು ಬರೆದಿದ್ದ ರಾಮಾಯಣವನ್ನು ಬಾಯಿಪಾಠ ಮಾಡಿಸಿ, ಮಧುರವಾಗಿ ಹಾಡುವುದನ್ನು ಕಲಿಸಿದನು. ಜೊತೆಗೆ ಧನುರ್ವಿದ್ಯೆ ಮತ್ತು ಬಿಲ್ಲು ವಿದ್ಯೆಗಳಲ್ಲಿ ಪ್ರವೀಣರಾದರು.

ಕಥೆಯು ಹೀಗೆ ಮುಂದುವರೆದು ಲವ-ಕುಶ ಎಂಬ ಮಕ್ಕಳು ತನ್ನ ತಂದೆ ವಿರುದ್ಧವೆ ಸೆಡ್ಡು ಹೊಡೆದು ಗೆಲ್ಲುವುದು ಈ ಕಥೆಯಲ್ಲಿ ಮೂಡಿಬಂದ ಒಂದು ಪ್ರಮುಖವಾದ ಅಂಶವಾಗಿದೆ. ಶ್ರೀರಾಮನು ಕಳಿಸಿದ ಅಶ್ವಮೇದ ಯಾಗದ ಕುದುರೆಯನ್ನು ಲವ-ಕುಶರು ಕಟ್ಟಿಹಾಕಿ ಶ್ರೀರಾಮನ ಬಂಟ ಶತೃಘ್ನನ ಮತ್ತು ಅವನ ಸೇನೆಯನ್ನು ಗೆದ್ದು, ಶ್ರೀರಾಮನು ಕಳುಹಿಸಿದ ಕುದುರೆಯನ್ನು ಕಟ್ಟಿಹಾಕುತ್ತಾರೆ. ನಿಯಮದ ಪ್ರಕಾರ ಶ್ರೀರಾಮ ತನ್ನ ಅಶ್ವಗಳನ್ನು ಕಟ್ಟಿ ಹಾಕಿದವರ ಮೇಲೆ ಯುದ್ಧ ಮಾಡಬೇಕು. ಆಗ ಶ್ರೀರಾಮನು ತನ್ನ ತಮ್ಮ ಲಕ್ಷ್ಮಣನನ್ನು ಯುದ್ಧಕ್ಕೆ ಕಳುಹಿಸಿದಾಗ ಅಲ್ಲಿ ಲವ-ಕುಶರು ಶ್ರೀರಾಮನ ಮಕ್ಕಳು ಎಂಬ ನಿಜ ಸಂಗತಿ ತಿಳಿಯುತ್ತಾನೆ. ನಂತರ "ವಾಲ್ಮೀಕಿಯು ಸೀತೆ ಹಾಗೂ ಲವ-ಕುಶರನ್ನು ಶ್ರೀರಾಮನೊಂದಿಗೆ ಅಯೋದ್ಯಗೆ ಕಳುಹಿಸಿಕೊಟ್ಟನು. ಶ್ರೀರಾಮನು ಸಂತೋಷದಿಂದ ಹೆಂಡತಿ, ಮಕ್ಕಳು, ತಮ್ಮಂದಿರು, ಸೈನಿಕರೊಂದಿಗೆ ಅಯೋದ್ಯಗೆ ಹೋಗಿ ಸುಖವಾಗಿ ರಾಜ್ಯವಾಳಿದರು."[೨೯]

ಒಟ್ಟಿನಲ್ಲಿ ಚಿಕ್ಕವಯಸ್ಸಿನಲ್ಲೇ ಯುದ್ಧದಲ್ಲಿ ವೀರರನ್ನು ಸೋಲಿಸಿದ ಲವ-ಕುಶರ ಪರಾಕ್ರಮ ಮೆಚ್ಚವಂತದ್ದು. ವಾಲ್ಮೀಕಿಯು ಹೇಳಿಕೊಟ್ಟ ವಿದ್ಯೆಯನ್ನು ಶ್ರದ್ಧೆಯಿಂದ ಕಲಿತಿದ್ದರಿಂದ ಲವ-ಕುಶರು ಅಂತಹ ಶಕ್ತಿಯನ್ನು ಸಂಪಾದಿಸಲು ಸಾಧ್ಯವಾಯಿತು.

ಮೂರನೆಯ ಕಥೆ 'ಅದೃಷ್ಟಶಾಲಿ ಚಂದ್ರಹಾಸ' ಎಂಬ ಕಥೆಯ ಮೂಲಕ ಚಂದ್ರಹಾಸನ ಜೀವನ ವೃತ್ತಾಂತವನ್ನು ಹೇಳಲಾಗಿದೆ. ಮೊದಮೊದಲು ಕಥೆಯ ನಾಯಕನಿಗೆ ದುರಾದೃಷ್ಟ ಆವರಿಸಿಕೊಂಡಿದ್ದರೂ ಸಹ ನಂತರ ಎಲ್ಲಾ ಕೆಲಸ-ಕಾರ್ಯಗಳಲ್ಲಿ ಅವನಿಗೆ ಅರಿವಿಲ್ಲದೆ ಅದೃಷ್ಟಗಳು ಕುಲಾಯಿಸುತ್ತವೆ. ಚಂದ್ರಹಾಸನು ಹುಟ್ಟಿದ ಕೆಲವೇ ದಿನಗಳಲ್ಲಿ ತನ್ನ ತಂದೆ ಕೇರಳ

ದೇಶದ ರಾಜ ಮೇಧಾವಿ ಮತ್ತು ತಾಯಿ ಚಿತ್ರಭಾನುವನು ಕಳೆದುಕೊಂಡು ದುರಾದೃಷ್ಟ ವ್ಯಕ್ತಿಯಾಗಿ ಕಾಣಿಸಿಕೊಳ್ಳುತ್ತಾನೆ. ತಬ್ಬಲಿಯಾದ ಚಂದ್ರಹಾಸನನು ಅರಮನೆಯಲ್ಲಿದ್ದ ಒಬ್ಬ ಮುದುಕಿ ತುಂಬಾ ಪ್ರೀತಿಯಿಂದ ಸಾಕುತ್ತಾಳೆ. ಇಲ್ಲಿ ಆ ಮುದುಕಿಯ ಸಹಾಯ, ಮನೋಭಾವ, ಆಕೆ ಆ ಮಗುವನ್ನು ನೋಡಿಕೊಳ್ಳುವ ಬಗ್ಗೆ ಈ ಕಥೆಯಲ್ಲಿ ಎದ್ದು ಕಾಣುವ ಅಂಶವಾಗಿದೆ. ಹೀಗೆ ಬೆಳೆದ ಮಗು ಮುದುಕಿಯ ಆರೈಕೆಯಲ್ಲಿ ನಂತರ ಊರ ಜನರ ಪ್ರೀತಿಯ ನಡುವೆ ಚತುರತೆ, ಬುದ್ಧಿವಂತ ವ್ಯಕ್ತಿಯಾಗಿ ಹೊರಬಂದನು. ಆಟ, ಪಾಠದಲ್ಲಿ ಎಲ್ಲಾ ಮಕ್ಕಳಿಗಿಂತ ಮುಂದೆ ಇದ್ದನು. ಚಂದ್ರಹಾಸನ ಉನ್ನತಿಯನ್ನು ಕಂಡು ಕುಂತಳ ದೇಶದ ಮಂತ್ರಿ 'ದುಷ್ಟಬುದ್ಧಿ' ಮತ್ತು ಇವನ ಮಗ ಮದನ ಚಂದ್ರರು ಚಂದ್ರಹಾಸನನ್ನು ವಂಚನೆಯಿಂದ ಕೊಲೆ ಮಾಡಲು ಹೋಗಿ ಕೊನೆಗೆ ಇವರೇ ಪ್ರಾಣ ಬಿಡುತ್ತಾರೆ. ಕೊನೆಗೆ ಚಂದ್ರಹಾಸ ಎರಡೂ ರಾಜ್ಯಗಳಿಗೆ ಒಡೆಯನಾಗಿ ಬಹಳ ವರ್ಷಗಳ ಕಾಲ ಕೀರ್ತಿಶಾಲಿಯಾಗಿ ರಾಜ್ಯವನ್ನು ಆಳಿದ.

ಒಟ್ಟಾರೆ ಈ ಕಥೆಯಿಂದ ತಿಳಿದುಬರುವ ಮುಖ್ಯ ಅಂಶವೆಂದರೆ ಅನ್ಯಾಯಕ್ಕೆ ಎಂದೂ ಗೆಲುವಿಲ್ಲ. ಇನ್ನೊಬ್ಬರ ಉನ್ನತಿ ಕಂಡು ಸಹಿಸಲಾರದ ವ್ಯಕ್ತಿಗೆ ಮುಂದೆ ಅಪಾಯ ಕಂಡಿತ ಎಂಬ ವಿಚಾರ ಮಂತ್ರ ದುಷ್ಟಬುದ್ಧಿ ಮತ್ತು ಮಗ ಮದನನ ಪಾತ್ರಗಳ ಮೂಲಕ ಮೂಡಿ ಬಂದಿದೆ. ಚಂದ್ರಹಾಸ ತುಂಬಾ ಅದೃಷ್ಟಶಾಲಿ. ಬಾಲ್ಯದಿಂದಲೂ ಹೆಜ್ಜೆಹೆಜ್ಜೆಗೂ ಅವನಿಗೆ ಉಂಟಾದ ಕಷ್ಟಗಳು ಪರಿಹಾರವಾದವು. ದುಷ್ಟಬುದ್ಧಿಯ ಸೇಡಿನ ಒಳಸಂಚು ಪ್ರಯೋಜನ ಆಗಲಿಲ್ಲ. ದೈವಬಲವೊಂದಿದ್ದರೆ ಯಾರು ಎಷ್ಟೇ ಕೆಡಕು ಬಯಸಿದರೂ ಆತ ಉಳಿಯುತ್ತಾನೆ ಎಂಬುದಕ್ಕೆ ಚಂದ್ರಹಾಸನ ಜೀವನ ಒಂದು ಒಳ್ಳೆಯ ನಿದರ್ಶನ.

ನಾಲ್ಕನೆಯ ಕಥೆ 'ಅಚಲ ಭಕ್ತಿ ಆದರ್ಶ ಧ್ರುವ' ಎಂಬ ಕಥೆಯಲ್ಲಿ 'ಧ್ರುವ'ನ ಭಕ್ತಿ, ಸಾಹಸ, ಅವನ ಏಕಾಗ್ರತೆ ಮನಸ್ಸು, ಶಿವನನ್ನು ಕಾಣುವ ಬಗೆ ಸೊಗಸಾಗಿ ಮೂಡಿಬಂದಿದೆ. ಉತ್ತಾನಪದವೆಂಬ ದೊರೆಯ ಇಬ್ಬರು ಹೆಂಡತಿಯರು ಸುನೀತ ಮತ್ತು ಸುರುಚಿ. ಹಿರಿಯ ಹೆಂಡತಿ ಸುನೀತ ಅಷ್ಟೇನು ಸುಂದರವಾಗಿರಲಿಲ್ಲ. ಆದಕಾರಣ ದೊರೆ ಸುನೀತ ಮತ್ತು ಅವಳ ಮಗ ಧ್ರುವನನು ಅಸಡ್ಡೆ ಮಾಡಿ ಊರ ಹೊರಗಿನ ಮನೆಯಲ್ಲಿ ಇಟ್ಟಿದ್ದನು. ಆದರೆ ಸುರುಚಿ ಸುಂದರಿ, ನೋಡಲು ಚೆಲುವೆ ಆಗಿದ್ದಳು. ಆದ್ದರಿಂದ ಸುರುಚಿ ಮತ್ತು ಆಕೆಯ ಮಗ ಉತ್ತಮನನ್ನು ತನ್ನ ಅರಮನೆಯಲ್ಲಿಟ್ಟುಕೊಂಡು ಸುಖಭೋಗದಿಂದ ಜೀವಿಸುತ್ತಿದ್ದರು. ಆದರೆ ಧ್ರುವನಿಗೆ ತಂದೆಯ ಪ್ರೀತಿ ಮತ್ತು ಅವನ ಆಸ್ತಿಯನ್ನು ಅನುಭವಿಸುವ ಋಣ ಇರಲಿಲ್ಲ. ಅವನ ಚಿಕ್ಕಮ್ಮ ಸುರುಚಿ ಇದಕ್ಕೆ ವಿರೋಧ ವ್ಯಕ್ತಪಡಿಸಿ ಸುನೀತ ಮತ್ತು ಧ್ರುವನನ್ನು ಅರಮನೆಯಿಂದ ಆಚೆ ತಳ್ಳಿದ್ದಳು.

"ಇದಕ್ಕೆ ಪರಿಹಾರ ಕ್ರಮವಾಗಿ ಧ್ರುವ ದೇವರ (ವಿಷ್ಣು)ವನ್ನು ಕಾಣಲು ತಪಸ್ಸು ಮಾಡಲು ಕಾಡಿಗೆ ಹೋಗುತ್ತಾನೆ. ಅಲ್ಲಿ ನಾರದರ ಉಪದೇಶದಂತೆ ಧ್ರುವ ನಿಶ್ಚಲ ಮನಸ್ಸಿನಿಂದ ಶ್ರೀಮನ್ನಾರಾಯಣ ಮಂತ್ರವನ್ನು ಉಚ್ಚರಿಸುತ್ತ ಭಕ್ತಿಯಿಂದ ತಪಸ್ಸಿಗೆ ಕುಳಿತುಕೊಂಡನ್ನು."[೩೦] ಅವನ ಮನಸ್ಸನ್ನು ತಪಸ್ಸಿನಿಂದ ತಿರುಗಿಸಲು ಇಂದ್ರನಿಂದಲೂ ಸಾಧ್ಯವಾಗಲಿಲ್ಲ. ಮುಗ್ಧ ಬಾಲಕನ ಪ್ರಾರ್ಥನೆ ಭಗವಂತನನ್ನು ಮುಟ್ಟಿತು. ವಿಷ್ಣು ವೈಕುಂಠದಿಂದ ಬಂದು ಧ್ರುವನನ್ನು ಆಲಂಗಿಸಿಕೊಂಡು ನಿನ್ನ ಆಸೆಗಳೆಲ್ಲ ಫಲಿಸಲಿ ಎಂದು ಆಶೀರ್ವಾದ ಮಾಡಿ ಮಾಯವಾದನು.

ಹೀಗೆ ಭಗವಂತನನ್ನು ಕಂಡು ಅನುಗ್ರಹ ಪಡೆದ ಧ್ರುವನನ್ನು ತಂದೆ-ತಾಯಿ ಹರ್ಷದಿಂದ ಬರಮಾಡಿಕೊಂಡರು. ಮಲತಾಯಿ ಸುರುಚಿ ತನ್ನ ತಪ್ಪು ತಿದ್ದಿಕೊಂಡಳು. ಮುಂದೆ ಧ್ರುವ ರಾಜನಾಗಿ ಅನೇಕ ವರ್ಷಗಳ ಕಾಲ ರಾಜ್ಯವಾಳಿ ಪದವಿಯನ್ನು ಪಡೆದ.

ಒಟ್ಟಿನಲ್ಲಿ ಧ್ರುವ ಬಾಲಕನಾದರೂ ತುಂಬಾ ಧೈರ್ಯಶಾಲಿ, ಅಚಲಭಕ್ತಿ, ಅವನ ಗುರುಭಕ್ತಿ, ಮಾತೃವಾತ್ಸಲ್ಯ, ದೈವಶ್ರದ್ಧೆ ಶ್ರೇಷ್ಠವಾದವುಗಳು.

ಐದನೆಯ ಕಥೆಯಲ್ಲಿ ಶ್ರೇಷ್ಠದಾನ ಪ್ರತಿಪಾದಕ 'ನಚಿಕೇತ' ಇದರಲ್ಲಿ ನಚಿಕೇತನ ವಿಚಿತ್ರ ಪ್ರಶ್ನೆಗಳು, ಅವನ ಸಹಾಯ ಮನೋಭಾವ ಮತ್ತು ಘೋರ ತಪಸ್ಸಿನಿಂದ ಯಮನ ದರ್ಶನ ಇವು ಕಥೆಯಲ್ಲಿ ಪ್ರಮುಖವಾಗಿ ಕಂಡುಬರುತ್ತವೆ. ನಚಿಕೇತ ತನ್ನ ತಂದೆ ಉದ್ದಾಲಕನು ವಿಶ್ವಜಿತ್ ಯಾಗವನ್ನು ಮಾಡುತ್ತಾನೆ. ತಂದೆಯು ಮಾಡುತ್ತಿರುವ ಯಾಗದ ಅರ್ಥ ತಿಳಿಯಬೇಕೆಂದು ಇದರ ಬಗ್ಗೆ ಆಚಾರ್ಯನನ್ನು ಕೇಳಿದ ಆಗ ಆಚಾರ್ಯರರು ಈ ಯಾಗ ಸಫಲವಾಗಬೇಕಾದರೆ ತನ್ನಲ್ಲಿರುವುದನ್ನು ಎಲ್ಲ ದಾನ ಮಾಡಬೇಕು ಎಂದರು, ನಚಿಕೇತ ತನ್ನ ತಂದೆ ಹಸುಗಳನ್ನು ದಾನ ಮಾಡುವುದರ ಬದಲು ನನ್ನನ್ನು ಬೇರೆಯವರಿಗೆ ದಾನ ಮಾಡಬಹುದಿತ್ತಲ್ಲ ಎಂಬ ಪ್ರಶ್ನೆಯನ್ನು ಹಾಕಿಕೊಂಡು ಈ ಬೇಡಿಕೆಯನ್ನು ಈಡೇರಿಸಲು ತಂದೆಗೆ ಹೇಳಿದ್ದಾನೆ. ಆಗ ಉದ್ದಾಲಕನು ನಿನ್ನನ್ನು ಮೃತ್ಯುವಿಗೆ ದಾನ ಮಾಡಿದ್ದೇನೆ ಹೋಗು ಎಂದನು. ಈ ಮಾತಿನಂತೆ ಬಾಲಕ ಮರುಕ್ಷಣದಲ್ಲಿ ಯಮನನ್ನು ಕುರಿತು ತಪಸ್ಸು ಮಾಡಿ ಯಮನಿಂದ ಮೂರು ವರ ಪಡೆಯುತ್ತಾನೆ. ಇದ್ದರಿಂದ ನಚಿಕೇತನ ತಂದೆ-ತಾಯಿ ಆ ಮಗುವನ್ನು ಮುದ್ದಾಡಿದರು. ನಂತರ ನಚಿಕೇತ ಮಹರ್ಷಿಯಾದ.

ಒಟ್ಟಿನಲ್ಲಿ ನಚಿಕೇತನ ಚುರುಕು ಪ್ರಶ್ನೆಗಳು ದಾನದ ಬಗ್ಗೆ ಕೇಳಿದ ಪ್ರಶ್ನೆ ಯಮನಿಂದ ವರ ಪಡೆದ ಪರಿ ಮುಖ್ಯವಾಗಿದೆ.

ಮತ್ತೊಂದು ಕಥೆ ಭಗವದ್ಭಕ್ತಿಯ ಪ್ರತೀಕ. 'ಪ್ರಹ್ಲಾದ' ಈ ಕಥೆಯಲ್ಲಿ ರಾಕ್ಷಸ ಹಿರಣ್ಯಕಷಿಪು ಮತ್ತು ದೇವತೆಗಳ ನಡುವಿನ ಹೋರಾಟ, ಕಷಿಪುವಿನ ಮಗ ಪ್ರಹ್ಲಾದ ವಿಷ್ಣುವಿನ ನಾಮಭಜನೆ ಇವು ಪ್ರಮುಖವಾಗಿ ಕಂಡುಬರುತ್ತವೆ. ಮೂರು ಲೋಕವನ್ನು ಜಯಿಸಬೇಕು. ತನ್ನ ಮಗ ಪ್ರಹ್ಲಾದನನ್ನು ನನ್ನಂತೆ ರಾಕ್ಷಸನಾಗಿ ಮಾಡಿ ದೇವತೆಗಳಿಗೆ ತೊಂದರೆ ಕೊಡಬೇಕು ಎಂಬ ಹಿರಣ್ಯಕಷಿಪುವಿನ ಆಸೆ ಈಡೇರುವುದಿಲ್ಲ. ಕೊನೆಗೆ ತನ್ನ ಮಗ ಪ್ರಹ್ಲಾದನ ವಿರುದ್ಧ ಬಂಡೆದ್ದಾಗ ವಿಷ್ಣು ನರಸಿಂಹನಾಗಿ ಹೊರಬಂದು ಕಷಿಪುನನ್ನು ಸಂಹಾರಿಸುತ್ತಾನೆ. ಲೋಕ ಕಂಟಕನಾಗಿದ್ದ ರಾಕ್ಷಸನ ವಧೆಯಿಂದ ದೇವತೆಗಳಿಗೆ ಸಂತೋಷವಾಯಿತು. ಮುಂದೆ ಪ್ರಹ್ಲಾದನು ದೇವತೆಗಳ ಅನುಗ್ರಹದಿಂದ ಆದರ್ಶ ಚಕ್ರವರ್ತಿಯಾಗಿ, ಶ್ರೀಹರಿಯ ಅಚಲ ಭಕ್ತನಾಗಿ, ಅನುಪಮ ಕೀರ್ತಿಶಾಲಿಯಾಗಿ ಬದುಕಿದನು. ಒಟ್ಟಿನಲ್ಲಿ ಕಷಿಪುವಿನ ಸಂಹಾರ, ಪ್ರಹ್ಲಾದನ ತಾಳ್ಮೆ, ಭಕ್ತಿ, ವಿಷ್ಣುವಿನ ನಾಮ ಪರಿತಪಿಸುವ ಪರಿ ಈ ಕಥೆಯಲ್ಲಿ ಹೃದಯಸ್ಪರ್ಶಿಯಾಗಿ ಮೂಡಿಬಂದಿದೆ.

ಆರನೆಯ ಕಥೆ ಮರಣವನ್ನು ಗೆದ್ದ 'ಮಾರ್ಕಂಡೆ'ಯ ಎಂಬ ಕಥೆಯಲ್ಲಿ ಮಾರ್ಕಂಡೆಯ ನಿರಂತರವಾದ ತಪಸ್ಸಿನಿಂದ ತನ್ನ ಆಯಸ್ಸನ್ನು ಹೆಚ್ಚಿಸಿಕೊಳ್ಳುತ್ತಾನೆ. ಮಾರ್ಕಂಡೆಯನ ತಂದೆ ಮೃಕಂಡಮುನಿ ಮತ್ತು ತಾಯಿ ಮರುದ್ಗತಿಯ ಭಕ್ತಿ, ನಿಷ್ಠೆ, ದಾನ ಮನೋಭಾವದಿಂದ ಸಾಕ್ಷಾತ್ ಪರಮೇಶ್ವರನ ದರ್ಶನ ಪಡೆಯುತ್ತಾರೆ. ಆಗ ಪರಮೇಶ್ವರ ನಿಮಗೆ ಅನೇಕ ವರ್ಷಗಳು ಬದುಕುವ ಅಪ್ರಯೋಜಕನಾದ ಮಗ ಬೇಕೊ? ಅಥವಾ ಸರ್ವಗುಣ ಶ್ರೇಷ್ಟನಾದ ಅಲ್ಪ ಆಯುಷಿಯಾದ ಮಗ ಬೇಕೊ? ಎಂದು ಕೇಳಿದಾಗ ಋಷಿ ದಂಪತಿಗಳು ಯೋಗ್ಯನಾದ ಮಗನನ್ನು ಬೇಡುತ್ತಾರೆ. ಇಲ್ಲಿ ಯಾವುದೇ ಒಬ್ಬ ವ್ಯಕ್ತಿ ಮೋಸ, ವಂಚನೆ ಇಂತಹ ಕೆಟ್ಟ ಗುಣಗಳನ್ನು ತುಂಬಿಕೊಂಡು ನೂರು ವರ್ಷಗಳ ಕಾಲ ಬದುಕುವುದಕ್ಕಿಂತ ಒಳ್ಳೆಯ ಮನೋಭಾವ, ಪ್ರೀತಿ, ವಾತ್ಸಲ್ಯ, ಸಹನೆ ಇಂತಹ ಗುಣಗಳನ್ನು ಹೊಂದಿ ಸಮಾಜಕ್ಕೆ ಸತ್ಕಾರ್ಯಗಳನ್ನು ಮಾಡಿ ಮೂರೇ ದಿನ ಬದುಕುವುದು ಮೇಲು ಎಂಬ ಪ್ರಯೋಜನಕಾರಿ ಅಂಶ ತಿಳಿದುಬರುತ್ತದೆ.

ಮಾರ್ಕಂಡೇಯ ತನ್ನ ಆಯಸ್ಸನ್ನು ಹೆಚ್ಚಿಸಿಕೊಳ್ಳಲು ಘೋರ ತಪಸ್ಸು ಮಾಡಿ ಪರಮೇಶ್ವರನಿಂದ ವರ ಪಡೆದು ದೀರ್ಘಾಯುಷಿಯಾಗುತ್ತಾನೆ. ಇಲ್ಲಿ ಮಾರ್ಕಂಡೆಯನ ಗುರುಭಕ್ತಿ, ಹಿರಿಯರಿಗೆ ಕೊಡುವ ಗೌರವ, ದೀನದಲಿತರಿಗೆ ಸಹಾಯ ಮನೋಭಾವ ಒಟ್ಟಾರೆ ಒಳ್ಳೆಯ ಮನಸ್ಸಿದ್ದರೆ ಏನು ಬೇಕಾದರೂ ಗೆಲ್ಲಬಹುದು ಎಂಬ ಅಂಶ ತಿಳಿದುಬರುತ್ತದೆ.

ಒಟ್ಟಿನಲ್ಲಿ ಮಾರ್ಕಂಡೇಯ ಅಸಾಧರಣ ಬಾಲಕ. ತನ್ನ ಸ್ವಂತ ಶಕ್ತಿಯಿಂದಲೇ ಪರಮೇಶ್ವರನನ್ನು ಮೆಚ್ಚಿಸಿ ಮೃತ್ಯುವನ್ನು ಗೆದ್ದ ಮಹಾಭಕ್ತ. "ಮಾರ್ಕಂಡೆಯ ಮುನಿ" ಎಂದು ಪ್ರಖ್ಯಾತನಾಗಿ

ಅನೇಕ ವರ್ಷಗಳು ಆದರ್ಶವಾಗಿ ಬದುಕಿ ಬಾಳಿದ. ದೈವಭಕ್ತಿ, ಗುರುಹಿರಿಯರ ಶ್ರದ್ಧೆ ಇದ್ದರೆ ಮೃತ್ಯುವನ್ನು ಗೆಲ್ಲಬಹುದೆಂಬುದಕ್ಕೆ ಮಾರ್ಕಂಡೇಯ ಒಂದು ನಿದರ್ಶನ.

ಮತ್ತೊಂದು ಕಥೆ ಶ್ರದ್ಧೆಯ ಸಂಕೇತ 'ಏಕಲವ್ಯ'. ಈ ಕಥೆಯಲ್ಲಿ ಹಿರಣ್ಯಧನು ಎಂಬ ಬೇಡನ ಮಗ ಏಕಲವ್ಯನು ಬಿಲ್ಲು ವಿದ್ಯೆಯಲ್ಲಿ ಪರಿಣಿತನಾಗಬೇಕೆಂದು ದ್ರೋಣಾಚಾರ್ಯರ ಬಳಿ ಹೋಗಿ ವಿದ್ಯೆ ಕಲಿಸಲು ಬೇಡಿದಾಗ ದ್ರೋಣಾಚಾರ್ಯ ಗುರುಗಳು ಏಕಲವ್ಯ ಬೇಡ ಕುಲದವನಾಗಿದ್ದರಿಂದ ಬಿಲ್ಲು ವಿದ್ಯೆ ಕಲಿಸಲು ಮುಂದೆ ಬರುವುದಿಲ್ಲ. ಇದ್ದರಿಂದ ಪ್ರಾಚೀನ ಕಾಲದಲ್ಲಿ ವಿದ್ಯೆ ಎಂಬುದು ಕೇವಲ ಉನ್ನತ ವರ್ಗದವರಿಗೆ, ರಾಜ ಮಕ್ಕಳಿಗೆ ಇತ್ತು ಎಂಬುದು ತಿಳಿದುಬರುತ್ತದೆ. ಏಕಲವ್ಯ ದ್ರೋಣಾಚಾರ್ಯರ ಮಣ್ಣಿನ ಮೂರ್ತಿಯನ್ನು ಮಾಡಿಕೊಂಡು ಆ ಮೂರ್ತಿಯನ್ನೇ ತನ್ನ ಗುರು ದ್ರೋಣಾಚಾರ್ಯ ಎಂದುತಿಳಿದು ಶಬ್ದವೇದಿ ವಿದ್ಯೆ ಕಲಿಯುತ್ತಾನೆ. ಈ ವಿಷಯ ತಿಳಿದ ಅರ್ಜುನ ಕೋಪಿತಗೊಂಡು ದ್ರೋಣಾಚಾರ್ಯರ ಮೂಲಕ ಏಕಲವ್ಯನು ಬಲಗೈ ಹೆಬ್ಬೆರಳನ್ನು ಗುರು ದಕ್ಷಿಣೆಯಾಗಿ ಪಡೆಯುತ್ತಾನೆ. ಏಕಲವ್ಯ ಸಂತೋಷದಿಂದ ತನ್ನ ಹೆಬ್ಬೆರಳನ್ನು ಗುರು ಕಾಣಿಕೆಯಾಗಿ ಕೊಡುತ್ತಾನೆ.

ಒಟ್ಟಾರೆಯಾಗಿ ಏಕಲವ್ಯನು ಗುರುಭಕ್ತಿ, ವಿದ್ಯೆ ಕಲಿಯುವ ಶ್ರದ್ಧೆ, ಏನೇ ಆದರೂ ಸತ್ಯವನ್ನು ಹೇಳುವ ನಿಷ್ಠೆ, ತನ್ನ ಗುರು ಕೇಳಿದ ದಕ್ಷಿಣೆಯನ್ನು ಮನಸ್ಸಿನಲ್ಲಿ ಸ್ವಲ್ಪವೂ ನೊಂದಕೊಳ್ಳದೆ ಕೊಡುವ ನಿರ್ಧಾರ ಆದರ್ಶವಾದವುಗಳು.

ಮತ್ತೊಂದು ಕಥೆ ಶೌರ್ಯದ ಆಗರ ವೀರ ಅಭಿಮನ್ಯು ಎಂಬ ಕಥೆಯಲ್ಲಿ ಅರ್ಜುನ-ಸುಭದ್ರೆಯ ಮಗನಾದ ಅಭಿಮನ್ಯು ಕೌರವರು ಮತ್ತು ಪಾಂಡವರಿಗೆ ನಡೆದ ಮಹಾಭಾರತ ಯುದ್ಧದಲ್ಲಿ ಅಭಿಮನ್ಯು ಎಲ್ಲರ ಮನಸ್ಸನ್ನು ಸೆಳೆದ ವ್ಯಕ್ತಿ. ಮಹಾಭಾರತ ಯುದ್ಧದಲ್ಲಿ ವೀರಾಧಿ ವೀರರನ್ನು ಸೋಲಿಸಿ ವೀರ ಮರಣವನ್ನಪ್ಪಿದ ಬಾಲವೀರ. ಯುದ್ಧದಲ್ಲಿ ಗೆದ್ದರೆ ವಿಜಯ ಮಾಲೆ, ಸೋತರೆ ವೀರಸ್ವರ್ಗ ಎಂದು ಅಭಿಮನ್ಯು ಮಹಾಭಾರತದ ವೀರರ ಮನಸ್ಸು ತಲ್ಲಣಗೊಳ್ಳುವಂತೆ ರಣರಂಗವನ್ನು ನಡುಗಿಸಿದ ಅಭಿಮನ್ಯು ಪಾಂಡವರು ಗೆಲ್ಲುವುದಕ್ಕೆ ಮುಂಚೆಯೇ ಮರಣವನ್ನು ಪಡೆದ. ಚಿಕ್ಕ ವಯಸ್ಸಿನಲ್ಲೇ ಅಪಾರ ಪರಾಕ್ರಮವನ್ನು ತೋರಿದ ಅಭಿಮನ್ಯು ಒಬ್ಬ ಆದರ್ಶ ವೀರ.

ಕೊನೆಯ ಹತ್ತನೆಯ ಕಥೆ 'ಮಾತಾ ಪಿತರ ಮತ್ತೆ ಸೇರಿಸಿದ ಭರತ' ಕಣ್ವ ಎಂಬ ಋಷಿಯ ಸಾಕುಮಗಳು ಶಕುಂತಲೆ ಮತ್ತು ದುಷ್ಯಂತ ಮಹಾರಾಜನ ಮಗನೇ ಭರತ. ಆದರೆ ದುರ್ವಾಸರ ಶಾಪದಿಂದ ಶಕುಂತಲೆಯನ್ನು ದುಷ್ಯಂತ ಮರೆತುಬಿಟ್ಟಿದ್ದ. ಭರತ ಚಿಕ್ಕವನಾಗಿದ್ದಾಗಲೇ ತುಂಬ

ಧೈರ್ಯಶಾಲಿ. ದುಷ್ಟ ಮೃಗಗಳೆಂದರೆ ಅವನಿಗೆ ಹೆದರಿಕೆ ಇರಲಿಲ್ಲ. ಹುಲಿ ಮರಿಗಳೊಂದಿಗೆ, ದುಷ್ಟ ಮೃಗಗಳೊಂದಿಗೆ ಆಟವಾಡುತ್ತಿದ್ದ. ಭರತನು ಗುರುಹಿರಿಯರಲ್ಲಿ ಭಕ್ತಿ–ಗೌರವಗಳನ್ನು ತೋರುತ್ತಿದ್ದ. ಪೂಜೆ, ಯಜ್ಞ, ಯಾಗಾದಿಗಳನ್ನು ಮಾಡುತ್ತಿದ್ದ. ಜೊತೆಗೆ ಧೈರ್ಯವಂತ, ವಿನಯ ಗುಣ, ಶೌರ್ಯವಂತನಾಗಿದ್ದ. ಇವನ ಈ ಗುಣಗಳು ದುಷ್ಯಂತ ಮಹಾರಾಜನಿಗೆ ಆಕರ್ಷಣೆ ಆಗಿದ್ದವು. ಒಂದು ದಿನ ದುಷ್ಯಂತ ಮಹಾರಾಜನಿಗೆ ನೆನಪಿನ ಶಕ್ತಿ ಬಂದು ಶಕುಂತಲೆ ನನ್ನ ಹೆಂಡತಿ, ಭರತ ನನ್ನ ಮಗನೆಂದು ತಿಳಿದಾಗ ಅವನಿಗೆ ತುಂಬಾ ಸಂತೋಷವಾಯಿತು.

ರಾಜಕುಮಾರ ಭರತ ಪರಾಕ್ರಮಿಯಾಗಿ, ಕೀರ್ತಿಶಾಲಿಯಾಗಿ ತಂದೆಯ ರಾಜ್ಯವನ್ನು ವಿಸ್ತರಿಸಿದ. ಮುಂದೆ ತಾನು ಚಕ್ರವರ್ತಿಯಾಗಿ ಧರ್ಮದಿಂದ ರಾಜ್ಯವಾಳಿದ. ಧಯೆ, ಧರ್ಮ, ದಾನ, ಧೈರ್ಯ ಮುಂತಾದ ಸದ್ಗುಣಗಳನ್ನು ಬೆಳೆಸಿಕೊಂಡ ಭರತ ಚಕ್ರವರ್ತಿಯಿಂದ ನಮ್ಮ ದೇಶ ಭಾರತ ಎಂದು ಹೆಸರು ಪಡೆಯಿತು.

ಒಟ್ಟಿನಲ್ಲಿ ಸಿ.ಕೆ. ಪರಶುರಾಮಯ್ಯನವರು ಐತಿಹಾಸಿಕ ಕಥೆಗಳಲ್ಲಿ ಬರುವ ಬಾಲಕರ ಸನ್ನಿವೇಶಗಳನ್ನು ಈ ಕೃತಿಯಲ್ಲಿ ತುಂಬಾ ಮನೋಹಕವಾಗಿ ಚಿತ್ರಿಸಿದ್ದಾರೆ. ಇಲ್ಲಿ ಬರುವ ಪ್ರತಿಯೊಂದು ಕಥೆಗಳ ಶೈಲಿ ತುಂಬಾ ಸುಂದರ, ಸಜೀವವಾಗಿದೆ. ಮಕ್ಕಳಿಗೆ ಓದು–ಬರಹ ಕಲ್ಪಿಸಲು ಅವರ ಕಲ್ಪನಾ ಶಕ್ತಿಯನ್ನು ಹೆಚ್ಚಿಸಲು ಇಲ್ಲಿಯ ಕಥೆಗಳು ಉತ್ತಮ ಸಾಧನವಾಗಿವೆ. ನಮ್ಮ ಮಕ್ಕಳಿಗೆ ಪೌರಾಣಿಕ ಬಾಲಕರ ಧೈರ್ಯ, ಶೌರ್ಯ, ಸಹಾಸ ಗುಣಗಳು, ಕರುಣೆ, ಅನುಕಂಪ, ವಿನಯ, ಭಯ, ಭಕ್ತಿ ಮುಂತಾದ ಜನಜೀವನ ಪರಿಚಯವಾದರೆ ಸಿ.ಕೆ.ಪಿ. ಅವರ ಶ್ರಮ ಸಾರ್ಥಕ.

ಈ ಪ್ರತಿಯೊಂದು ಕಥೆಯಲ್ಲಿರುವ ಮಕ್ಕಳ ಪಿತೃ ಭಕ್ತಿ, ಭಾತೃ ಪ್ರೇಮ, ಸ್ವಾಮಿ ನಿಷ್ಠೆ, ಭಕ್ತಿ, ವಿವೇಕ, ಸಾಹಸ ಮುಂತಾದ ಜೀವನದ ನಿಜ ಮುಖಗಳು, ಪಾತ್ರ ಧಾರಣೆ ಮಾಡಿ ಈ ಕಥೆಗಳನ್ನು ಅಮರವಾಗಿಸಿವೆ. ಸಾಮಾನ್ಯವಾಗಿ ಎಲ್ಲ ಸ್ತರಗಳಲ್ಲಿ ಕಾಣಬರುವ ನೈಜ ಗುಣಗಳಾದ ಆಸೆ, ಆಕಾಂಕ್ಷೆ, ಪ್ರೇಮ, ಕಾಮ, ಕ್ರೋಧ, ಕಷ್ಟ, ಕಾರ್ಪಣ್ಯ, ತುಡಿತ–ಮಿಡಿತ, ಧರ್ಮ–ಅಧರ್ಮಗಳ ತಾಕಲಾಟ, ಮತ್ಸರ–ಅಭಿಲಾಷೆಗಳ ರುದ್ರನರ್ತನ, ಸ್ವಾರ್ಥ–ತ್ಯಾಗ ರಿಂಗಣ, ಕುಣಿತ ಮುಂತಾದ ಭಾವನೆಗಳು ಪಾತ್ರ ಮುಖೇನ ಪ್ರತಿಬಿಂಬಿಸಿವೆ. ಇಲ್ಲಿ ಸಿ.ಕೆ.ಪಿ. ಅವರು ಮಕ್ಕಳ ಮನಸ್ಸನ್ನು ಗೆದ್ದರೆ ಜನಮನವನ್ನು ಗೆಲ್ಲುವುದು ಸುಲಭ ಎಂಬ ನಿಲುವನ್ನು ಹೊಂದಿದ್ದಾರೆ.

ಇಲ್ಲಿನ ಕಥೆಗಳು ವಸ್ತು, ಜೀವನ ದೃಷ್ಟಿ, ಪರಿಸರ, ಸಾಹಸ, ಬುದ್ಧಿಶೀಲತೆ, ತಂತ್ರಗಾರಿಕೆ, ಲೋಕನೀತಿ, ರೂಪಾಂತರ, ಪ್ರತಿಕಾತ್ಮತೆ, ಜೀವನ ನೀತಿ ಮುಂತಾದ ವೈವಿಧ್ಯಮಯ ಕ್ಷೇತ್ರಗಳನ್ನು ಆಲಂಗಿಸುತ್ತದೆ. ಈ ಕಥೆಗಳ ವೈವಿಧ್ಯತೆ, ಅನನ್ಯತೆ ಮತ್ತು ವ್ಯಾಪಕತೆಗಳು ಹಲವು ರೀತಿಯ

ಅಧ್ಯಯನಕ್ಕೆ ಪ್ರೇರಣೆ ಒದಗಿಸುತ್ತವೆ. ಈ ಕೃತಿ ಮಕ್ಕಳಿಗೆಂದೇ ರಚಿತಗೊಂಡಿದ್ದರೂ ಹಿರಿಯರಿಗೂ ಪ್ರಿಯವಾಗುವುದರಲ್ಲಿ ಸಂದೇಹವಿಲ್ಲ.

೪. ಕರುಳ ಬಳ್ಳಿ :

ನಮ್ಮ ಜನಪದರು ತಾಯಿ–ಮಕ್ಕಳಿಗೆ ಸಂಬಂಧಿಸಿದಂತಹ ಅನೇಕ ತ್ರಿಪದಿ ಪದ್ಯಗಳನ್ನು ಹೇಳುವುದರ ಮೂಲಕ ಕನ್ನಡ ಸಾಹಿತ್ಯ ಲೋಕಕ್ಕೆ ವಿಶಿಷ್ಟವಾದ ಕೊಡುಗೆ ನೀಡಿದ್ದಾರೆ. ಇಂತಹ ತ್ರಿಪದಿ ಪದ್ಯಗಳ ಮೌಲ್ಯವನ್ನು ತಿಳಿದ ಸಿ.ಕೆ.ಪಿ. ಅವರು ಅವುಗಳಲ್ಲಿ ಪ್ರಮುಖವಾದ ಪದ್ಯಗಳನ್ನು ಆಯ್ಕೆ ಮಾಡಿಕೊಂಡು ಅವುಗಳ ವಿವರಣೆ, ವಿಶ್ಲೇಷಣೆ, ವಿಮರ್ಶೆಗಳನ್ನು ಈ ಕೃತಿಯಲ್ಲಿ ಮಾಡಿದ್ದಾರೆ.

ಪ್ರಸ್ತುತ 'ಕರುಳ ಬಳ್ಳಿ' ಕೃತಿಯು ಜನಪದ ಸಾಹಿತ್ಯ, ಸಂಸ್ಕೃತಿಯನ್ನು ಕುರಿತ ಸಿ.ಕೆ.ಪಿ. ಅವರ ಚಿಂತನೆಯ ಬರಹ. ಜನಪದ ನುಡಿಗಟ್ಟು ಇಡೀ ಕೃತಿಯ ಕೇಂದ್ರ ಪ್ರಜ್ಞೆ, ಹೆಣ್ಣು–ಹೆಣ್ಣಿನ ಬದುಕು ಎಂದು ಗುರುತಿಸಬಹುದು. ಬಂಜೆತನದ ಬವಣೆ, ಮಗುವಿಗಾಗಿ ಹಂಬಲ, ಮಕ್ಕಳ ಪಾಲನೆ, ಪೋಷಣೆ, ಮಗಳನ್ನು ಗಂಡನ ಮನೆಗೆ ಕಳುಹಿಸುವುದು, ಮಗಳ ಬಾಣಂತನ, ತವರ ಹಂಬಲ, ಗಂಡನ ಮನೆಯಲ್ಲಿ ಅವಳ ಅನುಭವ, ದಾಂಪತ್ಯ ಜೀವನ, ತೌರ ಮತ್ತು ಹೆಣ್ಣಿನ ಸಂಬಂಧದಲ್ಲಿ ಅಣ್ಣ–ತಮ್ಮ–ಅತ್ತಿಗೆ ಹಾಗೂ ಬಳಗದ ಕಾರ್ಯ ಚಟುವಟಿಕೆಗಳು ಹೀಗೆ ಹಲವು ನೆಲೆಗಳ ಅನುಭವ ನಿವೇಧನೆಯನ್ನು ಅನುಕ್ರಮವಾಗಿ ಪರಿಭಾವಿಸಿ ಇಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಇಲ್ಲಿ ತಾಯಿ ಭಾವದ ಸಂವೇದನೆಯನ್ನು ಒಳಗೊಂಡ ಪ್ರಜ್ಞೆಯನ್ನು ಕೇಂದ್ರವಾಗಿಟ್ಟುಕೊಂಡು ಅದರ ಸುತ್ತ ಇರುವ ಕರುಳ ಸಂಬಂಧದ ಬಗೆಯ ಅಭಿವ್ಯಕ್ತಿಯನ್ನು ಒಂದು ಮುತ್ತಿನ ಹಾರದಂತೆ ಕಟ್ಟುವ ಕೆಲಸವನ್ನು ಸಿ.ಕೆ.ಪಿ. ಅವರು ಮಾಡಿದ್ದಾರೆ.

ತಾಯ್ತನದ ತುಡಿತವನ್ನು ಕುರಿತು ಹೇಳುವಾಗ ಇಲ್ಲಿ ಕೋಳಿಗೆ ಸಂಬಂಧಿಸಿದ ಜನಪದ ಕಥೆಯೊಂದನ್ನು ಉದಾಹರಿಸುತ್ತಾರೆ. ಒಂದು ಸಾಮಾನ್ಯ ಜೀವಿಯಾದ ಕೋಳಿಯು ಶಿವನಲ್ಲಿಗೆ ಹೋಗಿ ತನಗೆ ಮಕ್ಕಳ ಭಾಗ್ಯವನ್ನು ಕರುಣಿಸಬೇಕೆಂದು ಕೇಳಿದಾಗ ಶಿವನು ಕೋಳಿಗೆ ನೀನೇ ಹೊಟ್ಟೆ ಹೊರೆಯುವುದು ಕಷ್ಟವಿದ್ದಾಗ ಇನ್ನು ಮಕ್ಕಳನ್ನು ಹೇಗೆ ಸಾಕುತ್ತೀಯ "ಹಟ್ಟಿ ಕೆರೆದು ಐವತ್ತು ಸಾಕ್ತೀನಿ, ತಿಪ್ಪೇಕೆರೆದು ಇಪ್ಪತ್ತು ಸಾಕ್ತೀನಿ" ಎಂದು ಹೇಳುವ ಕೋಳಿಯ ತಾಯ್ತನದ ಗುಣವನ್ನು ವ್ಯಾಖ್ಯಾನಿಸುತ್ತಾ, ಅದು ಇಡೀ ಜಗತ್ತಿನಲ್ಲಿ ಹೆಣ್ಣು ಜೀವ ಬಯಸುವ ತಾಯ್ತನದ ಆಶಯವನ್ನು ಹೇಗೆ ವ್ಯಕ್ತವಾಗುತ್ತದೆ ಎಂಬುದನ್ನು ಅರ್ಥಪೂರ್ಣವಾಗಿ ಲೇಖಕರು ವಿವರಿಸಿದ್ದಾರೆ. ಮುಂದೆ ಇವರು ವ್ಯಾಖ್ಯಾನಿಸುವ ಎಲ್ಲಾ ಬಗೆಯ ವಿವರಗಳಿಗೆ ಇದು ಒಂದು ಒಳ್ಳೆಯ ಪ್ರವೇಶಿಕೆಯನ್ನು ಒದಗಿಸಿದೆ.

"ಸಿ.ಕೆ.ಪಿ. ಅವರು ಈ ಕೃತಿಯಲ್ಲಿ ಭಾವ ಪ್ರಧಾನವಾದ, ಸರಳವಾದ ಭಾಷೆಯನ್ನು ಬಳಸಿದ್ದಾರೆ. ಪ್ರಾಸಂಗಿಕವಾಗಿ ಅವರು ಉದಾಹರಿಸುವ ಇತಿಹಾಸ ಮಾದರಿಯ ಕತೆಗಳು ಅವರ ವಿಚಾರವನ್ನು ಪುಷ್ಟೀಕರಿಸುವ ಪೂರಕ ಸಂಪತ್ತುಗಳಾಗಿ ಕಂಡುಬರುತ್ತವೆ."[೩೧] ಪದ್ಯಗಳ ವಿವರಣೆ ಸಂದರ್ಭದಲ್ಲಿ ಅಲ್ಲಲ್ಲಿ ನುಡಿಗಟ್ಟುಗಳು, ಗಾದೆಮಾತುಗಳನ್ನು ಉದಾಹರಣೆ ಸಹಿತ ನೀಡುತ್ತ ಓದುಗರಿಗೆ ಸತ್ವಯುತವಾದ, ವೈಶಿಷ್ಟ್ಯವಾದ ವಿವರಣೆಯನ್ನು ನೀಡುತ್ತಾರೆ.

ಒಟ್ಟಿನಲ್ಲಿ ಸಿ.ಕೆ.ಪಿ. ಅವರು ಕೇವಲ ಮೂರು ಸಾಲಿನ ಪದ್ಯಗಳನ್ನು ನೂರು ಸಾಲುಗಳಾಗಿ ಚಿಂತನಾಶೀಲ ನೆಲೆಯಲ್ಲಿ ವಿವರಿಸುವ ವಿಶಿಷ್ಟ ಪ್ರತಿಭೆಯನ್ನು ಹೊಂದಿದ್ದಾರೆ. ಅಷ್ಟೇ ಅಲ್ಲದೆ ಇವರು ಪದ್ಯಗಳಿಗೆ ವಿವರಣೆ ನೀಡುವಾಗ ಮಾನವೀಯ ಮೌಲ್ಯಗಳ ಜೊತೆಗೆ ಐತಿಹಾಸಿಕ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಸಾಹಿತ್ಯಿಕ ಮುಂತಾದ ವಿಷಯಗಳ ಬಗ್ಗೆ ಪ್ರಸ್ತಾಪಿಸಿ ಇವುಗಳ ಅರಿವನ್ನು ಸಹೃದಯರಿಗೆ ಮುಟ್ಟಿಸುತ್ತಾರೆ.

೩.೪. ಇತರೆ ಸಾಹಿತ್ಯ :

ಸಿ.ಕೆ. ಪರಶುರಾಮಯ್ಯನವರ ಸಾಹಿತ್ಯ ಸಾಧನೆ ಕೇವಲ ಕಾವ್ಯ, ಸಂಶೋಧನೆ, ಗದ್ಯ ಸಾಹಿತ್ಯವನ್ನು ರಚಿಸುವುದಲ್ಲದೆ ಅದರ ಹೊರತಾಗಿಯೂ ಇವರು ಸಾಹಿತ್ಯ ಕೃಷಿ ಮಾಡಿದ್ದಾರೆ. ಅಭಿವೃದ್ಧಿಗೆ ಸಂಬಂಧಿಸಿದ ಅನೇಕ ಕೃತಿಗಳನ್ನು ರಚನೆ ಮಾಡಿದ್ದಾರೆ.

೧. ಕರ್ನಾಟಕ ಪ್ರಗತಿ ಪಥ :

ಸಿ.ಕೆ.ಪಿ. ಅವರು ಸರ್ಕಾರಿ ಸೇವೆಗಳಾದ ವಾರ್ತಾ ಮತ್ತು ಪ್ರಚಾರ ಇಲಾಖೆಯಲ್ಲಿ ವರದಿಗಾರರಾಗಿ ಸೇರಿ ಹಂತಹಂತವಾಗಿ ದೊಡ್ಡ ಹುದ್ದೆಗೇರಿ ಸರ್ಕಾರ ಮತ್ತು ಜನತೆಯ ನಡುವೆ ಸೇತುವೆಯಂತೆ ಕೆಲಸ ಮಾಡಿದ್ದು ಇವರ ಸೇವೆ ವಿಶೇಷವಾದದ್ದು. "೧೯೭೩ರಲ್ಲಿ ಕನ್ನಡ ಅಭಿವೃದ್ಧಿ ಸಮಿತಿಯು ಯೋಜಿಸಿದ್ದ ಕಾರ್ಯಕ್ರಮದನ್ವಯ ಕರ್ನಾಟಕದ ಏಕೀಕರಣದಿಂದ ಹಿಡಿದು ೧೯೭೪ರವರೆಗೆ ರಾಜ್ಯದ ವಿವಿಧ ಇಲಾಖೆಗಳ ಯೋಜನೆ ಮತ್ತು ಸಾಧನೆಗಳನ್ನು ವಿವರಿಸುವ ಬೃಹತ್ ಗ್ರಂಥವಾಗಿದೆ"[೩೨]

'ಕರ್ನಾಟಕ ಪ್ರಗತಿ ಪಥ' ಕೃತಿಯನ್ನು ಎಂ.ಬಿ. ನಂಜಪ್ಪ, ಗೊ.ರು. ಚೆನ್ನಬಸಪ್ಪ, ಸಿ.ಕೆ. ಪರಶುರಾಮಯ್ಯ ಈ ಮೂರು ಜನ ಲೇಖಕರು ಸೇರಿ ವಿವಿಧ ಮೂಲಗಳಿಂದ ಅಂಕಿ-ಅಂಶಗಳನ್ನು ಸಂಗ್ರಹಿಸಿ ಈ ಬೃಹತ್ ಕೃತಿಯನ್ನು ರಚಿಸಿದ್ದಾರೆ. "ಕರ್ನಾಟಕದ ಖ್ಯಾತ ಚಿಂತಕ, ಶ್ರೇಷ್ಠ ಬರಹಗಾರ ಡಾ. ಡಿ.ವಿ. ಗುಂಡಪ್ಪ ಅವರು ಸರ್ ಮೋಕ್ಷಗೊಂಡಂ ವಿಶ್ವೇಶ್ವರಯ್ಯನವರು ಮೆಚ್ಚಬಹುದಾಗಿದ್ದಂತಹ ಕೃತಿಯಾಗಿದೆ, ಸರ್ಕಾರದ ಅಭಿವೃದ್ಧಿ ಕ್ಷೇತ್ರದಲ್ಲಿ ಆಗಿರುವ ಸಾಧನೆ

ಮತ್ತು ಆಗಬೇಕಾಗಿರುವ ಕಾರ್ಯಕ್ರಮಗಳ ಬಗೆಗಿನ ಯೋಜನೆಗಳನ್ನು ಅಗತ್ಯ ಅಂಕಿ-ಅಂಶಗಳೊಂದಿಗೆ ಅಚ್ಚುಕಟ್ಟಾಗಿ ನಿರೂಪಿಸಿರುವ ಅಪರೂಪದ ಪ್ರಮಾಣಭೂತ ಗ್ರಂಥ ಕರ್ನಾಟಕ ಪ್ರಗತಿ ಪಥ. ಒಂದು ರಾಜ್ಯವು ಅಭಿವೃದ್ಧಿ ಪಥದಲ್ಲಿ ಬಂದಿರುವ ದಾರಿ ಮತ್ತು ಮುಂದಿರುವ ದೂರವನ್ನು ಮನದಟ್ಟುಮಾಡುವ ಪ್ರಸಿದ್ಧ ಕೃತಿಯಾಗಿದೆ.

ಭಾರತದಲ್ಲಿ ಪಂಚವಾರ್ಷಿಕ ಯೋಜನೆಗಳು ಆರಂಭವಾದ ಮೇಲೆ ನಮ್ಮ ಜನಜೀವನದಲ್ಲಿ ಹೊಸದೊಂದು ಚೇತನ ಮೂಡಿದೆಯೆಂಬುದು ಸ್ಪಷ್ಟವಾಗಿ ಗೋಚರವಾಗುತ್ತದೆ. ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ತಮ್ಮದೇನೂ ಪಾಲಿಲ್ಲವೆಂಬ ನಿರಾಸಕ್ತ ಭಾವನೆ ಈಗ ಜನರಿಂದ ದೂರವಾಗಿದೆ. ಪ್ರತಿಯೊಬ್ಬ ಭಾರತೀಯನೂ ರಾಷ್ಟ್ರೀಯ ಪ್ರಯತ್ನದಲ್ಲಿ ಪಾಲ್ಗೊಳ್ಳುವ ಉತ್ಸಾಹದ ಮನೋಭಾವ ಬೆಳೆಸಿಕೊಳ್ಳುತ್ತಿದ್ದಾನೆ. ರಾಷ್ಟ್ರ ಬದುಕಿದರೆ ತನ್ನ ಬದುಕು ಎಂಬುದು ಅವನಿಗೀಗ ಅರಿವಾಗುತ್ತಿದೆ. ಬಹುಶಃ ಜನತೆಯಲ್ಲಿ ಈ ಒಂದು ರಾಷ್ಟ್ರೀಯ ಪ್ರಜ್ಞೆ ಮೂಡಿಸಿದ ಯಶಸ್ಸು ನಮ್ಮ ಪಂಚವಾರ್ಷಿಕ ಯೋಜನೆಗಳಿಗೆ ಸಲ್ಲಬೇಕು.

"ಶತಮಾನಗಳಿಂದ ಸ್ಥಗಿತಗೊಂಡಿದ್ದ ನಮ್ಮ ಆರ್ಥಿಕ ಜೀವನಕ್ಕೆ ಇತ್ತೀಚೆಗೆ ಎಂತಹ ಚೇತನ ಉಂಟಾಗಿದೆ ಎಂಬುದನ್ನು ನಮ್ಮ ಯೋಜನೆಗಳ, ಕಾರ್ಯ ಚಟುವಟಿಕೆಗಳ ಒಂದು ಸಾಮಾನ್ಯ ಸಮೀಕ್ಷೆಯಿಂದ ತಿಳಿಯಬಹುದು. ನಮ್ಮ ಕರ್ನಾಟಕಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಪ್ರಗತಿ ಪಥದಲ್ಲಿ ನಾವು ನಡೆದಿರುವ ದಾರಿ ನಮಗೆ ನಿರಾಸೆಯನ್ನೇನೂ ಉಂಟು ಮಾಡಿಲ್ಲ"[೩೩] ಆದರೆ ಸಮಾಧಾನದಿಂದ ಕೈಕಟ್ಟಿಕೊಂಡು ಕುಳಿತುಕೊಳ್ಳುವ ಸ್ಥಿತಿಯಲ್ಲಿಯೂ ನಾವಿಲ್ಲ. ಆದರೂ ಇಟ್ಟ ಹೆಜ್ಜೆ ಭದ್ರವಾಗಿದೆಯೆಂಬ ಆತ್ಮವಿಶ್ವಾಸವಂತೂ ಮೂಡಿದೆ. ಗುರಿ ಸಾಧನೆಯ ಭರವಸೆಯೂ ನಮಗಿದೆ.

ಹೀಗೆ ಜನಜೀವನದ ಮೂಲಾಧಾರವಾದ ಆರ್ಥಿಕ ಬೆಳವಣಿಗೆಯಲ್ಲಿ ಕಳೆದ ಪಂಚವಾರ್ಷಿಕ ಯೋಜನೆಗಳಲ್ಲಿ ನಮ್ಮ ಸಾಧನೆಯೇನು? ಸಾಧನೆಯ ಹಾದಿಯಲ್ಲಿ ಏಳು-ಬೀಳುಗಳೇನು? ಏಳ್ಗೆಗೆ ನೆರವಾದ ಅನುಕೂಲಗಳೇನು? ಸೋಲಿಗೆ ಕಾರಣವಾದ ಪ್ರತಿಕೂಲವೇನು? ಅನುಭವದ ಆಧಾರದ ಮೇಲೆ ಯೋಜನೆಗಳನ್ನು ಹೇಗೆ ಯಶಸ್ವಿಗೊಳಿಸಬಹುದು? ಇರುವ ಸಂಪನ್ಮೂಲಗಳೆಷ್ಟು? ಅವುಗಳ ಬಳಕೆ ಎಷ್ಟು? ಹೇಗೆ? ಇದುವರೆಗಿನ ಯೋಜನೆಗಳು ಜನಜೀವನದ ಸುಧಾರಣೆಯಲ್ಲಿ ವಹಿಸುವ ಪಾತ್ರ ಏನು? ರಾಜ್ಯ ಭವಿಷ್ಯದ ಭದ್ರತೆಗೆ ಬೇಕಾದ ಸಿದ್ಧತೆ, ಹೀಗೆ ಅನೇಕ ಪ್ರಶ್ನೆಗಳಿಗೆ ಬಹುಶಃ "ಕರ್ನಾಟಕದಲ್ಲಿ ಪ್ರಗತಿ ಪಥ" ಉತ್ತರ ಕೊಡುತ್ತದೆ.

ಕರ್ನಾಟಕದಲ್ಲಿ ಪಂಚವಾರ್ಷಿಕ ಯೋಜನೆಗಳಿಗೆ ಸಂಬಂಧಿಸಿದ ಅಂಕಿ–ಅಂಶಗಳು ಮತ್ತಿತರ ಮಾಹಿತಿ ನೀಡುವ ಕನ್ನಡ ಆಧಾರ ಗ್ರಂಥದ ಕೊರತೆಯಿತ್ತು. ಇದನ್ನು ಗಮನಿಸಿ ಕನ್ನಡ ಅಭಿವೃದ್ಧಿ ಸಮಿತಿಯು ನೀಡಿದ ಸೂಚನೆಗೆ ಅನುಗುಣವಾಗಿ ಈ ಬೃಹತ್ ಕೃತಿ ಸಿದ್ಧವಾಗಿದೆ.

"ಪ್ರಗತಿ ಪಥದಲ್ಲಿರುವ ಕರ್ನಾಟಕದ ಆರ್ಥಿಕ ಅಭಿವೃದ್ಧಿಯ ಬಗ್ಗೆ ಒಂದು ಸ್ಥೂಲ ಚಿತ್ರಣವನ್ನು ಕೊಡುವ ಈ ಕೃತಿಯ ಅಧ್ಯಯನದಿಂದ ಕರ್ನಾಟಕದ ಭವಿಷ್ಯದ ಆರ್ಥಿಕ ವ್ಯವಸ್ಥೆಯ ಮುನ್ನೋಟವೂ ದೊರೆಯುತ್ತದೆ. ಮೈಸೂರು ರಾಜ್ಯಕ್ಕೆ 'ಕರ್ನಾಟಕ' ಎಂದು ನಾಮಕರಣವಾದ ತರುವಾಯದಲ್ಲಿ ಈ ಕೃತಿ ಹೊರಬಂದಿದೆ"[೩೪]

ಈ ಕೃತಿಯು ನಮ್ಮ ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳಿಗೂ ಉಪಯುಕ್ತವಾಗುವಂತೆ ಸಂಕ್ಷಿಪ್ತವಾಗಿ ಸಿದ್ಧಗೊಳಿಸಿದ್ದಾರೆ. ಸ್ವಾತಂತ್ರ್ಯ ನಂತರ ಯೋಜನಾ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಇಂತಹ ಒಂದು ಕೃತಿ ಮೊಟ್ಟಮೊದಲನೆಯದಾಗಿ ಕನ್ನಡದಲ್ಲಿ ಬಂದಿದೆ. ಇದು ನಿಜಕ್ಕೂ ಕರ್ನಾಟಕದ ಪ್ರತಿಯೊಬ್ಬ ಪ್ರಜೆಯು ಮೆಚ್ಚುವಂತ ಬೃಹತ್ ಕೃತಿಯಾಗಿದೆ. ನಿರೂಪಣೆಗೆ ಬಳಸಿರುವ ಭಾಷೆಯೂ ಸರಳವಾಗಿದೆ. ಈ ಕೃತಿ ಬಿಡುಗಡೆಯಾದ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಭಂಡಾರದಲ್ಲಿ 'ಕರ್ನಾಟಕ ಪ್ರಗತಿ ಪಥ' ಅಭಿವೃದ್ಧಿ ಸಾಹಿತ್ಯದ ಹಿರಿಯ ಕೃತಿಯಾಗಿ ಹೊರಹೊಮ್ಮಿತು.

"ಕರ್ನಾಟಕ ಪ್ರಗತಿ ಪಥ" ಒಂದು ಅಧ್ಯಯನ. ಹಾಗೆಯೇ ಅವಲೋಕನ. ಇದು ಗ್ರಂಥಸ್ಥವಾಗಲು ರಾಜ್ಯ ಕನ್ನಡ ಅಭಿವೃದ್ಧಿ ಸಮಿತಿ ಕಾರಣ. ೧೯೭೩–೭೪ರ ಸಾಲಿಗೆ ಕನ್ನಡ ಅಭಿವೃದ್ಧಿಗಾಗಿ ರಾಜ್ಯ ಸರಕಾರ ಹಾಕಿಕೊಂಡ ಕೆಲವಾರು ಕಾರ್ಯಕ್ರಮಗಳಲ್ಲಿ ಈ ಗ್ರಂಥ ಪ್ರಕಟಣೆಯು ಒಂದು.

ರಾಜ್ಯಕ್ಕೆ 'ಕರ್ನಾಟಕ' ಎಂದು ನಾಮಕರಣವಾದ ಶುಭ ಸಂದರ್ಭ ಕಳೆದ ೨೫ ವರ್ಷಗಳ ಕಾಲ ಈ ನಾಡಿನಲ್ಲಿ ನಡೆದ ಅಭಿವೃದ್ಧಿಯೇನು? ಎಂಬ ಬಗ್ಗೆ ಒಂದು ಸ್ಥೂಲ ಚಿತ್ರಣವನ್ನು ಕೊಡುವಂತಹ ಕೃತಿ ಇದಾಗಿದೆ. ಅಂತೆಯೇ ಸ್ವಾತಂತ್ರ್ಯ ನಂತರ ಆರಂಭವಾದ ಪಂಚವಾರ್ಷಿಕ ಯೋಜನೆಗಳಲ್ಲಿ ರಾಜ್ಯದ ಕೃಷಿ, ಕೈಗಾರಿಕೆ, ನೀರಾವರಿ, ವಿದ್ಯುಚ್ಛಕ್ತಿ, ಗಣಿ ಉದ್ಯಮ, ಸಾರಿಗೆ ಸಂಪರ್ಕ, ಸಾಮಾಜಿಕ ಸೇವೆಗಳು, ಉದ್ಯೋಗ, ಲಲಿತಕಲೆಗಳು ಮೊದಲಾದ ನಾನಾ ಕ್ಷೇತ್ರಗಳಲ್ಲಿ ನಡೆದಿರುವ ಅಭಿವೃದ್ಧಿ ವಿನಿಯೋಗವಾಗಿರುವ ಬಂಡವಾಳ, ಉಂಟಾಗಿರುವ ಪರಿಣಾಮ ಇವುಗಳ ಒಂದು ಸಂಕ್ಷಿಪ್ತ ಪರಿಚಯ ಮಾಡಿಕೊಡುವ ಪ್ರಯತ್ನ ಈ ಗ್ರಂಥದಲ್ಲಿ ನಡೆದಿದೆ. ಗ್ರಂಥದ ಪೂರ್ಣ ಅವಲೋಕನದಿಂದ ಕರ್ನಾಟಕದ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಆಶಾದಾಯಕ ಮುನ್ನಡೆಯಾಗಿರುವುದು ಸ್ಪಷ್ಟವಾಗುತ್ತದೆ.

ಕರ್ನಾಟಕ ಪ್ರಗತಿಪಂಥ ಅಂಕಿ-ಅಂಶಗಳನ್ನು ಆಧರಿಸಿರುವ ಗ್ರಂಥ, ಕರ್ನಾಟಕ ಏಕೀಕರಣಕ್ಕೆ ಮುನ್ನ ರಾಜ್ಯ ನಾನಾ ಭಾಗಗಳಿಗೆ ಸಂಬಂಧಿಸಿದ ಅಂಕಿ-ಅಂಶಗಳನ್ನು ಸಂಗ್ರಹಿಸಿ ರಚಿಸಲಾಗಿದೆ. ೧೯೭೦ರಲ್ಲಿ ರಾಜ್ಯದ ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯವರು ಇಂಗ್ಲಿಷ್‌ನಲ್ಲಿ ಪ್ರಕಟಿಸಿರುವ "ಎಕನಾಮಿಕ್ ಡೆವಲಪ್‌ಮೆಂಟ್ ಆಫ್ ಮೈಸೂರು ೧೯೫೬-೬೯" ಎಂಬ ಅಧ್ಯಯನ ಕೃತಿ ಪ್ರಸ್ತುತ ಗ್ರಂಥಕ್ಕೆ ಪೂರ್ಣ ಆಧಾರವಾಗಿದೆ ಎಂದು ಸ್ವತಃ ಸಿ.ಕೆ.ಪಿ. ಅವರೇ ಹೇಳುತ್ತಾರೆ. ಬಹುತೇಕ ಅಭಿವೃದ್ಧಿ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಸಾಧ್ಯವಾದಷ್ಟು ಅಧಿಕೃತ ಅಂಕಿ-ಅಂಶಗಳೊಂದಿಗೆ ಪ್ರಗತಿಯ ವಿಶ್ಲೇಷಣೆ ನಡೆಸಲಾಗಿದೆ. ವಿಶ್ಲೇಷಣೆ ಪರಿಪೂರ್ಣವಲ್ಲದಿದ್ದರೂ ಅಗತ್ಯ ಮಾಹಿತಿ ಒದಗಿಸುವಲ್ಲಿ ಸಫಲವಾಗಿದೆ.

ಕರ್ನಾಟಕದಲ್ಲಿ ನಡೆದಿರುವ ಅಭಿವೃದ್ಧಿ ಯೋಜನೆಗಳ ಪರಿಚಯ ಮಾಡಿಕೊಡುವುದಷ್ಟೇ ಮೂಲ ಆಶಯವಾಗಿದ್ದರೂ, ಕರ್ನಾಟಕದ ಚಾರಿತ್ರಿಕ ಹಿನ್ನೆಲೆಯಿಂದ ಆರಂಭಿಸಿ ಇಲ್ಲಿನ ನೈಸರ್ಗಿಕ ಸಂಪತ್ತು, ಜನಸಂಖ್ಯೆ ಹಿನ್ನೆಲೆ, ಆರ್ಥಿಕ ವ್ಯವಸ್ಥೆಯ ವಿಸ್ತರಣೆ, ಯೋಜನೆಗಳ ಚೌಕಟ್ಟು, ವಿವಿಧ ಅಭಿವೃದ್ಧಿ ಕ್ಷೇತ್ರಗಳ ಸಾಧನೆ, ರಾಜ್ಯದ ಹಣಕಾಸು ಸ್ಥಿತಿ ಹೀಗೆ ವಿಸ್ತೃತವಾದ ಅಧ್ಯಯನ ನಡೆಸಲಾಗಿದೆ. ಜೊತೆಗೆ ಇದುವರೆಗಿನ ಬಂಡವಾಳ ಮತ್ತು ಶ್ರಮದ ವಿನಿಯೋಗದಿಂದ ನಿರೀಕ್ಷಿಸಿರುವ ರಾಜ್ಯದ ಭವಿಷ್ಯದ ಸ್ಥೂಲ ದರ್ಶನವನ್ನೂ ಕೊಡಲಾಗಿದೆ. ಸಾಕಷ್ಟು ಸಂಖ್ಯೆಯಲ್ಲಿರುವ ಅನುಬಂಧದ ಪುಟಗಳು ಹೆಚ್ಚಿನ ಅಂಕಿ-ಅಂಶಗಳನ್ನು ತಿಳಿಸುತ್ತವೆ.

'ಕರ್ನಾಟಕ ಪ್ರಗತಿಪಥ' ಅಭಿವೃದ್ಧಿ ಸಾಹಿತ್ಯ ಇದರ ನಿರೂಪಣೆ ನಿಜಕ್ಕೂ ಕ್ಲಿಷ್ಟ. ಅಂಕಿ-ಅಂಶಗಳ ಲೆಕ್ಕಾಚಾರದೊಂದಿಗೆ ಸಾಹಿತ್ಯವನ್ನು ಬೆರೇಸಿ, ವಿಷಯವನ್ನು ನಿರೂಪಿಸುವ ಕಾರ್ಯ ಇದು "ಈ ಕೃತಿ ಕೇವಲ ಸಾಹಿತ್ಯ ಕೃತಿಯಲ್ಲ. ರಾಜ್ಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕುರಿತ ಅಧಿಕೃತ ಆಧಾರ ಕೃತಿ. ಆ ದೃಷ್ಟಿಯಿಂದಲೇ ಓದುಗರು ಇದನ್ನು ವಿಶೇಷ ಮನೋಭಾವದಿಂದ ಓದುವಂತೆ ಕೃತಿ ಶಾಲಾ-ಕಾಲೇಜುಗಳಲ್ಲಿ ಉಪಾಧ್ಯಾಯರ ಬಳಕೆಗೆ ಹೆಚ್ಚು ನೆರವಾಗುವ ಕೃತಿ ಆಗಿದೆ.[೩೫]

ಒಟ್ಟಾರೆಯಾಗಿ ಸಮೃದ್ಧ ಕರ್ನಾಟಕ ನಿರ್ಮಾಣದ ಭವಿಷ್ಯದ ಯೋಜನೆಗೆ ಬೇಕಾದ ಹಿನ್ನೆಲೆ ಒದಗಿಸುವ ಕಾರ್ಯವನ್ನು ಈ ಕೃತಿ ಮಾಡಿದೆ.

ಸಿ.ಕೆ. ಪರಶುರಾಮಯ್ಯನವರು ಅಭಿವೃದ್ಧಿಗೆ ಸಂಬಂಧಿಸಿದಂತೆ ಇನ್ನೂ ಅನೇಕ ಕೃತಿಗಳನ್ನು ಬರೆದಿದ್ದಾರೆ. ಆಧುನಿಕ ಹೈನುಗಾರಿಕೆ ನಿರ್ವಹಣೆ ಮತ್ತು ಭಾರತದಲ್ಲಿ ಸಮುದಾಯ ಅಭಿವೃದ್ಧಿ ಯೋಜನೆಯ ವಿಕಾಸ ಹಾಗೂ 'ನೆಹರು ಮತ್ತು ಸಮುದಾಯ ಅಭಿವೃದ್ಧಿ ಯೋಜನೆ' ಇಂತಹ

ಕೃತಿಗಳನ್ನು ಗೊ.ರು. ಚೆನ್ನಬಸಪ್ಪರೊಡನೆ ಸೇರಿ ರಚಿಸಿದ್ದಾರೆ. ಅಷ್ಟೇ ಅಲ್ಲದೇ 'ಕುಡಿತದ ಗೀಳು ಬಾಳಿನ ಗೋಳು' ಎಂಬ ಕೃತಿಯನ್ನು ರಚಿಸಿದ್ದಾರೆ. ಇದನ್ನು ಕರ್ನಾಟಕ ಮದ್ಯಪಾನ ಸಂಯಮ ಮಂಡಳಿ ಪ್ರಕಟಿಸಿತು.

ಒಟ್ಟಾರೆಯಾಗಿ ಸಿ.ಕೆ. ಪರಶುರಾಮಯ್ಯನವರು ಸಾಹಿತ್ಯದ ಎಲ್ಲಾ ರಂಗದಲ್ಲೂ ಪ್ರವೇಶಮಾಡಿ ಕನ್ನಡ ಸಾಹಿತ್ಯವನ್ನು ಉದ್ಧಾರ ಮಾಡುವುದರ ಜೊತೆಗೆ ಕನ್ನಡ ನಾಡು-ನುಡಿ-ಜನ ಮುಂತಾದವುಗಳ ಅಭಿವೃದ್ಧಿಗೆ ಸಹಾಯವಾಗಿದ್ದರು. ಆದುದ್ದರಿಂದಲೇ ಇವರ ಸೇವೆ ಕನ್ನಡ ಜನಮನಗಳಲ್ಲಿ ಅವಿಸ್ಮರಣೀಯ.

೨. ತಾಯಂದಿರಿಗೆ ತಿಳಿದಿರಲಿ :

ತಾಯಂದಿರಿಗೆ ತಿಳಿದಿರಲಿ ಹೆಸರೇ ಹೇಳುವಂತೆ ತಾಯಂದಿರಿಗೆ ಅಗತ್ಯವಾದ ತಿಳುವಳಿಕೆ ಈ ಪುಸ್ತಕದಲ್ಲಿದೆ. "ತಾಯಿ ನಕ್ಕರೆ ಲೋಕ ನಗುತ್ತದೆ" ಎಂಬ ಮಾತೊಂದಿದೆ. ಕುಟುಂಬದ ನೆಮ್ಮದಿಯೆಲ್ಲಾ ತಾಯಿಯನ್ನೇ ಅವಲಂಬಿಸಿದೆ. ಈ ದೃಷ್ಟಿಯಿಂದ ಆ ತಾಯಿಯ ಕ್ಷೇಮ ಅತ್ಯಂತ ಅಮೂಲ್ಯವಾದುದು. ಮತ್ತು ಆದ್ಯ ಗಮನಕೊಡಬೇಕಾದುದ್ದು.

ಈ ಗ್ರಂಥದಲ್ಲಿ ತಾಯ್ತನದ ಸಿದ್ಧತೆಯಿಂದ ಹಿಡಿದು ಮಕ್ಕಳ ಪೋಷಣೆಯವರೆಗೆ ಅನೇಕ ವಿಷಯಗಳನ್ನು ಅತ್ಯಂತ ಮನ ಮುಟ್ಟುವ ಶೈಲಿಯಲ್ಲಿ ತಿಳಿಸಲಾಗಿದೆ. ಇದು ಮಹಿಳೆಯ ಆರೋಗ್ಯದ ಕೈಪಿಡಿಯಾಗಿ ಕೆಲಸ ಮಾಡುತ್ತದೆ.

ಲೇಖಕರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಸಮುದಾಯ, ಶಿಕ್ಷಣ ಕ್ಷೇತ್ರದ ಅನುಭವ ಪಡೆದಿರುವವರಾದ ಕಾರಣ ಇಲ್ಲಿನ ಸಂದೇಶ ಪರಿಣಾಮಕಾರಿಯಾಗಿ ಮೂಡಿಬಂದಿದೆ. ಇದು ಫಲಾನುಭವಿಗಳಿಗೆ ಮಾತ್ರವಲ್ಲ, ಕ್ಷೇತ್ರ ಕಾರ್ಯಕರ್ತರಿಗೂ ಕೈಪಿಡಿಯಂತಿದೆ. ತಾಯಿ-ಮಕ್ಕಳ ಆರೋಗ್ಯಕ್ಕೆ ಸಂಬಂಧಿಸಿದಂತೆ ತುಂಬಾ ಉಪಯುಕ್ತವಾದ ಮಾಹಿತಿ ಇಲ್ಲಿ ದೊರೆಯುತ್ತದೆ.

ತೊಂದರೆ ಬರುವ ಮುನ್ನ ಜಾಗೃತವಹಿಸುವುದು ಜಾಣ್ಮೆಯ ಲಕ್ಷಣ. ಅಂತೆಯೇ ತಾಯಿ-ಮಕ್ಕಳ ಆರೋಗ್ಯಕ್ಕೆ ಸಂಬಂಧಿಸಿದ ಜಾಗೃತಿಗೆ ಈ ಕೃತಿ ಪಂಜು ಹಿಡಿದು ಮಾರ್ಗದರ್ಶನ ಮಾಡುತ್ತದೆ.

ಈ ಪುಸ್ತಕದ ಪ್ರತಿಯೊಂದು ಮಾಹಿತಿಯನ್ನು ಪ್ರತಿಯೊಬ್ಬ ಮಹಿಳೆಯೂ ಅಗತ್ಯವಾಗಿ ಓದಬೇಕಾದ ವಿಷಯಗಳನ್ನು ಒಳಗೊಂಡಿದೆ. ಒಬ್ಬ ಮಹಿಳೆ ಗರ್ಭಧರಿಸಿದ ಹಂತದಿಂದ ಒಂಭತ್ತು ತಿಂಗಳು ತುಂಬಿ ಹೆರಿಗೆಯಾಗುವವರೆಗೆ ಗಮನದಲ್ಲಿಟ್ಟುಕೊಳ್ಳಬೇಕಾದ ಅಂಶಗಳು ತೆಗೆದುಕೊಳ್ಳಬೇಕಾದ ಆಹಾರ ಹಾಗೂ ವೈದ್ಯಕೀಯ ಮುನ್ನೆಚ್ಚರಿಕೆ ಕ್ರಮಗಳನ್ನು ವಿವರಿಸುತ್ತದೆ.

ಹಾಗೆಯೇ ಹೆರಿಗೆಯಾದ ದಿನದಿಂದ ಒಂದು ವರ್ಷ ತುಂಬುವವರೆಗೆ ಮಗುವನ್ನು ಆರೈಕೆ ಮಾಡಬೇಕು, ಅದರ ಆಹಾರ, ಪಾನೀಯ, ಸ್ವಚ್ಛತೆ ಹಾಗೂ ರೋಗನಿರೋಧಕ ಕ್ರಮಗಳ ಬಗ್ಗೆ ತಾಯಂದಿರು ಕಡ್ಡಾಯವಾಗಿ ಗಮನಿಸಬೇಕಾದ ಸಂಗತಿಗಳೇನು ಎಂಬ ವಿಷಯದ ಬಗ್ಗೆ ವಿಪುಲವಾದ ವಿಷಯಗಳನ್ನು ವಿವರವಾಗಿ ಹೇಳುತ್ತಾರೆ.

"ಅದರಲ್ಲೂ ಹಸುಳೆ ಮಕ್ಕಳನ್ನು ಕಾಡುವ ಪೋಲಿಯೋ, ಗಂಟಲು ಮಾರಿ, ಕ್ವಾಡಿಗೆಮ್ಮು (ನಾಯಿ ಕೆಮ್ಮು), ಧನುರ್ವಾಯು (ಶೆಟ್ಟಬ್ಯಾನಿ), ದಡಾರ (ಗೊಬ್ಬರ) ಹಾಗೂ ಟಿ.ಬಿ. (ಬಾಲಕ್ಷಯ) ಎಂಬ ಆರು ಮಾರಕ ರೋಗಗಳು ಹಾಗೂ 'ಅತಿಬೇಧಿ'ಯ ಲಕ್ಷಣ ಮತ್ತು ಮುನ್ನೆಚ್ಚರಿಕೆ ಕ್ರಮಗಳನ್ನು ತುಂಬಾ ಸರಳವಾಗಿ ವಿವರಿಸಲಾಗಿದೆ. ಪುಸ್ತಕದಲ್ಲಿ ಬಂದಿರುವ ಛಾಯಾಚಿತ್ರಗಳು ವಿಷಯವನ್ನು ಅರ್ಥಮಾಡಿಕೊಳ್ಳಲು ಒಳ್ಳೆಯ ಹಿನ್ನೆಲೆಯನ್ನು ಒದಗಿಸಿವೆ"[೩೬] ಒಟ್ಟಿನಲ್ಲಿ ತಾಯಂದಿರಿಗೆ ತಿಳಿದಿರಲಿ ಎನ್ನುವ ಪುಸ್ತಕ ಸರಳ ಮತ್ತು ನೇರವಾಗಿ ವಿಷಯವನ್ನು ಮನದಟ್ಟು ಮಾಡುತ್ತದೆ.

ಈ ಪುಸ್ತಕವನ್ನು ಅಕ್ಷರಬಲ್ಲ ಪ್ರತಿಯೊಬ್ಬ ತಾಯಿಂದಿರು ಓದಿ ಅಕ್ಷರಬಾರದ ತಮ್ಮ ಸೋದರಿಯರಿಗೆ ತಿಳಿಹೇಳಬೇಕು. ಏಕೆಂದರೆ ಮಕ್ಕಳ ಆರೈಕೆ, ಕುಟುಂಬ ಯೋಜನೆ ಇವು ಒಬ್ಬಿಬ್ಬರ ಕೆಲಸವಲ್ಲ. ಪ್ರತಿಯೊಬ್ಬರ ಕರ್ತವ್ಯ. ಈ ಕೆಲಸ ಅಧಿಕ ಪ್ರಮಾಣದಲ್ಲಿ ಆದಾಗ ಶಿಶು ಮರಣ ಸಂಖ್ಯೆಯನ್ನು ತಗ್ಗಿಸಿ "ಒಂದೇ ಒಂದು ಮಗು ಮನೆತುಂಬ ನಗು" ಎನ್ನುವ ಅಮೂಲ್ಯ ಸಂದೇಶವನ್ನು ಮನದಟ್ಟು ಮಾಡಲು ಸಾಧ್ಯವಾಗಿದೆ.

"ಪ್ರಸ್ತುತ ತಾಯಂದಿರಿಗೆ ತಿಳಿದಿರಲಿ" ಎಂಬ ಪುಸ್ತಕ ಕೇವಲ ಸಿ.ಕೆ. ಪರಶುರಾಮಯ್ಯನವರ ಶ್ರಮದ ಫಲವಲ್ಲ. ಅದರ ಜೊತೆಗೆ ಇನ್ನೊಂದು ಕೈ ಜೋಡಿಸಲಾಗಿದೆ. ಅವರೇ ಎಂ.ಎಂ. ಪಾಟೀಲ ಇವರೀರ್ವರ ಪರಿಶ್ರಮದ ಫಲವಾಗಿ ಈ ಪುಸ್ತಕ ಬೆಳಕಿಗೆ ಬಂದಿದೆ. ಶ್ರೀ ಎಂ.ಎಂ. ಪಾಟೀಲ ಅವರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಮೂರುವರೆ ದಶಕಗಳ ಕಾಲ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ವಿಚಾರಗಳನ್ನು ಜನತೆಗೆ ಮನದಟ್ಟುಮಾಡಿ ನಿವೃತ್ತರಾದವರು. ಸಿ.ಕೆ. ಪರಶುರಾಮಯ್ಯನವರು ಕಳೆದ ಕಾಲು ಶತಮಾನಗಳಿಂದಲೂ ವಾರ್ತಾ ಮತ್ತು ಪ್ರಚಾರ ಇಲಾಖೆಯ ವಿವಿಧ ಮಾಧ್ಯಮ ವಿಭಾಗಗಳಲ್ಲಿ ಕೆಲಸ ಮಾಡುತ್ತಿರುವವರು, ಜೊತೆಗೆ ಈ ಇಬ್ಬರೂ ಮೂರನೆಯ ಭಾರತ ಜನಸಂಖ್ಯೆ ಯೋಜನೆಯ ಮಾಹಿತಿ ಶಿಕ್ಷಣ ಮತ್ತು ಸಂಪರ್ಕ ವಿಭಾಗದಲ್ಲಿ ವಿವಿಧ ಸಮೂಹ ಮಾಧ್ಯಮಗಳ ಮೂಲಕ ಜನಸಂಖ್ಯಾ ಸಮಸ್ಯೆ, ತಾಯಿ–ಮಕ್ಕಳ ಆರೋಗ್ಯ, ಕುಟುಂಬ ಕಲ್ಯಾಣ ಹಾಗೂ ಸಾಂಕ್ರಾಮಿಕ ರೋಗಗಳ ಬಗ್ಗೆ

ಗ್ರಾಮೀಣ ಪ್ರದೇಶಗಳಲ್ಲಿ ಪ್ರಚಾರ ಮತ್ತು ತಿಳುವಳಿಕೆ ನೀಡುವ ಕಾರ್ಯಗಳನ್ನು ಮಾಡಿದರು. ಈ ಇಬ್ಬರು ತಮ್ಮ ಅನುಭವ ಮತ್ತು ಅಧ್ಯಯನಗಳ ಮೂಲಕ ಈ ಪುಸ್ತಕ ಹೊರತಂದಿದ್ದಾರೆ. ಈ ಪುಸ್ತಕ ಅನೇಕ ಆರೋಗ್ಯ ಇಲಾಖೆಯ ಕ್ಷೇತ್ರ ಕಾರ್ಯಕರ್ತರಿಗೂ ಹೆಚ್ಚು ಅನುಕೂಲವಾಗುವುದರಲ್ಲಿ ಎರಡು ಮಾತಿಲ್ಲ.

ಒಟ್ಟಿನಲ್ಲಿ "ತಾಯಂದಿರು ತಮ್ಮ ಮತ್ತು ತಮ್ಮ ಕರುಳ ಕುಡಿಯ ಆರೋಗ್ಯದ ಬಗ್ಗೆ ತಿಳಿದುಕೊಂಡಿರಬೇಕಾದ ಕೆಲವು ಪ್ರಾಥಮಿಕ ಸಂಗತಿಗಳನ್ನು ಪ್ರಮುಖವಾಗಿ ನಮ್ಮ ಗ್ರಾಮೀಣ ಮಹಿಳೆಯರಿಗೆ ಮನದಟ್ಟು ಮಾಡುವುದೇ ಈ ಬರವಣಿಗೆಯ ಉದ್ದೇಶ.

೩.೫. ಲೇಖನಗಳು :

ಸಿ.ಕೆ. ಪರಶುರಾಮಯ್ಯನವರು ವಿವಿಧ ವಿಷಯಗಳ ಬಗ್ಗೆ ಎಂಟು ಲೇಖನಗಳನ್ನು ಬರೆದಿದ್ದಾರೆ. ಈ ಲೇಖನಗಳಲ್ಲಿ ಸಿ.ಕೆ.ಪಿ. ಅವರು ಒಡೆಯರ ವೈಯಕ್ತಿಕ ವಿಚಾರಗಳು, ಅವರ ಕೌಟುಂಬಿಕ ವಿಚಾರಗಳ ಬಗ್ಗೆ ಕೈಗನ್ನಡಿ ಹಿಡಿದಿದ್ದಾರೆ. ಹಾಗೆಯೇ ಒಡೆಯರು ಮತ್ತು ಅವರ ವಂಶಸ್ಥರು ಆಚರಿಸಿಕೊಂಡು ಬಂದಿರುವಂತಹ ಆಚಾರಗಳು, ರೂಢಿಗಳು, ಸಂಪ್ರದಾಯಗಳು, ನೈತಿಕ ನಿಯಮಗಳಂತಹ ವಿಷಯದ ಬಗ್ಗೆಯೂ ಅಲ್ಲಲ್ಲಿ ಪ್ರಸ್ತಾಪಿಸುವುದರ ಮೂಲಕ ಅವರ ವಂಶಜರ ಧಾರ್ಮಿಕ ಅಂಶಗಳನ್ನು ಹೇಳುತ್ತಾರೆ. ಇವುಗಳ ಜೊತೆಗೆ ಕುರುಬ ಸಮುದಾಯದ ಬಗ್ಗೆ ಮಾಹಿತಿ ನೀಡುತ್ತಾರೆ.

ಸಿ.ಕೆ. ಪರಶುರಾಮಯ್ಯನವರ ಎಲ್ಲಾ ಲೇಖನಗಳನ್ನು ಓದಿದಾಗ ನಮಗೆ ತಿಳಿಯುವ ಅಂಶವೆಂದರೆ ಚನ್ನಯ್ಯ ಒಡೆಯರ್ ಅವರ ಸರಳ, ಸಜ್ಜನಿಕೆಯ ಗುಣಗಳು, ದೂರದೃಷ್ಟಿಯ ವಿಚಾರವಂತರು, ವಿದ್ಯಾವಿನಯ ಸಂಪನ್ನರು, ಸಾಮಾಜಿಕ ಬದ್ಧತೆಯ, ಮಾನವಾಂತಃಕರಣಪೂರಿತ, ಸಚ್ಚಾರಿತ್ರ್ಯ ಹಾಗೂ ಸದ್ಗುಣಭರಿತ, ಸರ್ವಜನಮಾನ್ಯರಾದ ಗೌರವಾನ್ವಿತ ವ್ಯಕ್ತಿತ್ವ, ಪ್ರಾಮಾಣಿಕ, ರಾಜನೀತಿ ಜ್ಞಾನಿ, ಅಪರೂಪದ ಮಾನವತಾವಾದಿ, ರಾಜಕೀಯ ರಂಗದ ರಾಜಹಂಸ, ತಾತ್ವಿಕ ರಾಜಯೋಗಿ, ಸಂಸಾರಿಕ ಯೋಗಿವರೇಣ್ಯರು, ಪರಮ ಪೂಜ್ಯರು ಎಂಬ ಅಂಶ ನಮಗೆ ತಿಳಿದುಬರುತ್ತದೆ.

ಅಷ್ಟೇ ಅಲ್ಲದೆ ದೀನದಲಿತರ ಆಶಾಕಿರಣ, ಸಮಾಜದ ಉನ್ನತಿಗಾಗಿ ಶ್ರಮಿಸಿದ ಧೀಮಂತ ವ್ಯಕ್ತಿ, ನಿಸ್ಪೃಹ, ಸಚ್ಚರಿತರು, ಸಜ್ಜನರು, ಸದ್ಗುಣಿಗಳು ಆದ ಕುಲಗುರು ಶ್ರೀ ಚನ್ನಯ್ಯ ಒಡೆಯರ್ ಅವರನ್ನು ಹತ್ತಿರದಿಂದ ಬಲ್ಲ ಅವರ ನಾನಾ ಮುಖಗಳನ್ನು ಅರಿತ, ಅವರ ಆಶೀರ್ವಾದದಿಂದ ಸಂತೃಪ್ತಿಯಿಂದ, ನೆಮ್ಮದಿಯಿಂದ ಬದುಕುತ್ತಿರುವ ಸಿ.ಕೆ. ಪರಶುರಾಮಯ್ಯನವರ ಈ ಲೇಖನಗಳು ತುಂಬಾ ಆಕರ್ಷಕ ಮತ್ತು ಸತ್ವಯುತವಾದ ಲೇಖನಗಳಾಗಿವೆ.

"ಒಡೆಯರ್‌ರವರ ಬಂಧೂರ ಬಂಧು ಪ್ರೇಮ" ಎಂಬ ಲೇಖನದಲ್ಲಿ ಸಿ.ಕೆ.ಪಿ. ಅವರು ಒಡೆಯರ್ ಮೊದಲ ಪತ್ನಿ ಶ್ರೀಮತಿ ಪುಟ್ಟಮ್ಮನವರ ಸ್ವಭಾವ ಮತ್ತು ಒಡೆಯರ ಏಕೈಕ ಪುತ್ರ ಉದಯಶಂಕರ ಅವರ ಬಗ್ಗೆ ಮಾಹಿತಿ ನೀಡುತ್ತಾರೆ. ಪುಟ್ಟಮ್ಮ ಅವರ ತವರು ಮನೆಯಲ್ಲಿ ಬೆಳೆದ ಪರಿ ಹಾಗೂ ಪುಟ್ಟಮ್ಮರ ತವರು ಮನೆಯ ಸದಸ್ಯರ ಬಂಧು-ಬಾಂಧವರ ಪ್ರೀತಿ-ಪ್ರೇಮ, ವಿಶ್ವಾಸ, ಸಹಾಯ ಮನೋಭಾವ, ಅಂತಃಕರಣ ಬಗ್ಗೆ ಹೇಳಿದ್ದಾರೆ.

"ಶ್ರೀಮತಿ ಪುಟ್ಟಮ್ಮ ಒಡೆಯರ ಶ್ರೀ ಚನ್ನಯ್ಯ ಪಡೆಯರ ಕೈಹಿಡಿದ ಎರಡು ವರ್ಷದೊಳಗೆ ಒಂದು ಗಂಡು ಮಗುವಿಗೆ ಜನ್ಮ ಕೊಟ್ಟು ಕೈಲಾಸವಾಸಿಗಳಾದರು. ಈ ಮಗುವಿನ ಭವಿಷ್ಯದ ದೃಷ್ಟಿಯಿಂದ ಒಡೆಯರು ಆ ಕಂದನನ್ನು ಪುಟ್ಟಮ್ಮರ ತವರು ಮನೆಯಲ್ಲಿ ಬಿಟ್ಟಿದ್ದರು. ತಮ್ಮ ಕಂದನನ್ನು ಹಾಗೆ ಉಚ್ಛ್ರಾಯ ಸ್ಥಿತಿಗೆ ತರುವ ಅವಕಾಶವನ್ನು ತಮ್ಮ ಪತ್ನಿಯ ತವರಿನ ಭಾವ-ಮೈದುನರಿಗೆ ಬಿಟ್ಟುಕೊಟ್ಟು ಶ್ರೀ ಒಡೆಯರ ದೂರದೃಷ್ಟಿಯ ಆಲೋಚನೆ ಮತ್ತು ಔದಾರ್ಯ ಬಹು ದೊಡ್ಡದು"[೩೭]

ಮುಂದೆ ಆ ಮಗು ಉದಯಶಂಕರ ಹೆಸರಿನಿಂದ ಬೆಳೆದು ಪುಟ್ಟಮ್ಮನ ಅಕ್ಕ ಲಕ್ಕಮ್ಮನ ಮತ್ತು ಅವರ ಕುಟುಂಬದ ಮಧ್ಯೆ ಬೆಳೆದು ಒಬ್ಬ ಆದರ್ಶ ವ್ಯಕ್ತಿಯಾಗಿ ಬೆಳೆದು ವೈದ್ಯಕೀಯ ಪದವಿ ಪಡೆದು ಸುನಂದಮ್ಮನನ್ನು ಬಾಳ ಸಂಗಾತಿಯನ್ನಾಗಿ ಸ್ವೀಕರಿಸಿ ಬೆಂಗಳೂರಿಗೆ ಬಂದು ನೆಲೆಸಿ ಡಾ. ಉದಯಶಂಕರ ಆವರು ಹೆಸರಾಂತ ಶಸ್ತ್ರ ಚಿಕಿತ್ಸಕಾರರಾಗಿ ಬಾಳುತ್ತಿದ್ದಾರೆ.

ಸಿ.ಕೆ.ಪಿ. ಅವರ ತಾಯಿ ಪುಟ್ಟಮ್ಮನವರ ಹಿರಿಯ ಅಕ್ಕ ಆಗಿದ್ದರಿಂದ ಸಿ.ಕೆ.ಪಿ. ಅವರು ಆ ಕುಟುಂಬದ ನಡುವೆ ಬೆಳೆದಿದ್ದರಿಂದ ಅಂಥ ಮನೆ, ವಾತಾವರಣ, ಹರ್ಷ, ನೆಮ್ಮದಿಯನ್ನು ನಮ್ಮ ಜೀವಮಾನದಲ್ಲಿ ಮತ್ತೆ ಕಾಣಲಾರೆವು. ಆ ಕುಟುಂಬದ ಎಲ್ಲಾ ಜನರು ಆದರ್ಶ ವ್ಯಕ್ತಿಗಳಾಗಿದ್ದರು.

'ಮರೆಯಲಾಗದ ದಿವ್ಯ ಸ್ಮರಣೆ' ಎಂಬ ಲೇಖನದಲ್ಲಿ ಶ್ರೀಗುರು ಚನ್ನಯ್ಯ ಒಡೆಯರ ಮತ್ತು ಪುಟ್ಟಮ್ಮನವರ ಮದುವೆಯ ಸಂದರ್ಭ, ಆ ಮದುವೆಯಲ್ಲಿ ನಡೆದ ಆಚಾರಗಳ ಬಗ್ಗೆ ಮತ್ತು ಮದುವೆ ನಂತರ ನಡೆದ ಅಡ್ಡಪಲ್ಲಕ್ಕಿಯ ಉತ್ಸವದ ಬಗ್ಗೆ ಹೇಳಿದ್ದಾರೆ. ಇವರ ಮದುವೆ ಸಂದರ್ಭದಲ್ಲಿ ಲೇಖಕರು ಚಿಕ್ಕವಯಸ್ಸಿನವರಾಗಿದ್ದರು. ಆಗ ನೋಡಿದ ಮದುವೆಯ ಸಂದರ್ಭವನ್ನು ಇಲ್ಲಿ ವಿವರಿಸಿದ್ದಾರೆ.

"ಎರಡು ಪ್ರಸಿದ್ಧ ಕುಟುಂಬಗಳು ಗೌಡರ ಕುಟುಂಬ. (ಪುಟ್ಟಮ್ಮ) ಒಡೆಯರ ಕುಟುಂಬ (ಚನ್ನಯ್ಯ ಒಡೆಯರ) ಇವರ ಮದುವೆ ತುಂಬಾ ವಿಜೃಂಭಣೆಯಿಂದ ನಡೆಯಿತು. ನಂತರ

ಮೆರವಣಿಗೆ ಊರಿನ ಬೀದಿ ಬೀದಿಗಳ ಮೂಲಕ ಪ್ರವೇಶಿಸುತ್ತದೆ. ಆ ಸಂದರ್ಭದಲ್ಲಿ ಮಠದ ಆವರಣದಲ್ಲಿ ನಗಾರಿ, ಕರಡೆ, ಚಮ್ಮೇಳ, ಮಾರಿ, ಕಹಳೆ ವಾದ್ಯಗಳ" ಮೂಲಕ ಮೆರವಣಿಗೆ ಎಲ್ಲಾ ಜಾತಿಗಳ ಕೇರಿಗಳಿಗೆ ಹೋಗುತ್ತದೆ.

ಒಟ್ಟಿನಲ್ಲಿ ಚಿಕ್ಕನಾಯಕನಹಳ್ಳಿಯ ಕುರುಬ ಜನಾಂಗದ ಧಾರ್ಮಿಕ ಚಟುವಟಿಕೆಗಳ ಈ ಉತ್ಸವವು ಒಂದು ಅಪರೂಪವಾದ ಮತ್ತು ಅಪೂರ್ವವಾದ ದಾಖಲೆಯಾಗಿ ಉಳಿಯಿತು. ಇದಕ್ಕೆ ಮೂಲ ಕಾರಣ ಶ್ರೀ ರೇವಣಸಿದ್ಧೇಶ್ವರ ಮಠದ ಸಮಸ್ತರೂ ಕೊಟ್ಟ ಸಹಕಾರ ಮತ್ತು ಒಮ್ಮನಸ್ಸಿನ ಪ್ರೋತ್ಸಾಹ. ಇದು ಕೋಟಿಗೆ ಮನೆಯ ಹರಿವಾಣದ ಗೌಡರ ಮನೆತನದ ಹೆಗ್ಗಳಿಕೆಯ ಕಿರೀಟಕ್ಕೆ ಹೆಮ್ಮೆಯ ಗರಿ ಮೂಡಿಸಿದ ಸಂದರ್ಭ. ಈ ಉತ್ಸವದ ವೈಭವವನ್ನು ಕಂಡಿದ್ದ ಹಳೆಯ ತಲೆಮಾರಿನ ಹಲವರು ಈಗಲೂ ಆ ಅಪೂರ್ವ ಸನ್ನಿವೇಶವನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸುತ್ತಾರೆ. ಇಲ್ಲಿ ಲೇಖಕರ ವರ್ಣನೆ ಅಭೂತಪೂರ್ವವಾದದ್ದು. ವಧು–ವರರ ವೇಷಭೂಷಣ, ಪಲ್ಲಕ್ಕಿಗೆ ಮಾಡಿರುವ ಅಲಂಕಾರ, ಅಲ್ಲಿ ನೆರೆದಿದ್ದ ಜನ ಸಂದಣಿ, ಅಲ್ಲಿನ ಜನರ ಸಂತೋಷ ಮುಗಿಲು ಮುಟ್ಟುವಂತಿತ್ತು ಎಂದಿದ್ದಾರೆ.

"ಬಿಳಿಚೋಡಿನ ಶ್ರೀಗುರು ಚನ್ನಯ್ಯ ಒಡೆಯರ ವಂಶಾವಳಿಯ ಸಂಕ್ಷಿಪ್ತ ಪರಿಚಯ" ಶೀರ್ಷಿಕೆಯ ಹೆಸರೇ ಸೂಚಿಸುವಂತೆ ಶ್ರೀಗುರು ಚನ್ನಯ್ಯ ಒಡೆಯರ ವಂಶಾವಳಿಯ ಬಗ್ಗೆ ಲೇಖಕರು ಎಳೆಎಳೆಯಾಗಿ ಕಟ್ಟಿಕೊಡುತ್ತಾ ಹೋಗುತ್ತಾರೆ.

"ಸುಮಾರು ಎರಡು ಎರಡೂವರೆ ಶತಮಾನಗಳಷ್ಟು ಹಿಂದೆ ಹುಲ್ಲೂರಿನ ಒಡೆಯರ ವಂಶದವರ ಕುಟುಂಬವೊಂದು ಚಿತ್ರದುರ್ಗ ಜಿಲ್ಲೆಯ ಜಗಳೂರು ತಾಲೂಕಿನ ಬಿಳಿಚೋಡು ಗ್ರಾಮಕ್ಕೆ ಬಂದು ನೆಲೆಯಾದ ಬಗ್ಗೆ ನಿರ್ದಿಷ್ಟವಾದ ಆಧಾರಗಳಿವೆ. ಬಿಳಿಚೋಡು ಗ್ರಾಮದಲ್ಲಿರುವ ಶ್ರೀ ಚನ್ನಯ್ಯ ಒಡೆಯರ ಪೂರ್ವಿಕರು ಬಾಳಿ ಬದುಕಿದ ಮಠ ಮತ್ತು ಅವರ ಹೊಲಗಳ ಬದಿಗಳಲ್ಲಿ ಇರುವ ಆ ವಂಶದ ಹಿರಿಯ ಗದ್ದುಗೆಗಳು ಆಧಾರವಾಗಿವೆ."[೩೮]

ಹೀಗೆ ಎರಡೂವರೆ ಶತಮಾನಕ್ಕೂ ಹಿಂದೆ ಬಿಳಿಚೋಡು ಗ್ರಾಮಕ್ಕೆ ಬಂದ ಚನ್ನಯ್ಯ ಒಡೆಯರಿಗೆ ಉದ್ದಾನಪ್ಪ ಒಡೆಯರ್ ಮತ್ತು ಸಿದ್ದಪ್ಪ ಒಡೆಯರ್ ಎಂಬ ಇಬ್ಬರು ಗಂಡು ಮಕ್ಕಳು. ಹಿರಿಯ ಮಗ ಉದ್ದಾನಪ್ಪ ಒಡೆಯರಿಗೆ ಚನ್ನಮ್ಮ, ಸಿದ್ದಮ್ಮ ಎಂಬ ಇಬ್ಬರು ಹೆಣ್ಣು ಮಕ್ಕಳು. ಅವರ ಎರಡನೆಯ ಮಗ ಗುರುಸಿದ್ದಯ್ಯ ಒಡೆಯರಿಗೆ ಸಿದ್ದಯ್ಯ ಒಡೆಯರ್ ಮತ್ತು ನಾಗಪ್ಪ ಒಡೆಯರೆಂಬ ಇಬ್ಬರು ಗಂಡು ಮಕ್ಕಳು. ರುದ್ರಮ್ಮ, ಸಿದ್ದಮ್ಮ ಎಂಬ ಇಬ್ಬರು ಹೆಣ್ಣು ಮಕ್ಕಳು. ಸಿದ್ದಪ್ಪಸ್ವಾಮಿಯೆಂದೇ ಹೆಸರಾಗಿದ್ದು ರಾಜಕಾರಣ ಮತ್ತು ಸಾಮಾಜಿಕ ಚಟುವಟಿಕೆಗಳಲ್ಲಿ ಆಸಕ್ತರಾಗಿದ್ದರು.

ಈ ಸಿದ್ದಪ್ಪಸ್ವಾಮಿಯವರು ಹರೆಯದರಲ್ಲೇ ಕೈಲಾಸವಾಸಿಗಳಾದುದು ಒಡೆಯರ ವಂಶಕ್ಕೆ ತುಂಬಲಾರದ ನಷ್ಟ. ಅವರಿಗೆ ಕಸ್ತೂರಮ್ಮ ಎಂಬ ಒಬ್ಬಳೇ ಹೆಣ್ಣು ಮಗಳು. ಗುರುಸಿದ್ದಯ್ಯ ಒಡೆಯರ ಎರಡನೆಯ ಮಗ ನಾಗಪ್ಪ ಒಡೆಯರ ಒಟ್ಟು ಹನ್ನೆರಡು ಮಕ್ಕಳ ದೊಡ್ಡ ಕುಟುಂಬವಾಗಿತ್ತು.

ಶ್ರೀಯುತ ಚನ್ನಯ್ಯ ಒಡೆಯರ ಅವರಿಗೆ ಇಬ್ಬರು ಪತ್ನಿಯರು. ಹಿರಿಯ ಪತ್ನಿ ಪುಟ್ಟಮ್ಮ, ಕಿರಿಯ ಪತ್ನಿ ಹಾಲಮ್ಮ. ಪುಟ್ಟಮ್ಮನಿಗೆ ಉದಯಶಂಕರ ಒಡೆಯರ ಎಂಬ ಮಗ. ಇವರ ಹೆಂಡತಿ ಸುನಂದಮ್ಮ, ಮಗಳು ಸೌಮ್ಯ, ಹಾಲಮ್ಮ ಒಡೆಯರಿಗೆ ಚಂದ್ರಶೇಖರ ಒಡೆಯರ ಮತ್ತು ಶಿವಕುಮಾರ ಒಡೆಯರ ಎಂಬ ಇಬ್ಬರು ಗಂಡು ಮಕ್ಕಳು ಹಾಗೂ ಉಷಾದೇವಿ ಎಂಬ ಒಬ್ಬ ಹೆಣ್ಣು ಮಗಳು. ಹಿರಿಯ ಮಗ ಚಂದ್ರಶೇಖರ ಒಡೆಯರಿಗೆ ಚಂದ್ರಮ್ಮ ಒಡೆಯರ ಎಂಬ ಪತ್ನಿ. ಇವರಿಗೆ ವಿರುಪಾಕ್ಷ ಒಡೆಯರ ಎಂಬ ಗಂಡು ಮಗ. ಹಾಲಮ್ಮ ಒಡೆಯರ ಎರಡನೆಯ ಮಗ ಶಿವಕುಮಾರಗೆ ಪುಷ್ಪಾ ಎಂಬ ಪತ್ನಿ ಇದ್ದಾರೆ.

ಇದಿಷ್ಟು ಶತಮಾನಗಳಷ್ಟು ಹಿಂದೆ ಹುಲ್ಲೂರಿಗೆ ಬಂದು ಬಿಳಿಚೋಡಿನಲ್ಲಿ ನೆಲೆಸಿ, ಈ ಸುತ್ತಿನ ಮತ್ತು ಕರ್ನಾಟಕದಾದ್ಯಂತ ಅಪಾರ ಶಿಷ್ಯ ಬಾಂಧವರನ್ನು ಸಂಪಾದಿಸಿ ಪ್ರಖ್ಯಾತರಾದ ಶ್ರೀಯುತ ಚನ್ನಪ್ಪ ಒಡೆಯರ ಸಂಕ್ಷಿಪ್ತ ಇತಿಹಾಸವನ್ನು ಸಿ.ಕೆ.ಪಿ. ಅವರು ಹೇಳುತ್ತಾರೆ.

ಹೀಗೆ ಬೆಳೆದು ಬಂದ ಒಡೆಯರ ವಂಶ ಕುರುಬ ಜನಾಂಗದ ಶಿಷ್ಯವೃಂದ ಅಷ್ಟೇ ಏಕೆ? ಜಾತಿಮತಗಳ ಎಲ್ಲೆಯನ್ನು ದಾಟಿ ಸುತ್ತಮುತ್ತಣ ಸಾವಿರಾರು ಅಭಿಮಾನಿ ಬಳಗದ ವಿಶ್ವಾಸವನ್ನು ಗಳಿಸಿ ಪ್ರಖ್ಯಾತರಾದವರು. ಎದ್ದು ಕಾಣುವ ವಂಶವಾಗಿ ಕಂಡುಬಂದಿತು. ಮನೆಯನ್ನೇ ಮಠವಾಗಿ ರೂಪಿಸಿದ ಮಾನವೀಯ ಗುಣ ಸಂಪನ್ನರು. ಜನತೆಯ ಹೃದಯವನ್ನು ಗೆದ್ದು, ಅವರ ಹೃದಯ ಗದ್ದುಗೆಯಲ್ಲಿ ಚಿರಸ್ಥಾಯಿಯಾಗಿ ನೆಲೆಸಿದರು ಈ ಕುಟುಂಬದ ಎಲ್ಲಾ ಸದಸ್ಯರುಗಳು.

"ಒಡೆಯರ ಸಂಪ್ರದಾಯದ ಪ್ರಾಚೀನತೆ ಮತ್ತು ವೈಶಿಷ್ಟ್ಯತೆ" ಎಂಬ ಲೇಖನದಲ್ಲಿ ಇಂದಿನ ಆಧುನಿಕ, ಸಾಮಾಜಿಕ ಸನ್ನಿವೇಶದಲ್ಲೂ ತಮ್ಮ ಮೂಲ ಧಾರ್ಮಿಕ ಸಂಪ್ರದಾಯಗಳನ್ನು ಪಾಲಿಸಿಕೊಂಡು ಬರುತ್ತಿರುವ ಕರ್ನಾಟಕ ಕುರುಬ ಜನಾಂಗದ ಗುರು ಪರಂಪರೆಯ ಪ್ರಾಚೀನತೆ ಮತ್ತು ವೈಶಿಷ್ಟ್ಯತೆಗಳನ್ನು ಲೇಖಕರು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ.

ಕುರುಬ ಪರಂಪರೆಯನ್ನು ಎತ್ತಿಹಿಡಿಯುವ 'ಸಿದ್ದಮಂಕ ಚರಿತೆ' ಮತ್ತು 'ತಗರ ಪವಾಡ' ಎಂಬ ಕೃತಿಗಳ ವೈಶಿಷ್ಟ್ಯಗಳು. ಈ ಕೃತಿಗಳು ಕುರುಬ ಜನಾಂಗಕ್ಕೆ ಮತ್ತು ಗುರು ಪರಂಪರೆಗೆ ನೀಡಿದ ಕೊಡುಗೆ.

"ಈ ರೀತಿಯ ಚಾರಿತ್ರಿಕವಾದ ಹಿನ್ನೆಲೆಯುಳ್ಳ ಕುರುಬ ಗುರು ಒಡೆಯರ ಸಂಪ್ರದಾಯಗಳು ಇಂದಿಗೂ ಆಚರಣೆಯಲ್ಲಿರುವ ಕೆಲವು ನಿದರ್ಶನಗಳನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ"

ಉದಾ: ಒಡೆಯರು ನೆರವೇರಿಸುವ ಮದುವೆ, ಗೃಹ ಪ್ರವೇಶ, ನಾಮಕರಣ, ಶವ ಸಂಸ್ಕಾರ ಮುಂತಾದ ಕಾರ್ಯಗಳಿಗೆ ಗುರು ಪತ್ನಿಯರ ಪ್ರವೇಶ ಇಲ್ಲದಿರುವುದು ಒಡೆಯರ ಮನೆಗೆ ಮದುವೆಯಾಗಿ ಬಂದ ಸ್ತ್ರೀಯರಿಗೆ ಶಿವದೀಕ್ಷೆ ಮತ್ತು ಲಿಂಗಧಾರಣೆ ಮಾಡುವುದು, ಧಾರ್ಮಿಕ ಕಾರ್ಯ, ಮಂಗಳ ಕಾರ್ಯ ಅಥವಾ ಅಂತ್ಯ ಸಂಸ್ಕಾರ ಕಾರ್ಯಗಳಿಗೆ ಕುರುಬರು ಅವರ ಗುರು ಒಡೆಯರನ್ನು ಬಿಟ್ಟು ಬೇರೆ ಯಾರನ್ನೂ ಆಹ್ವಾನಿಸುವುದಿಲ್ಲ. ಇನ್ನೂ ಮುಂತಾದ ವಿಶೇಷ ಆಚರಣೆಗಳನ್ನು ಒಡೆಯರು ಆಚರಿಸುತ್ತಿದ್ದರು ಎಂದು ಲೇಖಕರು ಹೇಳಿದ್ದಾರೆ.

ಒಡೆಯರ ಕುಲಕಸುಬುಗಳು, ಅವರು ಹಬ್ಬ-ಹರಿದಿನಗಳನ್ನು ಆಚರಿಸುವ ವಿಶಿಷ್ಟ ಆಚರಣೆಗಳ ಬಗ್ಗೆ ಧಾರ್ಮಿಕ ಚೌಕಟ್ಟುಗಳು ಇವುಗಳ ಬಗ್ಗೆ ಚರ್ಚಿಸಲಾಗಿದೆ.

"ಕರಿಯ ಕಂತೆ" ಎಂಬ ಲೇಖನದಲ್ಲಿ ಕುರುಬ ಜನಾಂಗದವರು ಇಂದಿಗೂ ನಡೆಸಿಕೊಂಡು ಬಂದಿರುವಂತಹ ಒಂದು ಪ್ರಾಚೀನ ಸಂಪ್ರದಾಯದ ಬಗ್ಗೆ ಹೇಳುತ್ತಾರೆ.

ಭಾರತದ ಪ್ರಾಚೀನ ಜನಾಂಗದಲ್ಲಿ ಕುರುಬ ಜನಾಂಗವೂ ಒಂದು. ಸಂಸ್ಕೃತಿಯ ಮೂಲ ಸೊಗಡನ್ನು ಇಂದಿಗೂ ಉಳಿಸಿಕೊಂಡು ಬಂದಿರುವ ಕುರುಬ ಜನಾಂಗದ ನಂಬಿಕೆ ಮತ್ತು ಸಂಪ್ರದಾಯಗಳು ಭಾರತದ ಬೇರೆ ಬೇರೆ ಭಾಗಗಳಲ್ಲಿ ಬಹುತೇಕ ಒಂದೇ ಆಗಿದೆ.

ಕುರುಬ ಜನಾಂಗವು ಮೊದಲಿನಿಂದಲೂ ಉಳಿಸಿಕೊಂಡು ಬಂದಿರುವ ಕೆಲವು ಸಂಪ್ರದಾಯಗಳಲ್ಲಿ ಶ್ರೀ ರೇವಣಸಿದ್ಧೇಶ್ವರ ಪೂಜೆಗೆ ಸಂಬಂಧಿಸಿದ ವಸ್ತುವೊಂದರ ಸಿದ್ಧತೆ ಮತ್ತು ಆ ವಸ್ತುವನ್ನು ಶ್ರೀ ರೇವಣಸಿದ್ದೇಶ್ವರನಿಗೆ ಅರ್ಪಿಸುವ ಕ್ರಿಯೆ ಒಂದು ಕುತೂಹಲಕಾರಿಯಾದ ಆಚರಣೆ. ಕುರುಬರಿಗೆ ಕುರಿಯ ಅಪ್ಪಟ ಉಣ್ಣೆಯಿಂದ ಮಾಡಿದ ಕುರಿಯ ಕಂಬಳಿ ಪೂಜ್ಯವಾದ ವಸ್ತು. ತಮ್ಮ ಯಾವುದೇ ಶುಭ ಸಮಾರಂಭಗಳಲ್ಲಿ ಕುರಿಯ ಕಂಬಳಿಯ ಗದ್ದುಗೆ ಹಾಕಿ ಗುರು ಸ್ವರೂಪವನ್ನು ಆ ಗದ್ದುಗೆ ಮೇಲೆ ಕುಳ್ಳಿರಿಸಿ ಪೂಜಾ ಸಾಮಗ್ರಿಗಳನ್ನು ಹಾಸಿದ ಕುರಿಯ ಕಂಬಳಿಯ ಮೇಲೆಯೇ ಇಟ್ಟು ಕೆಲಸಗಳನ್ನು ಆರಂಭಿಸುವುದು ಇಂದಿಗೂ ರೂಢಿಯಲ್ಲಿದೆ. ಈ ಕುರಿಯ ಉಣ್ಣೆಯಿಂದ ಮಾಡಿದ ಪವಿತ್ರವಾದ ಮತ್ತು ಪೂಜ್ಯವಾದ ವಸ್ತುವೆಂದರೆ "ಕರಿಯ ಕಂತೆ" ಇದನ್ನು ಶ್ರೀ ರೇವಣಸಿದ್ಧೇಶ್ವರನ ಮಠಗಳು ಎಲ್ಲೆಲ್ಲಿ ಇವೆಯೋ ಅಲ್ಲೆಲ್ಲಾ ಆ ವಿಗ್ರಹಕ್ಕೆ ಕುರುಬರು ಅರ್ಪಿಸಿ ಆರಾಧಿಸುತ್ತಾರೆ.

"ಕರಿಯ ಕಂತೆ, ಕುರಿಯ ಕಂಬಳಿ, ಗದ್ದುಗೆ ದಾವಳಿ ಇವು ಕುರುಬರ ಗೌರವಕ್ಕೆ ಪಾತ್ರವಾಗಿರುವ ಪವಿತ್ರ ವಸ್ತುಗಳು. ಈ ಪವಿತ್ರ ಭಾವನೆಯನ್ನು ಕುರುಬ ಜನಾಂಗ ಇಂದಿನ ನಾಗರೀಕ ಪರಿಸರದಲ್ಲೂ ಉಳಿಸಿಕೊಂಡು ಅನುಸರಿಸುತ್ತಿರುವುದು ಈ ಜನಾಂಗದ ಸಂಪ್ರದಾಯಗಳು ಇನ್ನೂ ಕಲುಷಿತವಾಗಿಲ್ಲ ಎನ್ನುವುದರ ಕುರುಹಾಗಿದೆ."[೩೯]

"ಮರೆಯಲಾಗದ ಶ್ರೀಗುರು" ಎಂಬ ಲೇಖನದಲ್ಲಿ ಸಿ.ಕೆ.ಪಿ. ಅವರು ಡಿ.ಎಲ್. ನರಸಿಂಹಚಾರ್ಯರು ಮಾಡುತ್ತಿದ್ದ ಪಾಠ-ಪ್ರವಚನದ ರೀತಿ, ಅವರ ಬೌದ್ಧಿಕ ಶಕ್ತಿ, ಅವರ ವಾಕ್‌ಚಾತುರ್ಯ ಮುಂತಾದವುಗಳನ್ನು ಅನುಭವದ ರೀತಿಯಲ್ಲಿ ವಿವರಿಸುತ್ತಾ ಹೋಗಿದ್ದಾರೆ.

"೧೯೫೦ ಮತ್ತು ೧೯೬೦ರ ದಶಕದಲ್ಲಿ ಸಿ.ಕೆ.ಪಿ. ಅವರು ಬಿ.ಎ. ಮತ್ತು ಎಂ.ಎ. ತರಗತಿಯಲ್ಲಿ ಓದುತ್ತಿದ್ದಾಗ ಅಲ್ಲಿ ನಡೆಯುತ್ತಿದ್ದ ಪಾಠಗಳು, ಗುರುಗಳು, ವಿದ್ಯಾರ್ಥಿಗಳ ಬಗ್ಗೆ ಹೇಳಿದ್ದಾರೆ. ಮೈಸೂರಿನ ಮಹಾರಾಜ ಕಾಲೇಜು ವಿದ್ವನ್ಮಣಿಗಳ, ಪಂಡಿತೋತ್ತಮರು ಮತ್ತು ಸಂಶೋಧನಾಸಕ್ತ ಪ್ರಾಧ್ಯಾಪಕರುಗಳಿಂದ ತುಂಬಿತ್ತು"[೪೦] ಇದರಲ್ಲಿ ಸಿ.ಕೆ.ಪಿ. ಅವರಿಗೆ ತುಂಬಾ ಅಚ್ಚುಮೆಚ್ಚಿನ ಶಿಕ್ಷಕರು ಡಿ.ಎಲ್.ಎನ್. ಅವರು.

ಡಿ.ಎಲ್.ಎನ್. ತರಗತಿಯ ಎಲ್ಲಾ ವಿದ್ಯಾರ್ಥಿಗಳನ್ನು ಸ್ನೇಹ, ಪ್ರೀತಿ, ವಿಶ್ವಾಸದಿಂದ ಬೆರೆಯುತ್ತಿದ್ದರು. ಮತ್ತು ಅವರು ಮಾಡುತ್ತಿದ್ದ ಪಾಠ ಸುಲಲಿತವಾಗಿರುತ್ತಿತ್ತು. ಪಂಪನ 'ವಿಕ್ರಮಾರ್ಜುನ ವಿಜಯ", 'ಶಿವಕೋಟ್ಯಾಚಾರ್ಯ' ವಿರಚಿತ 'ವಡ್ಡಾರಾಧನೆ' ಹಾಗೂ 'ಕೇಶಿರಾಜನ ಶಬ್ದಮಣಿ ದರ್ಪಣ'ವನ್ನು ಬೋಧಿಸುವಾಗ ತೋರಿಸುತ್ತಿದ್ದ ಆಸಕ್ತಿ ಅಪರೂಪವಾದುದು. ಮತ್ತು ತುಂಬ ಮೌಲ್ಯಯುತವಾದುದು. ಇವುಗಳಲ್ಲಿ ಬರುವ ಪ್ರತಿಯೊಂದು ಕಠಿಣ ಪದಗಳನ್ನು ಸುಲಭವಾಗಿ ಅರ್ಥೈಸುತ್ತಿದ್ದರು. ಪದಗಳ ನಿಷ್ಪತ್ತಿ, ಹಿನ್ನೆಲೆ ಮತ್ತು ಆ ಪದಗಳನ್ನು ಸಂದರ್ಭಕ್ಕೆ ಹೊಂದುವಂತೆ ಸಮಂಜಸವಾಗಿ ಬಳಸಿರುವ ಉದ್ದೇಶವನ್ನು ಕರಾರುವಕ್ಕಾಗಿ ಹೇಳುವುದರಲ್ಲಿ ನಿಷ್ಣಾತರಾಗಿದ್ದ ಪಂಡಿತರು ಡಿ.ಎಲ್.ಎನ್.

ಮೈಸೂರು ವಿಶ್ವವಿದ್ಯಾಲಯದಲ್ಲಿ ಕಂಡ ಪ್ರಚಂಡ ಪಂಡಿತ, ಪ್ರಬುದ್ಧ, ವಿದ್ವಾಂಸ, ಶ್ರೇಷ್ಠ ಸಂಶೋಧಕ ಡಿ.ಎಲ್.ಎನ್. ಅವರು ಕನ್ನಡ ವಿದ್ವತ್ ಕ್ಷೇತ್ರವು ಸದಾ ಸ್ಮರಿಸುವಂತಹ ನಿಗರ್ವಿ ಪ್ರಾಧ್ಯಾಪಕರು. ವ್ಯಾಕರಣ, ಛಂದಸ್ಸು, ಗ್ರಂಥಸಂಪಾದನೆ, ಶಾಸನಾಧ್ಯಯನ ಮೊದಲಾದ ಶಾಸ್ತ್ರ ವಿಷಯಗಳಲ್ಲಿ ಡಿ.ಎಲ್.ಎನ್. ಅವರದು ಮಡುಗಟ್ಟಿದ ಪಾಂಡಿತ್ಯ. ಹಳಗನ್ನಡ ಕಾವ್ಯಗಳ ಅಧ್ಯಾಪಕರಲ್ಲಿ ಬೇರೆಯವರಿಗೆ ಸರಿಗಟ್ಟಲಾಗದಂತಹ ಪಾಠ ಪ್ರಾವೀಣ್ಯತೆ ಆಗಿದೆ.

"ಸಿದ್ದಮಂಕ ಚರಿತೆ ಕುರುಬ ಗುರು ಪರಂಪರೆಯನ್ನು ತಿಳಿಸುವ ಕೃತಿ" ಎಂಬ ಲೇಖನದಲ್ಲಿ ಸಿದ್ದಮಂಕ ಚರಿತೆ ಕೃತಿಯಲ್ಲಿ ಬರುವ ಪ್ರಮುಖ ನಾಯಕರುಗಳ ಪರಿಚಯ ಅವರ ಪವಾಡಗಳು,

ಅವರು ಕುರಬ ಜನಾಂಗಕ್ಕೆ ಸಲ್ಲಿಸಿದ ಸೇವೆಗಳ ಬಗ್ಗೆ ಹೇಳುತ್ತಾರೆ.

ಇಲ್ಲಿ ರೇವಣಸಿದ್ಧ, ಹೆಗ್ಗೊಂಡು, ಚಂದ್ರೇಗೌಡ, ಟಿಕ್ಕಯ್ಯ, ಶಾಂತಯ್ಯ, ಸಿದ್ದಮಂಕ ಈ ಹೆಸರುಗಳನ್ನು ಪರಿಚಯ ಮಾಡಿಕೊಡುತ್ತಾ ಅವರ ಸೇವೆ ಮತ್ತು ಪವಾಡ ಹಾಗೂ ವೈಶಿಷ್ಟ್ಯತೆ ಕುರಿತು ಹೇಳಿದ್ದಾರೆ. ಕುರುಬ ಜನಾಂಗದಲ್ಲಿ ಇಂದಿಗೂ ಆಚರಣೆಯಲ್ಲಿರುವ ಸಂಪ್ರದಾಯಗಳ ಬಗ್ಗೆ ಹೇಳುತ್ತಾ 'ಕಂಥೆ' ಮತ್ತು 'ಕರಿಯ ಕಂಬಳಿ' ಇವುಗಳನ್ನು ಕುರುಬರು ಧಾರ್ಮಿಕ ಕಾರ್ಯಗಳಲ್ಲಿ ಬಳಸಿಕೊಳ್ಳುವ ಬಗೆಯನ್ನು ತಿಳಿಸುತ್ತಾರೆ.

ಕುರುಬರಲ್ಲಿ ಪರಂಪರೆಯಿಂದ ಒಡೆಯರ ಸಂಪ್ರದಾಯಗಳ ಬಗ್ಗೆ ತಿಳಿಸುತ್ತಾ, ಕುರುಬರು ತಮ್ಮ ಗುರುಗಳಾದ ಒಡೆಯರ ಧರ್ಮ ಪತ್ನಿಯರನ್ನು ಯಾವ ರೀತಿ ಕಾಣುತ್ತಿದ್ದರು ಎಂಬುದರ ಬಗ್ಗೆ ತಿಳಿಸಿ ಕೊನೆಗೆ ಒಡೆಯರ ಸಂಪ್ರದಾಯವು ಒಂದು ವಿಶಿಷ್ಟ ಧಾರ್ಮಿಕ ಸಂಪ್ರದಾಯವಾಗಿರುವುದಲ್ಲದೆ, ಕೆಲವು ಕ್ರಾಂತಿಕಾರಿ ಅಂಶಗಳನ್ನೊಳಗೊಂಡಿರುವುದು ಇಲ್ಲಿನ ವಿಶೇಷ ಎಂದು ಹೇಳುತ್ತಾರೆ.

ಲೇಖನದ ಕೊನೆಗೆ ಸಿ.ಕೆ.ಪಿ. ಅವರ ಹುಟ್ಟೂರಾದ ಚಿಕ್ಕನಾಯಕನಹಳ್ಳಿಯಲ್ಲಿ ಇರುವ ಕುರುಬರ "ಶ್ರೀ ರೇವಣಸಿದ್ಧೇಶ್ವರ, ಶ್ರೀ ಗುರುಸಿದ್ಧರಾಮೇಶ್ವರ ಮತ್ತು ಶ್ರೀ ಕರಿಸಿದ್ದೇಶ್ವರ ಎಂಬ ಹೆಸರಿನ ಮೂರು ಮಠಗಳ ಬಗ್ಗೆ ಅಲ್ಲಿನ ಧಾರ್ಮಿಕ ಆಚರಣೆಗಳು. ವಿಧಿ–ವಿಧಾನಗಳು, ವೈಶಿಷ್ಟ್ಯಗಳ ಬಗ್ಗೆ ಹೇಳುತ್ತಾರೆ."[೪೧] ಕೊನೆಗೆ ಕುರುಬರ ಸಂಸ್ಕೃತಿ, ಪರಂಪರೆಗಳ ಬಗ್ಗೆ ಇನ್ನೂ ಹೆಚ್ಚು ಸಂಶೋಧನೆಗಳು ನಡೆಯಬೇಕು. ಇದಕ್ಕೆ ಯುವಜನರು ಮುಂದೆ ಬರಬೇಕೆಂದು ಹೇಳಿ ಮುಕ್ತಾಯಗೊಳಿಸುತ್ತಾರೆ.

"ತಗರ ಪವಾಡ ಮತ್ತು ಗುರು ಪರಂಪರೆ" ಎಂಬ ಲೇಖನದಲ್ಲಿ ಸಿ.ಕೆ.ಪಿ. ಅವರು ಕುರುಬರ ಗುರು ರೇವಣಸಿದ್ಧೇಶ್ವರರಿಗೂ ಮತ್ತು ಕೃತಿಗೂ ಅವಿನಾಭಾವ ಸಂಬಧವಿದೆ ಎಂದು ಹೇಳುತ್ತಾರೆ. ಈ ಸಂದರ್ಭವನ್ನು ಇಲ್ಲಿ ಸವಿಸ್ತಾರವಾಗಿ ಹೇಳುತ್ತಾ ಹೋಗಿದ್ದಾರೆ. ಒಟ್ಟು ಈ ಕೃತಿಯ ಎಂಟು ಸಂಧಿಯನ್ನು ವಿಶ್ಲೇಷಿಸುತ್ತಾ ರೇವಣಸಿದ್ದೇಶ್ವರನೊಂದಿಗೆ ಸಂಬಂಧ ಕಲ್ಪಿಸುತ್ತಾ ಹೋಗಿದ್ದಾರೆ.

ಒಟ್ಟಾರೆಯಾಗಿ ಸಿ.ಕೆ. ಪರಶುರಾಮಯ್ಯನವರ ಈ ಎಲ್ಲಾ ಲೇಖನವನ್ನು ಗಮನಿಸಿದಾಗ ಕುರುಬ ಜನಾಂಗದ ಧಾರ್ಮಿಕ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಇನ್ನೂ ಮುಂತಾದವುಗಳ ಮೇಲೆ ಬೆಳಕು ಚೆಲ್ಲಿದ್ದಾರೆ. ಬಹಳ ಪ್ರಮುಖವಾದ ಕುರುಬ ಜನಾಂಗದ ಗುರುಗಳಾದ ಶ್ರೀ ಚನ್ನಯ್ಯ ಒಡೆಯರ ಮತ್ತು ರೇವಣಸಿದ್ಧೇಶ್ವರರ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಅವರ ಲೇಖನದಲ್ಲಿ ಹಿಡಿದಿಟ್ಟಿದ್ದಾರೆ. ಇಲ್ಲಿ ಅವರ ಪ್ರಯೋಗ, ಭಾಷೆ, ಶೈಲಿ ಒಂದು ಅಭೂತಪೂರ್ಣವಾದುದು.

ಕೊನೆ ಟಿಪ್ಪಣಿಗಳು

೧. ಪರಶುರಾಮಯ್ಯ ಸಿ.ಕೆ., ದಲಿತ ಧಮನಿ, ಮುನ್ನುಡಿ, ಪುಟ–iv

೨. ಹಳ್ಳಿಕೇರಿ ಎಫ್.ಟಿ. (ಡಾ) (ಸಂ), ಹಾಲುಮತ ವ್ಯಾಸಂಗ–ಸಂ–೩, ಪುಟ–೨೮೧

೩. ಪರಶುರಾಮಯ್ಯ ಸಿ.ಕೆ., ದಲಿತ ಧಮನಿ, ಮುನ್ನುಡಿ, ಪುಟ–iii

೪. ಅದೇ, ಪು–೪

೫. ಅದೇ, ಪು–೭೭

೬. ಅದೇ, ಪು–೮೫

೭. ಅದೇ, ಪು–೧೭

೮. ಅದೇ, ಪು–೯೭

೯. ಅದೇ, ಪು–೮೭

೧೦. ಪರಶುರಾಮಯ್ಯ ಸಿ.ಕೆ., ನನ್ನ ವಚನಗಳು, ಬೆನ್ನುಡಿ

೧೧. ಅದೇ, ಪು–೭೭

೧೨. ಅದೇ, ಪು–೯೯

೧೩ ಕಲಬುರ್ಗಿ ಎಂ.ಎಂ. (ಡಾ), ಕನ್ನಡ ಗ್ರಂಥ ಸಂಪಾದನಶಾಸ್ತ್ರ, ಪುಟ–೦೩

೧೪. ವೀರಣ್ಣ ರಾಜೂರ (ಡಾ) (ಸಂ), ಶಿವಶರಣೆಯರ ವಚನಗಳು ಸಂಪುಟ, ಮುನ್ನುಡಿ

೧೫. ಪರಶುರಾಮಯ್ಯ ಸಿ.ಕೆ. (ಸಂ), ನೀಲಲೋಚನೆಯ ವಚನಗಳು, ಮುನ್ನುಡಿ

೧೬. ಅದೇ, ಪು–ಅರಿಕೆ

೧೭. ಸರೋಜಿನಿ ಚವಲಾರ್ (ಡಾ) (ಸಂ), ನೀಲಾಂಬಿಕೆಯ ವಚನಗಳು, ಮುನ್ನುಡಿ

೧೮. ವೀರಣ್ಣ ರಾಜೂರ (ಡಾ) (ಸಂ), ಶಿವಶರಣೆಯರ ವಚನಗಳು ಸಂಪುಟ, ಮುನ್ನುಡಿ

೧೯. ಪರಶುರಾಮಯ್ಯ ಸಿ.ಕೆ. (ಸಂ), ನೀಲಲೋಚನೆಯ ವಚನಗಳು, ಪುಟ–೩೫

೨೦. ಅದೇ, ಪು–೩೨

೨೧. ಅದೇ, ಪು–೩೫

೨೨. ಅದೇ, ಪು–೩೧

೨೩. ಅದೇ, ಪು–೨೯

೨೪. ಅದೇ, ಪು–೩೦

೨೫. ಹಳ್ಳಿಕೇರಿ ಎಫ್.ಟಿ. (ಡಾ) (ಸಂ), ಹಾಲುಮತ ವ್ಯಾಸಂಗ–ಸಂ–೩, ಪುಟ–೧೬

೨೬. ಪರಶುರಾಮಯ್ಯ ಸಿ.ಕೆ., ಚೌಡಿಕೆಯವರು, ಬೆನ್ನುಡಿ,

೨೭. ಅದೇ, ಪು–ಮುನ್ನುಡಿ

೨೮. ಪರಶುರಾಮಯ್ಯ ಸಿ.ಕೆ., ಗಾದೆಗಳ ಅಂತರಂಗ, ಮೊದಲ ಮಾತು, ಪುಟ–ix

೨೯. ಪರಶುರಾಮಯ್ಯ ಸಿ.ಕೆ., ಪ್ರಾಚೀನ ಆದರ್ಶ ಬಾಲಕರು, ಪುಟ–೧೪

೩೦. ಅದೇ, ಪು–೨೩

೩೧. ಪರಶುರಾಮಯ್ಯ ಸಿ.ಕೆ., ಕರುಳ ಬಳ್ಳಿ, ಬೆನ್ನುಡಿ

೩೨. ಹಳ್ಳಿಕೇರಿ ಎಫ್.ಟಿ. (ಡಾ) (ಸಂ), ಹಾಲುಮತ ವ್ಯಾಸಂಗ–ಸಂ–೩, ಪುಟ–೨೮೫

೩೩. ಪರಶುರಾಮಯ್ಯ ಸಿ.ಕೆ., ಚನ್ನಬಸಪ್ಪ ಮತ್ತು ನಂಜಪ್ಪ ಎಂ.ಬಿ., ಕರ್ನಾಟಕ ಪ್ರಗತಿ ಪಂಥ, ಮುನ್ನುಡಿ

೩೪. ಅದೇ, ಮುನ್ನುಡಿ

೩೫. ಅದೇ, ಪ್ರಸ್ತಾವನೆ

೩೬. ಪರಶುರಾಮಯ್ಯ ಸಿ.ಕೆ., ತಾಯಂದಿರಿಗೆ ತಿಳಿದಿರಲಿ, ಮುನ್ನುಡಿ

೩೭. ಶ್ರೀ ಕಲ್ಲೆ. ಎನ್., ಶಿವತ್ತೋಮರಾವ್, ಗುರು ವಂದನೆ, ಪುಟ–೧೨

೩೮. ಅದೇ, ಪು–೯

೩೯. ಅದೇ, ಪು–೨೮೬

೪೦. ಹಳ್ಳಿಕೇರಿ ಎಫ್.ಟಿ. (ಡಾ) (ಸಂ), ಡಿ.ಎಲ್. ನರಸಿಂಹಾಚಾರ್, ಶತಮಾನ ಸ್ಮರಣೆ, ಪುಟ–೨೨೪

೪೧. ಹಳ್ಳಿಕೇರಿ ಎಫ್.ಟಿ. (ಡಾ) (ಸಂ), ಹಸ್ತಪ್ರತಿ ಅಧ್ಯಯನ, ಸಂಪುಟ–೪, ಸಂಚಿಕೆ–೧, ಪುಟ–೬೧

ಅಧ್ಯಾಯ : ನಾಲ್ಕು

ಕನ್ನಡ ಸಾಹಿತ್ಯಕ್ಕೆ ಸಿ.ಕೆ. ಪರಶುರಾಮಯ್ಯ ಅವರ ಕೊಡುಗೆ

ಅಧ್ಯಾಯ – ನಾಲ್ಕು

ಕನ್ನಡ ಸಾಹಿತ್ಯಕ್ಕೆ ಸಿ.ಕೆ. ಪರಶುರಾಮಯ್ಯನವರ ಕೊಡುಗೆ

ಸಾಹಿತ್ಯ ಕೃಷಿಯನ್ನು ಮಾಡಿರುವ ಸಿ.ಕೆ.ಪಿ. ಅವರು ಕನ್ನಡ ಸಾಹಿತ್ಯ ಲೋಕದಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಪಡೆದಿದ್ದಾರೆ. ಮೊದಲು ಕವನ ರಚನೆಯ ಮೂಲಕ ಸಾಹಿತ್ಯ ಕ್ಷೇತ್ರದತ್ತ ನಡೆದು ಬಂದರು. ಇದುವರೆಗೂ ೧೫೦ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಅವರ ಸಾಹಿತ್ಯವನ್ನು ಕಾವ್ಯ ಸಂಶೋಧನೆ, ಗದ್ಯ, ಅಭಿವೃದ್ಧಿ ಸಾಹಿತ್ಯ ಕೃತಿಗಳೆಂದು ವಿಂಗಡಿಸಲಾಗಿದೆ. ಸಿ.ಕೆ.ಪಿ. ಅವರು ಎರಡು ಕವನ ಸಂಕಲನಗಳನ್ನು ರಚನೆ ಮಾಡಿದ್ದಾರೆ. 'ದಲಿತ ಧಮನಿ' ಎಂಬ ಕಾವ್ಯ ಸಂಕಲನದಲ್ಲಿ ಮಾನವೀಯ ತುಡಿತವಿರುವ ನೂರೆಂಟು ಆಯ್ದ ಕವನಗಳನ್ನು ಕಟ್ಟಿಕೊಟ್ಟಿದ್ದಾರೆ. ದೀನ–ದಲಿತರ ಪರವಾಗಿ, ಶೋಷಿತ ವರ್ಗದ ನೈಜ ಬದುಕಿನ ಚಿತ್ರವನ್ನು ಕಟ್ಟಿಕೊಟ್ಟಿದ್ದಾರೆ. "ಸರಳವಾದ ಚಿತ್ರಗಳ ಮೂಲಕ ಹಾಗೆಯೇ ಬಡತನ–ಸಿರಿತನಗಳನ್ನು ಮುಖಾಮುಖಿಯಾಗಿಸುವ ಸಂಕೀರ್ಣ ಚಿತ್ರಗಳ ಮೂಲಕ ಶ್ರೀ ಪರಶುರಾಮಯ್ಯನವರು 'ದಲಿತ ಧಮನಿ' ವಿಶಿಷ್ಟ ರೀತಿ ಮಿಡಿಯುತ್ತದೆ. ಈ ಧಮನಿಯಲ್ಲಿ ಶೋಷಿತವಿಲ್ಲ, ಹಗೆತನವಿಲ್ಲ, ಹೋರಾಟದ ಕಿಚ್ಚಿಲ್ಲ, ಅನುಕಂಪದ ಅಲೆ ಇದೆ. ಈ ಎಲ್ಲದರ ಹಿಂದೆ ಮಾನವರ ನೋವಿಗೆ ಮಿಡಿಯುವ ತುಂಬು ಅಂತಃಕರಣವಿದೆ ಎಂದು ಪ್ರೊ. ಜಿ.ಎಸ್. ಸಿದ್ದಲಿಂಗಯ್ಯನವರು ಈ ಸಂಕಲನಕ್ಕೆ ಮುನ್ನುಡಿ ಬರೆಯುತ್ತಾ ನುಡಿಯುತ್ತಾರೆ."[೧] ಸರಳವಾಗಿ ನೇರ ಮನಮುಟ್ಟುವ ಕಾವ್ಯದ ಸಾಲುಗಳಿವೆ. ಇಲ್ಲಿನ ಪ್ರತಿಯೊಂದು ರಚನೆಯೂ ಸಮಾಜದ ಅವಜ್ಞೆಗೊಳಗಾಗಿದ್ದರೂ ದುಡಿದು ಉಂಡ ನೆಲಕ್ಕೆ ತಲೆ ಇಟ್ಟೊಡನೆ ನಿರಾಳವಾಗಿ ನಿದ್ರಿಸುವ ಶ್ರಮಜೀವಿಗಳ ನಿಜ ಚಿತ್ರಣವನ್ನು ಕಣ್ಣಮುಂದೆ ನಿಡುತ್ತದೆ. ಹೃದಯವಿದ್ದವರು ಮಾತ್ರ ಇಲ್ಲಿ ಅಭಿವ್ಯಕ್ತವಾಗಿರುವ ಬೆವರಿನ ಬೆಲೆಯನ್ನು ಅರಿಯಬಲ್ಲರು. ಇಲ್ಲಿ ಬಡತನ ಒಡಲಿನಾಳದ ಬವಣೆ, ಬೇಗುದಿ, ದುಗುಡ–ದುಮ್ಮಾನ, ಕಷ್ಟ–ಸಂಕಷ್ಟಗಳನ್ನು ಒಡೆದು ವಿವರಿಸಿದ್ದಾರೆ.

"ನನ್ನ ವಚನಗಳು" ಎಂಬ ಕಾವ್ಯ ಸಂಕಲನದಲ್ಲಿ 'ಚೌಡಿಕೆಯ ಜೋಗಿ' ಅಂಕಿತದಲ್ಲಿ ಸಿ.ಕೆ.ಪಿ. ವಚನಗಳನ್ನು 'ನನ್ನ ವಚನಗಳು' ಶೀರ್ಷಿಕೆಯಲ್ಲಿ ತಮ್ಮ ರಾಗಿಣಿ ಪ್ರಕಾಶನ ಅಡಿಯಲ್ಲಿ ಪ್ರಕಟಿಸಿದ್ದಾರೆ. ಆಧುನಿಕ ವಚನಕಾರ ಸಿ.ಕೆ. ಪರಶುರಾಮಯ್ಯನವರ ಈ ಸಂಕಲನಕ್ಕೆ ಬರೆದ ಬೆನ್ನುಡಿಯಲ್ಲಿ ಸಾ.ಶಿ. ಮರುಳಯ್ಯ ಅವರು ವಚನಗಳ ಈ ಪುಣ್ಯ ಪರಪಂರೆಯಲ್ಲಿ ಕಳೆದ ಯುಗದ ಕೊಂಡಿಯಾಗಿ ಹೊಸ ಯುಗದ ಹೊಣೆಹೊತ್ತ ಬಂಡಿಯಾಗಿ ಪರಶುರಾಮಯ್ಯನವರ 'ನನ್ನ ವಚನಗಳು' ಪಥ ಸಂಚಲನದಲ್ಲಿ ತೊಡಗಿರುವುದು ಆನಂದ ತಂದ ಸಂಗತಿ. "ಶ್ರೀಯುತರು ಇಲ್ಲಿನ ರಚನೆಯಲ್ಲಿ ಕಸುವಿದೆ, ಕಾಂತಿಯಿದೆ, ಬೋಧಯಿದೆ, ಜೀವನ ದರ್ಶನವಿದೆ ಎಂದು ಹೃದಯ ತುಂಬಿ ಬಣ್ಣಿಸುತ್ತಾರೆ. ಪರಶುರಾಮಯ್ಯ ನಿಜಕ್ಕೂ ಓರ್ವ ಅಜಾತ ಶತ್ರು, ಒಳ್ಳೆಯ ವಾಗ್ಮಿ, ವರದಿಗಾರರು ಎಲ್ಲಕ್ಕೂ ಮಿಗಿಲಾಗಿ ಸ್ನೇಹಜೀವಿ ಎಂಬ ಪ್ರಜ್ವಲ ಮನಸ್ಸಿನಿಂದ ನುಡಿಯುವುದು ಯಥೋಚಿತವಾದುದು ಎಂದಿದ್ದಾರೆ."[೨]

ಸಿ.ಕೆ.ಪಿ. ಅವರ ಗ್ರಂಥ ಸಂಪಾದನೆಯ ಕಾರ್ಯ ತುಂಬಾ ಅಭೂತಪೂರ್ವವಾಗಿದ್ದು 'ನೀಲಲೋಚನೆಯ ವಚನಗಳು' ಮತ್ತು 'ತಗರ ಪವಾಡ' ಎಂಬ ಎರಡು ಗ್ರಂಥಸಂಪಾದನೆ ಮಾಡಿದ್ದಾರೆ. "ಬಸವಣ್ಣನವರ ಧರ್ಮ ಪತ್ನಿ ನೀಲಲೋಚನೆಯ ಅಪ್ರಕಟಿತ ವಚನಗಳ ತಾಡೋಲೆಯ ಪ್ರತಿಯನ್ನು ಪರಿಷ್ಕರಿಸಿ ೧೯೬೫ರಷ್ಟು ಹಿಂದೆಯೇ 'ನೀಲಲೋಚನೆಯ ವಚನಗಳು' ಎಂಬ ಶೀರ್ಷಿಕೆಯಲ್ಲಿ ಸಂಪಾದಿಸಿದ್ದಾರೆ."[೩] ಅವರ ಪೂಜ್ಯ ಗುರುಗಳಲ್ಲಿ ಒಬ್ಬರಾದ ಪ್ರೊ. ಎಸ್.ವಿ. ಪರಮೇಶ್ವರ ಭಟ್ಟರು ಆ ಕಾಲದಲ್ಲೇ ತಮ್ಮ ಸರಸ ಸಾಹಿತ್ಯ ಪ್ರಕಾಶನದಿಂದ ಈ ಕೃತಿಯನ್ನು ಪ್ರಕಟಿಸಿ ಪ್ರೋತ್ಸಾಹಿಸಿದ್ದು ಸಿ.ಕೆ.ಪಿ.ಯವರ ಒಂದು ಹೆಗ್ಗಳಿಕೆ.

ಅದೇ ರೀತಿ ತಗರ ಪವಾಡ ಕುರುಬ ಸಮುದಾಯದ ಗುರು ಪರಂಪರೆಯನ್ನು ನಿರೂಪಿಸುವ ಮತ್ತೊಂದು ಪ್ರಾಚೀನ ಸಾಹಿತ್ಯ ಕೃತಿ. ತಮ್ಮ ಗುರುಗಳಾದ ಡಿ.ಎಲ್.ಎನ್.ರ ಸಲಹೆಯಂತೆ ತಗರ ಪವಾಡದ ಗದ್ಯಾನುವಾದವನ್ನು ೧೯೬೭ರಷ್ಟು ಹಿಂದೆಯೇ ಪ್ರಬುದ್ಧ ಕರ್ನಾಟಕದಲ್ಲಿ ಪ್ರಕಟಿಸುವ ಮೂಲಕ ಆ ಕೃತಿಯನ್ನು ಕರ್ನಾಟಕಕ್ಕೆ ಪರಿಚಯಿಸಿದ್ದರು. ಇತ್ತೀಚೆಗಷ್ಟೆ ಅಂದರೆ ೨೦೦೪ರಲ್ಲಿ ಡಾ. ಎಂ.ಎಂ. ಕಲಬುರ್ಗಿ ಹಾಗೂ ಡಾ. ಎಫ್.ಟಿ. ಹಳ್ಳಿಕೇರಿ ಅವರ ಜೊತೆಗೂಡಿ ಈ ಕೃತಿಯನ್ನು ಶಾಸ್ತ್ರ ಶುದ್ಧವಾಗಿ ಪರಿಷ್ಕರಿಸಿ ಪ್ರಕಟಿಸಿದ್ದಾರೆ. ಈ ಕೃತಿ ಕುರುಬರ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಸಂಗತಿಗಳನ್ನು ಎಳೆಎಳೆಯಾಗಿ ಬಿಡಿಸಿರುವ ಕೃತಿ ಇದು. ಹನ್ನೆರಡನೆಯ ಶತಮಾನದಲ್ಲಿ ನಡೆದಿರಬಹುದಾದ ಸಾಮಾಜಿಕ ಏಕೀಕರಣವನ್ನು ಸಾರುವ ಚಾರಿತ್ರಿಕ ಮಹತ್ವದ ಕೃತಿ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಅಂಥ ಅನುಭವದ ನುಡಿಮುತ್ತುಗಳನ್ನು ಹೆಕ್ಕಿ ಗಾದೆಗಳ ಅಂತರಂಗವನ್ನು ತಡಕಿ ಅಲ್ಲಿ ಅಡಗಿರುವ 'ಜನಪದ ಖನಿ'ಯನ್ನು ಸೊಗಡು ಕೆಡದಂತೆ ಜೇನು ಬಿಡಿಸಿದಂತೆ ಬಿಡಿಸುವ ಸಿ.ಕೆ.ಪಿ.ಯವರ ಇಲ್ಲಿನ ನಿರೂಪಣಾ ಶೈಲಿಯಲ್ಲಿಯೇ ವಿಶಿಷ್ಟ ದೇಸಿಯತೆಯಿದೆ.

ಗದ್ಯ ಸಾಹಿತ್ಯದಲ್ಲಿ 'ಚೌಡಿಕೆ', 'ಪ್ರಾಚೀನ ಆದರ್ಶ ಬಾಲಕರು', ಗಾದೆಗಳ ಅಂತರಂಗ ಮತ್ತು ಕರುಳ ಬಳ್ಳಿ ಇವು ಪ್ರಮುಖವಾದವು . ಚೌಡಿಕೆಯವರು (ಸಂಪ್ರದಾಯ ಮತ್ತು ಆಚರಣೆಯ ಅಧ್ಯಯನ) ಕೃತಿ. ಲೇಖಕರು ಸ್ವತಃ ಚೌಡಿಕೆ ಮನೆತನಕ್ಕೆ ಸೇರಿದವರಾಗಿ ತಮ್ಮ ವಂಶಜರ ಸಂಪ್ರದಾಯ, ಆಚರಣೆಯನ್ನು ಅಧಿಕೃತವಾಗಿ ದಾಖಲಿಸಿದ್ದಾರೆ. 'ಗಾದೆ ಅಂತರಂಗ' ಆಯ್ದ ಜಾನಪದ ಬೃಹತ್ ಗ್ರಂಥ. ಕರುಳ ಬಳ್ಳಿ, ಜನಪದ ಸಾಹಿತ್ಯ ಸಂಸ್ಕೃತಿ ಕುರಿತ ಅವರ ಚಿಂತನೆಯ ಬರಹ.

"ಗೌರವಾಭಿನಂದನೆ' ಕಾಲಕಾಲಕ್ಕೆ ನಾಡಿನ ಪ್ರಖ್ಯಾತ ಸಾಹಿತಿ, ಕಲಾವಿದರು, ಮಠಾಧೀಶರು, ಸಮಾಜ ಸುಧಾರಕರು, ತಜ್ಞರು, ಸಂಶೋಧಕರು, ಆಡಳಿತಗಾರರು ಮತ್ತು ವಿವಿಧ ಕ್ಷೇತ್ರ ಪ್ರತಿಭಾವಂತ ಗಣ್ಯರನ್ನು ಸನ್ಮಾನಿಸಿದಾಗ ಅರ್ಪಿಸಿದ ಗೌರವಾಭಿನಂದನ ಬರೆಯುವಲ್ಲಿ ಮತ್ತು ಸಾಹಿತ್ಯದಲ್ಲಿಯೇ ಇದು ಹೊಸ ಪ್ರಕಾರ ಎನ್ನುವಷ್ಟರಮಟ್ಟಿಗೆ ಇವರ ಕರಕುಶಲತೆ ಇವುಗಳಲ್ಲಿದೆ. ಇದು ಕೂಡ ಪ್ರಕಟಣೆಗೆ ಸಿದ್ಧವಾಗಿದೆ. 'ಕಟ್ಟಾಣಿ' (ತ್ರಿಪದಿಗಳ ವಿಶ್ಲೇಷಣೆ) ಪ್ರಕಟಣೆಗೆ ಕಾಯುತ್ತಿರುವ ಕೃತಿಗಳಾಗಿವೆ."[೪]

ಕನ್ನಡ ಸಾಹಿತ್ಯ ಸಂದರ್ಭದಲ್ಲಿ ವಿಶಿಷ್ಟವೆನಿಸುವ ಹೊಸದೊಂದು ಪ್ರಕಾರವೆಂದೇ ಗುರುತಿಸಬಹುದಾದಷ್ಟು ದೊಡ್ಡ ಪ್ರಮಾಣದಲ್ಲಿ ಸಿ.ಕೆ. ಪರಶುರಾಮಯ್ಯನವರು ನಾಡಿನ ನೂರಾರು ಗಣ್ಯರ ಅಭಿನಂದನ ಸಮಾರಂಭಗಳಿಗೋಸ್ಕರವೇ ಬರೆದು ನೀಡಿದ 'ಗೌರವಾಭಿನಂದನ ಪತ್ರ'ಗಳ ದೊಡ್ಡ ರಾಶಿಯಿದೆ. ಒಬ್ಬ ವ್ಯಕ್ತಿಯ ಅಂತಃಸತ್ವವನ್ನೂ, ಆತನ ಕೊಡುಗೆಯನ್ನೂ ಸಾರ ಸಂಗ್ರಹವಾಗಿ, ಸಶಕ್ತವಾಗಿ ನಿರೂಪಿಸುವ ಒಂದು ಕಲೆಯಾಗಿದೆ. ನೆರೆದ ಅಗಣಿತ ಸಭಾಸದರ ಮುಂದೆ ಮಂಡಿಸಲಾಗುವ ಇದು ಮುಖಸ್ತುತಿಯೂ ಆಗಬಾರದು, ಅವಹೇಳನವೂ ಆಗಬಾರದು ಅಂಥ ಎಚ್ಚರದ ನಿರೂಪಣೆ ಇದು ಎನ್ನುತ್ತಾರೆ ಸಿ.ಕೆ. ಪರಶುರಾಮಯ್ಯನವರು.

ಗಣ್ಯರ ಅಭಿನಂದನ ಸಮಾರಂಭಗಳಲ್ಲಿ ಸಲ್ಲಿಸುವ ಇಂಥ ಪತ್ರಗಳನ್ನು 'ಬಿನ್ನವತ್ತಳೆ' ಎಂದು ಸಾರಾಸಗಟಾಗಿ ಕರೆಯುವುದು ತಪ್ಪೆಂದು ಸಿ.ಕೆ.ಪಿ.ಯವರ ಅಂಬೋಣ. ಆಗಬೇಕಾಗಿದ್ದ ಸೌಲಭ್ಯಗಳ, ಬೇಡಿಕೆಗಳ ಬಗೆಗೆ ಅಧಿಕಾರದಲ್ಲಿರುವ ಮಂತ್ರಿಗಳು, ಅಧಿಕಾರಿಗಳಿಗಳಿಗೆ ಸಲ್ಲಿಸುವ ಬಿನ್ನಹ

ಕೋರಿಕೆ ಪತ್ರ ಬಿನ್ನವತ್ತಳೆಯಾಗುತ್ತದೆ. ಆದರೆ ಅಭಿನಂದನ ಪತ್ರವು ಗೌರವ ಸಲ್ಲಿಸುವ 'ಮಾನ ಪತ್ರ'ವಾಗಿ ವಿಶೇಷ ಗಮನ ಸೆಳೆಯುವಂತದ್ದೆಂದು ಇವರ ಅಭಿಪ್ರಾಯ ತಮ್ಮ ವಿದ್ಯಾ ಗುರುಗಳಾದ ತೀ.ನಂ.ಶ್ರೀ.ಯವರಿಂದ ಹಿಡಿದು ಶತಾಯುಷಿ ಸಿದ್ಧಗಂಗಾ ಶ್ರೀಗಳ ತನಕ ನೂರಾರು ಮಂದಿ ವಿವಿಧ ಕ್ಷೇತ್ರಗಳ ಗಣ್ಯರಿಗೆ ಗೌರವಾಭಿನಂದನ ಪತ್ರ ಬರೆದು ತುಂಬಿದ ಸಭೆಗಳಲ್ಲಿ ಮಂಡಿಸಿದರು.

ಇವುಗಳಲ್ಲದೆ ಸಿ.ಕೆ.ಪಿ. ಅವರು ಇನ್ನಿತರ ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ. ಇಲ್ಲಿ ಅಭಿವೃದ್ಧಿಗೆ ಸಂಬಂಧಿಸಿದ ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ. ಸರ್ಕಾರಿ ಸೇವೆಯಲ್ಲಿ ಇವರು ವಾರ್ತಾ ಮತ್ತು ಪ್ರಚಾರ ಇಲಾಖೆಯಲ್ಲಿ ವರದಿಗಾರರಾಗಿ ಸೇರಿ ಹಂತಹಂತವಾಗಿ ದೊಡ್ಡ ಹುದ್ದೆಗೇರಿ ಸರ್ಕಾರಿ ಮತ್ತು ಜನತೆಯ ನಡುವೆ ಸೇತುವೆಯಂತೆ ಕೆಲಸ ಮಾಡಿದ್ದ ಸಿ.ಕೆ.ಪಿ.ಯವರ ವಿಶೇಷತೆಯಿದೆ. "೧೯೭೩ರಲ್ಲಿ ಕನ್ನಡ ಅಭಿವೃದ್ಧಿ ಸಮಿತಿಯು ಯೋಜಿಸಿದ್ದ ಕಾರ್ಯಕ್ರಮದನ್ವಯ ಕರ್ನಾಟಕ ಏಕೀಕರಣದಿಂದ ಹಿಡಿದು ೧೯೭೪ರವರೆಗೆ ರಾಜ್ಯದ ವಿವಿಧ ಇಲಾಖೆಗಳ ಯೋಜನೆ ಮತ್ತು ಸಾಧನೆಗಳನ್ನು ವಿವರಿಸುವ ಬೃಹತ್ ಗ್ರಂಥ."[೫]

'ಕರ್ನಾಟಕ ಪ್ರಗತಿ ಪಥ' ಇದು ಮೂರು ಜನ ಲೇಖಕರಲ್ಲಿ (ಎಂ.ಬಿ. ನಂಜಪ್ಪ, ಗೊ.ರು. ಚನ್ನಬಸಪ್ಪ, ಸಿ.ಕೆ. ಪರಶುರಾಮಯ್ಯ) ಇವರೂ ಒಬ್ಬರು. ಕರ್ನಾಟಕ ಖ್ಯಾತ ಚಿಂತಕ, ಶ್ರೇಷ್ಠ ಬರಹಗಾರ ಡಾ. ಡಿ.ವಿ. ಗುಂಡಪ್ಪ ಅವರು ಮೋಕ್ಷಗುಂಡಂ, ವಿಶ್ವೇಶ್ವರಯ್ಯನವರು ಮೆಚ್ಚಬಹುದಾಗಿದ್ದಂತಹ ಕೃತಿಯು ಇದು ಕನ್ನಡದಲ್ಲಿ ಹೊರಬಂದಿದೆ. ಸರ್ಕಾರದ ಅಭಿವೃದ್ಧಿ ಕ್ಷೇತ್ರದಲ್ಲಿ ಆಗಿರುವ ಸಾಧನೆ ಮತ್ತು ಆಗಬೇಕಾಗಿರುವ ಕಾರ್ಯಕ್ರಮಗಳ ಬಗೆಗಿನ ಯೋಜನೆಗಳನ್ನು ಅಗತ್ಯ ಅಂಕಿ-ಅಂಶಗಳೊಂದಿಗೆ ಅಚ್ಚುಕಟ್ಟಾಗಿ ನಿರೂಪಿಸುವ ಅಪರೂಪದ ಪ್ರಮಾಣಭೂತ ಗ್ರಂಥ ಕರ್ನಾಟಕ ಪ್ರಗತಿಪಥ, ಒಂದು ರಾಜ್ಯವು ಅಭಿವೃದ್ಧಿ ಪಥದಲ್ಲಿ ಬಂದಿರುವ ದಾರಿ ಮತ್ತು ಮುಂದಿರುವ ದೂರವನ್ನು ಮನದಟ್ಟು ಮಾಡುವ ಕೃತಿಯಾಗಿದೆ.

ತಾಯಂದಿರಿಗೆ ತಿಳಿದಿರಲಿ ತಾಯಿ-ಮಕ್ಕಳ ಆರೋಗ್ಯ ಕುರಿತು ಸಹದ್ಯೋಗಿ ಎಂ.ಎಂ. ಪಾಟೀಲರ ಜೊತೆಗೂಡಿ ಬರೆದ ಕೃತಿ ಇದು. ಆಧುನಿಕ ಹೈನುಗಾರಿಕೆಯ ನಿರ್ವಹಣೆ, ಅನುವಾದ ಪ್ರೊ. ವಿ.ಚ. ಹಿತ್ತಲಮನಿ, ಗೊ.ರು. ಚನ್ನಬಸಪ್ಪ, ಸಿ.ಕೆ. ಪರಶುರಾಮಯ್ಯ ಇದು ಕೃಷಿ ವಿಶ್ವವಿದ್ಯಾಲಯದ ಪ್ರಕಟಣೆ. ಭಾರತದಲ್ಲಿ ಸಮುದಾಯ ಅಭಿವೃದ್ಧಿ ಯೋಜನೆಯ ವಿಕಾಸ, ಅನುವಾದ ಗೊ.ರು. ಚನ್ನಬಸಪ್ಪ, ಸಿ.ಕೆ. ಪರಶುರಾಮಯ್ಯ, 'ನೆಹರು ಮತ್ತು ಸಮುದಾಯ ಅಭಿವೃದ್ಧಿ ಯೋಜನೆ' ಅನುವಾದ ಗೊ.ರು. ಚನ್ನಬಸಪ್ಪ, ಸಿ.ಕೆ. ಪರಶುರಾಮಯ್ಯ ಇವು ಕರ್ನಾಟಕ ಸರ್ಕಾರದ ಪ್ರಕಟಣೆಗಳು. 'ಕುಡಿತ ಗೀಳು ಬಾಳಿನ ಗೋಳು' ಸಿ.ಕೆ. ಪರಶುರಾಮಯ್ಯ ಇದು ಕರ್ನಾಟಕ ಮದ್ಯಪಾನ ಸಮ್ಯಮ ಮಂಡಳಿಯಿಂದ ಪ್ರಕಟವಾಯಿತು.

ವಾರ್ತಾ ಇಲಾಖೆ ಸರ್ಕಾರದ ಬಹುಮುಖ್ಯ ಅಂಗ ಇದ್ದಂತೆ. ಸಿ.ಕೆ. ಪರಶುರಾಮಯ್ಯ ಅವರು ವರದಿಗಾರರಾಗಿ ಸದರಿ ಇಲಾಖೆಗೆ ಸೇರಿದಾಗ ಮಂತ್ರಿ ಮಹೋದಯರ ಭಾಷಣದ ವರದಿಗಾಗಿ, ಇವರ ಭಾಷಾಂತರಕ್ಕಾಗಿ ಪತ್ರಿಕೆಗಳು ಕಾಯುತ್ತಿದ್ದವಂತೆ. ಹಾಗಾಗಿ ವಾರ್ತಾ ಇಲಾಖೆಯು ಪ್ರತಿ ತಿಂಗಳು ಸಿದ್ಧಪಡಿಸುತ್ತಿದ್ದ ವಾರ್ತಾ ಚಿತ್ರ ಅಭಿವೃದ್ಧಿ, ವಿಚಾರ ಮತ್ತು ವಿಶಿಷ್ಟ ವ್ಯಕ್ತಿಗಳನ್ನು ಕುರಿತು ಸಾಕ್ಷ್ಯಾ ಚಿತ್ರಗಳಲ್ಲಿ ಸಿ.ಕೆ.ಪಿ. ಅವರ ಸಾಹಿತ್ಯ ಮತ್ತು ನಿರೂಪಣೆ ಪರಿಚಿತ ಅಷ್ಟೇ ಅಲ್ಲ ವಾರ್ತಾ ಮತ್ತು ಪ್ರಚಾರ ಇಲಾಖೆಗೆ ಹೇಳಿ ಮಾಡಿಸಿದ್ದ ಕಂಠಶ್ರೀ ಇವರದು. ನಿರೂಪಣೆಯನ್ನು ಇವರಿಂದ ಕಲಿಯಬೇಕು. ಇವರು ಸರ್ಕಾರಿ ಸೇವೆಯ ವಾರ್ತಾ ಇಲಾಖೆಯಲ್ಲಿದ್ದರೂ ಸಾಹಿತ್ಯದ ಸಂಪರ್ಕ ಕಳೆದುಕೊಳ್ಳಲಿಲ್ಲ. ಪ್ರತಿಯಾಗಿ ನಾಡಿನ ಗಣ್ಯಾತಿಗಣ್ಯರ, ಸಾಹಿತ್ಯ ಕಲಾವಿದರ ಸಂಪರ್ಕದ ಲಾಭವೇ ಆಯಿತೆಂದು ಸಿ.ಕೆ.ಪಿ. ಹೆಮ್ಮೆಯಿಂದ ಸ್ಮರಿಸುತ್ತಾರೆ.

ಹೀಗೆ ಕನ್ನಡ ಸಾಹಿತ್ಯವನ್ನು ಹಾಗೂ ಯುವ ಸಾಹಿತಿಗಳನ್ನು ಬೆಳೆಸುತ್ತಾ ಸಿ.ಕೆ.ಪಿ. ಅವರು ಬೆಳೆದಿದ್ದಾರೆ. ಅವರು ಆಧುನಿಕ ಕನ್ನಡ ಸಾಹಿತ್ಯದ ಬಹುತೇಕ ಪ್ರಕಾರಗಳಲ್ಲಿ ಕೃಷಿ ಮಾಡಿದ್ದಾರೆ. ವೃತ್ತಿಯಲ್ಲಿ ಶಿಕ್ಷಕರಾಗಿ ವಾರ್ತಾ ಪ್ರಸಾರ ಇಲಾಖೆಯಲ್ಲಿದ್ದರೂ ಸಹ ಪ್ರವೃತ್ತಿಯಲ್ಲಿ ಸಾಹಿತಿಗಳಾಗಿ ಆಧುನಿಕ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ತಮ್ಮದೇ ಆದ ಅಳಿಲು ಸೇವೆ ಸಲ್ಲಿಸಿದ್ದಾರೆ. ಇಂದಿಗೂ ಎಂಬತ್ತರ ಇಳಿ ವಯಸ್ಸಿನಲ್ಲಿಯೂ ಬರವಣಿಗೆಯಲ್ಲಿ ತಮ್ಮನ್ನು ತಾವು ಸಕ್ರಿಯವಾಗಿ ತೊಡಗಿಸಿಕೊಂಡಿರುವರು. ಆದರೂ ಅವರ ಸಾಹಿತ್ಯಕ್ಕೆ ಪ್ರಶಸ್ತಿ ಪುರಸ್ಕಾರಗಳು ಮತ್ತು ಅವರ ಸಾಹಿತ್ಯ ಕುರಿತು ಅಧ್ಯಯನ ನಡೆಯದೆ ಇರುವುದು ಸೋಜಿಗವೆನಿಸಿದೆ.

ಕೊನೆ ಟಿಪ್ಪಣಿಗಳು

೧. ಹಳ್ಳಿಕೇರಿ ಎಫ್.ಟಿ.(ಡಾ) (ಸಂ), ಹಾಲುಮತ ವ್ಯಾಸಂಗ ೩. ಪು.೨೮೧

೨. ಅದೇ ಪು. ೨೮೨

೩. ಅದೇ ಪು. ೨೮೨

೪. ಅದೇ ಪು. ೨೮೪

೫. ಅದೇ ಪು. ೨೮೫

ಅಧ್ಯಾಯ : ಐದು

ಸಮಾರೋಪ

ಅಧ್ಯಾಯ – ಐದು

ಸಮಾರೋಪ

ಚಿಂತನಾಶೀಲತೆ, ಸೃಜನಶೀಲತೆಯ ಸಹಯೋಗದ ವ್ಯಕ್ತಿತ್ವವನ್ನು ಹೊಂದಿರುವ ಸಿ.ಕೆ. ಪರಶುರಾಮಯ್ಯನವರು ತಮ್ಮ ಪ್ರಬುದ್ಧ ಪ್ರತಿಭಾ ಸಾಮರ್ಥ್ಯದಿಂದ ಕನ್ನಡ ಸಾಹಿತ್ಯ ಲೋಕಕ್ಕೆ ವಿಶಿಷ್ಟಪೂರ್ಣವಾದ ಕೃತಿಗಳನ್ನು ನೀಡಿದ್ದಾರೆ. ಒಬ್ಬ ಕವಿಯಾಗಿ, ಗದ್ಯ ಸಾಹಿತ್ಯಕರಾಗಿ, ಸಂಪಾದಕರಾಗಿ, ಸಾಹಿತ್ಯದ ಏಳಿಗೆಗಾಗಿ, ಉದ್ಧಾರಕ್ಕಾಗಿ, ಬೆಳವಣಿಗೆಗಾಗಿ ಮಾಡಿದ ಕಾರ್ಯಗಳು ಚಿರಸ್ಮರಣೀಯವಾಗಿದೆ. ತಮ್ಮ ಜೀವನದಲ್ಲಿ ಎಂದೂ ಪ್ರಚಾರ, ಪ್ರಸಿದ್ಧಿಗಳನ್ನು ಬಯಸದೇ ಎಲೆಮರೆಕಾಯಿಯಂತೆ ಜೀವಿಸುತ್ತಿರುವ ಪ್ರತಿಭೆ ಇವರಾಗಿದ್ದಾರೆ. ಸಿ.ಕೆ.ಪಿ. ಅವರ ಸುತ್ತಮುತ್ತಲಿನ ಪರಿಸರವು ಮತ್ತು ಅವರ ಗುರುವೃಂದದ ಪ್ರೇರಣೆಯಿಂದ ಸಾಹಿತ್ಯಾಸಕ್ತಿ ಬೆಳೆಸಿಕೊಂಡು ಕನ್ನಡ ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿಯಲ್ಲಿ ಜನಿಸಿದ ಇವರು ಉನ್ನತ ವ್ಯಾಸಂಗಕ್ಕಾಗಿ ಮೈಸೂರಿಗೆ ಬಂದರು. ಮೈಸೂರು ವಿಶ್ವವಿದ್ಯಾಲಯದಲ್ಲಿದ್ದ ಪ್ರಬುದ್ಧ ವಿದ್ವಾಂಸರಿಂದ ಸಾಹಿತ್ಯಾಸಕ್ತಿ ಬೆಳೆಸಿಕೊಂಡರು. ಅಲ್ಲಿನ ಗುರುಗಳು ಸುಸಂಸ್ಕೃತ, ಆಚಾರ–ವಿಚಾರಗಳು ಇವರ ವ್ಯಕ್ತಿತ್ವಕ್ಕೆ ಬದ್ಧತೆಯನ್ನು ನೀಡುವುದರ ಜೊತೆಗೆ ಯುವ ವಯಸ್ಸಿನಲ್ಲಿಯೇ ಬದುಕಿನ ಪರಿಪೂರ್ಣತೆಯ ಅಂಶಗಳನ್ನು ಅಳವಡಿಸಿಕೊಳ್ಳಲು ಸಹಕಾರಿಯಾದವು.

ವಾರ್ತಾ ಮತ್ತು ಪ್ರಚಾರ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರೂ ಸಹ ಕನ್ನಡ ಸಾಹಿತ್ಯಕ್ಕೆ ನೀಡಿದ ಕೊಡುಗೆ ಅಪಾರವಾದದ್ದು. ಇವರು ಯಾವುದೇ ಅಥವಾ ಯಾರದೋ ಒತ್ತಾಯಕ್ಕಾಗಿ ಅಥವಾ ಯಾವುದೇ ಪೂರ್ವಾಗ್ರಹ ಪೀಡಿತ ಭಾವನೆಯಿಂದ ಸಾಹಿತ್ಯ ರಚನೆಮಾಡಲು ಹೊರಟವರಲ್ಲ. ತಮ್ಮ ಸುತ್ತಮುತ್ತಲೂ ಹಬ್ಬಿರುವ ಸಾಮಾಜಿಕ ಅಸಮಾನತೆಯನ್ನು ಕಂಡು ಅದನ್ನು ನಿವಾರಿಸಲು ಉತ್ತರ ಹುಡುಕಲು ಪ್ರಯತ್ನಿಸಿದವರು. ಇದಕ್ಕೆ ಪ್ರತಿಯಾಗಿ ಅವರ ಲೇಖನಿಯಿಂದ ಕವನಗಳು ರಚನೆಯಾದವು. ಇದೊಂದು ಸಾಂಸ್ಕೃತಿಕ ಆಂದೋಲನಕ್ಕೆ ಪೀಠಿಕೆ

ಹಾಕಿಕೊಟ್ಟಂತಾಯ್ತು. ಕಾವ್ಯ ಸಾಹಿತ್ಯಕ್ಕೆ ತನ್ನದೇ ಆದ ವಿಶಿಷ್ಟ ಹೆಜ್ಜೆಯನ್ನು ಮೂಡಿಸಿದ್ದಾರೆ. ಸಂಪಾದನೆ ಗ್ರಂಥಗಳ ಕಾರ್ಯ ಮೆಚ್ಚುವಂತಹದ್ದು. ಸ್ವತಃ ಕುರುಬ ಜನಾಂಗದಲ್ಲಿ ಜನಿಸಿದ ಇವರು ಕುರುಬ ಪರಂಪರೆಯನ್ನು ಎತ್ತಿ ತೋರಿಸುವ ಕೃತಿ 'ತಗರ ಪವಾಡ'ವನ್ನು ತಮ್ಮ ಶ್ರಮದ ಫಲವಾಗಿ ಹೊರಬಂದಿದೆ. ವಚನ ಸಾಹಿತ್ಯದ ಬಗ್ಗೆ ಅಪಾರ ಗೌರವ ಇಟ್ಟುಕೊಂಡಿದ್ದ ಇವರು ಬಸವಣ್ಣನವರ ಪತ್ನಿ ನೀಲಲೋಚನೆಯ ವಚನಗಳನ್ನು ಸಂಗ್ರಹಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಸಿ.ಕೆ.ಪಿ. ಅವರ ಗದ್ಯ ಸಾಹಿತ್ಯಕ್ಕೆ ಗ್ರಾಮೀಣ ಬದುಕೇ ತಳಹದಿಯಾಗಿದೆ. ಜೊತೆಗೆ ಆಧ್ಯಾತ್ಮಿಕತೆ, ಶೌರ್ಯ, ಸಾಹಸಗಳನ್ನು ಚಿತ್ರಿಸುವ ಗದ್ಯ ಸಾಹಿತ್ಯ ರಚಿಸಿದ್ದಾರೆ. ಕರ್ನಾಟಕ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮನವರಿಕೆ ಮಾಡಿಕೊಡುವ ಅಭಿವೃದ್ಧಿ ಸಾಹಿತ್ಯ ರಚಿಸಿದ್ದಾರೆ.

ಸಿ.ಕೆ.ಪಿ. ಅವರ ಪ್ರಕಟವಾದ ಸಾಹಿತ್ಯ ಅಲ್ಪವಾದರೂ ಸತ್ವ ಭರಿತವಾಗಿವೆ. ಆಡುಭಾಷೆಗೆ ಹತ್ತಿರವಾದ ಪದ ಪ್ರಯೋಗಗಳಿಂದ ಗ್ರಾಮೀಣ ಪರಿಸರದ ಸುಂದರ ಚಿತ್ರಣ, ನಾಡು-ನುಡಿ ಅಭಿಮಾನ, ರಾಜಕೀಯ ಪ್ರಜ್ಞೆ, ಭಕ್ತಿ ನಿರೂಪಣೆ, ವ್ಯಂಗ್ಯ, ವಿಡಂಬನೆ, ಕರ್ನಾಟಕ ಕಲೆ, ಸಂಸ್ಕೃತಿ, ಧರ್ಮ-ಜಾತಿ, ವ್ಯಕ್ತಿ ಚಿತ್ರಣ, ಇತಿಹಾಸಗಳೆಲ್ಲವೂ ಅವರ ಸಾಹಿತ್ಯದಲ್ಲಿ ಹೊರಹೊಮ್ಮಿದೆ ಈಗ ಸದ್ದುಗದ್ದಲವಿಲ್ಲದೆ ಎಲೆಮರಿಕಾಯಿಯಂತೆ ಜೀವಿಸುವ ಸಿ.ಕೆ.ಪಿ. ಅವರು ಕನ್ನಡ ಸಾಹಿತ್ಯದಲ್ಲಿ ಸೃಜನಶೀಲ ಲೇಖಕರಾಗಿದ್ದಾರೆ. ಸರಳತೆಯು ಇವರ ಸಾಹಿತ್ಯದ ಪ್ರಮುಖ ವೈಶಿಷ್ಟ್ಯ ಸರಳ ಶೈಲಿಯಲ್ಲಿ ಮಾರ್ಮಿಕವಾಗಿ ವಿಷಯವನ್ನು ಪ್ರತಿಪಾಧಿಸಬಲ್ಲ, ಕನ್ನಡ ಭಾಷೆಯನ್ನು ತಮ್ಮ ಅಭಿವ್ಯಕ್ತಿ ಸಶಕ್ತ ಮಾಧ್ಯಮವಾಗಿ ಬಳಸಿಕೊಂಡ ಸಾಹಿತಿ, ಸಮಾಜಮುಖ ಧೋರಣೆಗಳನ್ನು ತಮ್ಮ ಸಾಹಿತ್ಯದಲ್ಲಿ ಅಧಿಕವಾಗಿ ಬೆಳೆಸಿಕೊಂಡವರು ಇವರಾಗಿದ್ದಾರೆ.

ಪ್ರಸ್ತುತ ನಿಬಂಧದ ಕೇಂದ್ರ ಬಿಂದುವಾದ ಸಿ.ಕೆ.ಪಿ. ಅವರು ಕನ್ನಡ ಸಾಹಿತ್ಯ ಕಂಡ ಸೃಜನಶೀಲ ಸಾಹಿತಿಗಳಾಗಿ ನಮ್ಮ ಗಮನ ಸೆಳೆಯುತ್ತಾರೆ. ಈ ನಿಬಂಧದಲ್ಲಿ ಅವರ ವೃತ್ತಿಯ ಪರಿಸರ, ಅವರ ಸಾಹಿತ್ಯ ಸೃಷ್ಟಿಗೆ ದೊರೆತಂತ ಮಾಹಿತಿಯನ್ನು ಸಂಗ್ರಹಿಸಿ ಅಧ್ಯಯನ ಮಾಡಲಾಗಿದೆ. ಇವರ ಸಾಹಿತ್ಯ ಬದುಕಿನ ಮೇಲೆ ಬೆಳಕು ಚೆಲ್ಲುವ ದೃಷ್ಟಿಯಿಂದ ಇವರನ್ನು ಸಂದರ್ಶಿಸಿ ಮಾಹಿತಿ ಸಂಗ್ರಹಿಸಲಾಗಿದೆ. ಈ ಅಧ್ಯಯನದಲ್ಲಿ ಅವರ ವ್ಯಕ್ತಿತ್ವದೊಂದಿಗೆ ಸಾಹಿತ್ಯದ ಪರಿಚಯ ಮಾಡಿಕೊಡಲಾಗಿದೆ. ಅವರದು ಸರಳ ಜೀವನ, ಉದಾತ್ತ ಚಿಂತನೆ, ಅವರು ಯಾವುದೇ ಗುಂಪುಗಾರಿಕೆಗೆ ಜೋತುಬೀಳದೆ ಎಲ್ಲಿಯೇ ಒಳ್ಳೆಯದನ್ನು ಕಂಡರೂ ಅದನ್ನು ಮೆಚ್ಚುವ ಪರಿಶುದ್ಧ ಮನೋಭಾವದವರು.

ಪ್ರಸ್ತುತ ನಿಬಂಧದಲ್ಲಿ ಆಕಾರ ಸಾಮಗ್ರಿ, ಆಧಾರಗಳೊಂದಿಗೆ ಸಿ.ಕೆ.ಪಿ. ಅವರ ಸಮಗ್ರ ಸಾಹಿತ್ಯದ ಮೇಲೆ ಬೆಳಕು ಚೆಲ್ಲುವ ಪ್ರಯತ್ನ ಮಾಡಲಾಗಿದೆ. ಸಂಶೋಧನೆ ಎಂಬುದು ನಿರಂತರ ಪ್ರಕ್ರಿಯೆ. ಕೊನೆ ಎಂಬುದಿಲ್ಲ. ಇಲ್ಲಿ ಸಿ.ಕೆ.ಪಿ.ರವರ ಜೀವನ ಮತ್ತು ಸಂಶೋಧನಾರ್ಥಿಗಳಿಗೆ ಕಿರು ಸಹಾಯ ಮಾಡಬೇಕೆಂಬುದೇ ನನ್ನ ಈ ಅಧ್ಯಯನದ ಉದ್ದೇಶ. ಅವರ ಸಾಹಿತ್ಯ ಸೇವೆಯನ್ನು ಬಹಳ ವಿಸ್ತಾರವಾಗಿ ಅಲ್ಲದಿದ್ದರೂ ಸಂಕ್ಷಿಪ್ತವಾಗಿ ವಿವರಿಸಿ ಸಾಹಿತ್ಯ ಲೋಕಕ್ಕೆ ಪರಿಚಯಿಸುವ ನನ್ನದೊಂದು ಕಿರು ಪ್ರಯತ್ನ ಇದಾಗಿದೆ.

ಅನುಬಂಧಗಳು

೧. ಸಂದರ್ಶನ
೨. ಪರಾಮರ್ಶನ ಗ್ರಂಥಗಳು
೩. ಛಾಯಾಚಿತ್ರಗಳು

ಅನುಬಂಧಗಳು

೧. ಸಂದರ್ಶನ

ಈ ನಿಬಂಧ ಮಂಡನೆಗೆ ಸಿ.ಕೆ. ಪರಶುರಾಮಯ್ಯನವರ ಸಮಗ್ರ ವಿಷಯವನ್ನು ಆಯ್ಕೆ ಮಾಡಿಕೊಂಡ ವೇಳೆ ಅವರೊಂದಿಗೆ ನೇರ ಸಂದರ್ಶನಮಾಡಿ ಅವರ ಸಾಹಿತ್ಯ ಕೃಷಿಯ ಬಗ್ಗೆ ಚರ್ಚಿಸಲಾಯಿತು. ಸಂದರ್ಶನದಲ್ಲಿ ಸಿ.ಕೆ.ಪಿ. ಅವರು ನೀಡಿದ ಸಮರ್ಪಕ ಉತ್ತರಗಳು ಈ ಕೆಳಗಿನಂತಿವೆ.

ಪ್ರಶ್ನೆ ೧ : ಪ್ರೌಢಶಾಲಾ ಶಿಕ್ಷಕರಾಗಿದ್ದ ನಿಮಗೆ ಸಾಹಿತ್ಯದತ್ತ ಆಸಕ್ತಿ ಬೆಳೆಯಲು ಪ್ರೇರಣೆಗಳಾದ ಅಂಶಗಳು ಯಾವವು?

ಉತ್ತರ : ನಾನು ಎಂ.ಎ. ಪದವಿಯನ್ನು ಪಡೆಯುವಾಗ ಮೈಸೂರು ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದ ಡಿ.ಎಲ್.ಎನ್., ತೀ.ನಂ.ಶ್ರೀ., ಕುವೆಂಪು, ಸಿ.ಡಿ. ನರಸಿಂಹಯ್ಯ, ಪ್ರೊ. ವೆಂಕಟರಾಮಪ್ಪ, ಪ್ರೊ. ಎಂ.ವಿ. ಪರಮೇಶ್ವರ ಭಟ್ಟರು ಇಂತಹ ಘಟಾನುಘಟಿ ವಿದ್ವಾಂಸರು ನಮಗೆ ಉಪನ್ಯಾಸ ಮಾಡುವುದರ ಜೊತೆಗೆ ಕನ್ನಡ ಸಾಹಿತ್ಯಾಭಿರುಚಿ ಬೆಳೆಸಿಕೊಳ್ಳಲು ಕಾರಣರಾದರು. ನಾನು ಪುಸ್ತಕಗಳನ್ನು ಬರೆದಾಗ ಬೆನ್ನುತಟ್ಟಿ ಪ್ರೋತ್ಸಾಹಿಸಿದರು. ನಾನು ಸತತವಾಗಿ ಕುವೆಂಪು, ಬೇಂದ್ರ, ಮಧುರಚೆನ್ನ ಮುಂತಾದವರ ಸಾಹಿತ್ಯವನ್ನು ಅಭ್ಯಾಸ ಮಾಡಿದ್ದು ನನಗೆ ಸಾಹಿತ್ಯ ಬರೆಯಲು ಪ್ರೇರಣೆಯಾದವು.

ಪ್ರಶ್ನೆ ೨ : ಶಿಕ್ಷಣ ರಂಗದಲ್ಲಿ ಯಾವುದಕ್ಕೆ ಪ್ರಾಧಾನ್ಯತೆ ನೀಡಬೇಕು ಎಂಬುದು ನಿಮ್ಮ ನಿಲುವು?

ಉತ್ತರ : ಶಿಕ್ಷಣವು ಮಗುವಿನ ಸರ್ವತೋಮುಖ ಬೆಳವಣಿಗೆಯನ್ನು ನೀಡುವಂತಾಗಬೇಕು. ಸೃಜನಶೀಲ ಕೌಶಲ್ಯಗಳಿಗೆ ಹೆಚ್ಚಿನ ಆಧ್ಯತೆ ನೀಡಬೇಕು.

ಪ್ರಶ್ನೆ ೩ : ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರಕಿರುವ ಕುರಿತು ನಿಮ್ಮ ಅಭಿಪ್ರಾಯವೇನು?

ಉತ್ತರ : ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ದೊರಕಿದ್ದು ಸಂತೋಷದ ವಿಷಯವಾಗಿದೆ. ದ್ರಾವಿಡ ಭಾಷೆಗಳಲ್ಲಿ ಕನ್ನಡ ಎರಡನೆಯ ಪ್ರಾಚೀನ ಭಾಷೆಯಾಗಿದ್ದು ಅದಕ್ಕೆ ಸಲ್ಲಬೇಕಾದ ಸೂಕ್ತ ಸ್ಥಾನಮಾನ ತಡವಾಗಿಯಾದರೂ ಬಂದಿದೆ. ನಾವು ಬೇರೆ ಭಾಷೆಯನ್ನು ಗೌರವಿಸೋಣ ಆದರೆ ನಮ್ಮ ಭಾಷೆಯನ್ನು ಪ್ರೀತಿಸೋಣ. ನಾವೆಲ್ಲರೂ ಸೋದರರಂತೆ ಭಾರತೀಯ ಹೆಮ್ಮೆಯ ಮಕ್ಕಳೆಂಬ ಅಭಿಮಾನ ನಮ್ಮಲ್ಲಿ ಇರಬೇಕು. ನಮ್ಮ ಭಾಷೆಯಲ್ಲಿನ ತಿರುಳು ಸಂಸ್ಕೃತಿ ಜೀವನಕ್ಕೆ ಮಾರ್ಗದರ್ಶನವಾಗಲಿ.

ಪ್ರಶ್ನೆ ೪ : ಕನ್ನಡ ನಾಡು-ನುಡಿಗಾಗಿ ಹೋರಾಡುವ ಕನ್ನಡ ಸಂಘಟನೆಗಳ ಕುರಿತು ನಿಮ್ಮ ಅಭಿಪ್ರಾಯಗಳೇನು?

ಉತ್ತರ : ಕನ್ನಡ ನಾಡು-ನುಡಿಗಾಗಿ ಹೋರಾಡುವ ಕನ್ನಡ ಸಂಘಟನೆಗಳು ಅವಶ್ಯಕ. ಕರ್ನಾಟಕ ರಾಜ್ಯವು ಅನೇಕ ಗಡಿ ಸಮಸ್ಯೆಗಳನ್ನು ಎದುರಿಸುತ್ತಿದೆ. ಪಕ್ಕದ ರಾಜ್ಯಗಳು ಕರ್ನಾಟಕ್ಕೆ ಸಂಬಂಧಿಸಿದ ಅನೇಕ ಪ್ರದೇಶಗಳನ್ನು ವಶಪಡಿಸಿಕೊಳ್ಳಲು ಸಂಚು ನಡೆಸುತ್ತಿವೆ. ಈ ನಿಟ್ಟಿನಲ್ಲಿ ಕಾರ್ಯನಿರ್ವಹಿಸಲು ಕನ್ನಡ ಪರ ಸಂಘಟನೆಗಳು ನಮಗೆ ಬೇಕೇ ಬೇಕು. ನೆಲ, ಜಲ ನಮ್ಮದಾಗಿದ್ದು, ಜನ ಹಿತಕ್ಕೆ ಕಟ್ಟಿದ ಜಲಾಶಯದ ಹೆಚ್ಚಿನ ಭಾಗ ನಮ್ಮದು ಎನ್ನುವ ತಮಿಳು, ತೆಲುಗರ ಆಕ್ರಮಣ ಎದುರಿಸಲು ಹಾಗೂ ಕರ್ನಾಟಕ ರಾಜಧಾನಿ ಬೆಂಗಳೂರು, ಹುಬ್ಬಳ್ಳಿ, ಬೆಳಗಾವಿಗಳಲ್ಲಿ ಮರಾಠಿ, ತೆಲುಗು, ತಮಿಳು, ಮಲಯಾಳಿಗಳು ನಮ್ಮ ಭಾಷೆಯ ಮೇಲೆ ಪ್ರಭುತ್ವ ಸಾಧಿಸಲು ಯತ್ನಿಸುತ್ತಿದ್ದಾರೆ. ಅವುಗಳನ್ನು ಹತ್ತಿಕ್ಕಲು ಕನ್ನಡ ಪರ ಸಂಘಟನೆಗಳ ಅವಶ್ಯಕತೆ ಇದೆ.

ಪ್ರಶ್ನೆ ೫ : ಕನ್ನಡ ಸಾಹಿತ್ಯ ಪರಿಷತ್ತಿನ ಬಗ್ಗೆ ನಿಮ್ಮ ಅನಿಸಿಕೆಗಳೇನು?

ಉತ್ತರ : ಕನ್ನಡ ಸಾಹಿತ್ಯ ಪರಿಷತ್ತು ಇವರುವುದೇ ಕನ್ನಡವನ್ನು ಉಳಿಸಿ-ಬೆಳೆಸಲು. ಅಲ್ಲಿ ಅವರವರ ಮಟ್ಟದಲ್ಲಿ ಕನ್ನಡಮ್ಮನ ಸೇವೆಗೆ ಬರುವವರನ್ನು ಎತ್ತಿ ಹಿಡಿಯುವುದು ಮುಖ್ಯ. ಆದರೆ ಬೆಳೆದವರನ್ನೆ ಬೆಳೆಸಿ ಪ್ರೊತ್ಸಾಹಿಸುತ್ತಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಮೂಲಕ ಯುವಕರಿಗೆ ಇನ್ನೂ ಹೆಚ್ಚು ಹೆಚ್ಚು ಅವಕಾಶ ನೀಡಬೇಕು. ಯುವಕರ ಸಾಹಿತ್ಯಾಸಕ್ತಿ ಹೆಚ್ಚಿದಾಗ ಮಾತ್ರ ಕನ್ನಡ ಭಾಷೆ ಹೆಚ್ಚಿನದಾಗಿ ಬೆಳೆಯಲು ಸಾಧ್ಯ. ಆದರೆ ಇತ್ತೀಚೆಗೆ ಕನ್ನಡ ಸಾಹಿತ್ಯ ಪರಿಷತ್ತು ಸ್ವಾರ್ಥಿಗಳ ಸ್ವತ್ತಾಗಿದೆ.

ಪ್ರಶ್ನೆ ೬ : ಪ್ರಾಚೀನ ಸಾಹಿತ್ಯದಲ್ಲಿ ನಿಮಗೆ ಇಷ್ಟವಾದ ಸಾಹಿತ್ಯ ಮತ್ತು ಸಾಹಿತಿಗಳಾರು?

ಉತ್ತರ : ಪ್ರಾಚೀನ ಕಾಲದ ಪ್ರತಿಯೊಂದು ಸಾಹಿತ್ಯವು ಮನಮೋಹಕವಾಗಿದೆ. ಪಂಪ ನನ್ನ ನೆಚ್ಚಿನ ಕವಿಗಳು ರಾಘವಾಂಕ, ಕುಮಾರವ್ಯಾಸ ಸಾಹಿತ್ಯವೂ ಇಷ್ಟ. ಮಧ್ಯಕಾಲೀನ ಯುಗದ ಶರಣರ ಸಾಹಿತ್ಯವೂ ತುಂಬಾ ಅಭೂತಪೂರ್ವವಾದದ್ದು. ಬಸವಣ್ಣನವರು ವಚನ ಸಾಹಿತ್ಯಕ್ಕೆ ನೀಡಿದ ಕೊಡುಗೆ ಅಪಾರ. ಇಂದು ಅಂಥ ದೇವಮಾನವ ಹುಟ್ಟಿ ಬರಬೇಕಾಗಿದೆ.

ಪ್ರಶ್ನೆ ೭ : ಆಧುನಿಕ ಸಾಹಿತ್ಯದಲ್ಲಿ ನಿಮಗೆ ಪ್ರೇರಣೆಯಾದ ಕವಿಗಳಾರು?

ಉತ್ತರ : ಆಧುನಿಕ ಸಾಹಿತ್ಯದಲ್ಲಿ ಕುವೆಂಪು, ಕಾರಂತರು, ಬೇಂದ್ರೆ ನನ್ನ ನೆಚ್ಚಿನ ಸಾಹಿತಿಗಳು.

ಪ್ರಶ್ನೆ ೮ : ಕನ್ನಡ ಸಾಹಿತ್ಯ ಸಮ್ಮೇಳನಗಳ ಕುರಿತು ನಿಮ್ಮ ಅನಿಸಿಕೆಗಳೇನು?

ಉತ್ತರ : ಕನ್ನಡ ಸಾಹಿತ್ಯ ಸಮ್ಮೇಳನಗಳು ಜಿಲ್ಲಾ, ತಾಲೂಕು ಹೋಬಳಿ ಮಟ್ಟದಲ್ಲಿ ನಡೆಯುವುದರಿಂದ ಸಾಹಿತ್ಯ ಬೆಳೆಯಲು ಅನುಕೂಲವಾಗಿದೆ. ಸಾಹಿತ್ಯ ಪರಿಕಲ್ಪನೆ ನಗರಕ್ಕೆ ಮಾತ್ರವಲ್ಲ, ನಾಡಿನ ವಿವಿದೆಡೆ ಸಾರ್ವತ್ರಿಕವಾಗಿ ಬೆಳೆಯಲು ಇಂತಹ ಕನ್ನಡ ಸಾಹಿತ್ಯ ಸಮ್ಮೇಳನಗಳು ಅವಶ್ಯಕವಾಗಿದೆ.

ಪ್ರಶ್ನೆ ೯ : ಕನ್ನಡ ಸಾಹಿತ್ಯ ಮತ್ತು ಕುರುಬ ಜನಾಂಗಕ್ಕೆ ನೀವು ಅನೇಕ ಬಗೆಗಳಲ್ಲಿ ದುಡಿದಿದ್ದೀರಿ ಆದರೂ ಸಹ ನಿಮಗೆ ಯಾವ ಪ್ರಶಸ್ತಿಗಳು ದೊರೆತಿಲ್ಲ. ನಿಮ್ಮ ಬಗ್ಗೆ ಯಾವ ಸಂಶೋಧನೆಗಳು ನಡೆದಿಲ್ಲ. ಇದರ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರ : ನಾನು ಎಲೆಮರೆಯಕಾಯಿ ಇದ್ದಂತೆ, ಪ್ರಶಸ್ತಿಗಳು ದೊರೆತಿಲ್ಲ ಎಂದು ನನಗೇನು ಬೇಜಾರಿಲ್ಲ. ಇಂಥ ಪ್ರಶಸ್ತಿ ಬಿರುದುಗಳಿಗೆ ನಾನು ಆಸೆಪಡುವಂತಹ ವ್ಯಕ್ತಿಯಲ್ಲ. ನಾನು ನನ್ನ ಭಾಷೆಗೆ, ನನ್ನ ಜನಾಂಗಕ್ಕೆ ಸಲ್ಲಿಸಿದ ಸೇವೆ ನನಗೆ ತೃಪ್ತಿದಾಯಕವಾಗಿದೆ. ಅಷ್ಟೇ ಸಾಕು ನನಗೆ.

೨. ಪರಾಮರ್ಶನ ಗ್ರಂಥಗಳು

ಸಿ.ಕೆ. ಪರಶುರಾಮಯ್ಯ ಅವರ ಗ್ರಂಥಗಳು

೧. ಪರಶುರಾಮಯ್ಯ ಸಿ.ಕೆ., ದಲಿತ ಧಮನಿ, ಸಂವಹನ ಈವ್ನೆಂಗ್ ಬಜಾರ್ ಹಿಂಭಾಗ ಶಿವರಾಂಪೇಟೆ, ಮೈಸೂರು, ೨೦೦೫

೨. ಪರಶುರಾಮಯ್ಯ ಸಿ.ಕೆ., ನನ್ನ ವಚನಗಳು, ರಾಗಿಣಿ ಶಿಕ್ಷಣ ಪ್ರತಿಷ್ಠಾನ, ವಿಜಯನಗರ, ೨ನೆಯ ಹಂತ, ಬೆಂಗಳೂರು, ೨೦೦೪

೩. ಪರಶುರಾಮಯ್ಯ ಸಿ.ಕೆ. (ಸಂ), ನೀಲಲೋಚನೆಯ ವಚನಗಳು, ಸರಸ ಸಾಹಿತ್ಯ ಪ್ರಕಾಶನ, ಮೈಸೂರು, ೧೯೬೬

೪. ಪರಶುರಾಮಯ್ಯ ಸಿ.ಕೆ., ಚೌಡಿಕೆಯವರು, ಪರಶುಪ್ರಕಶಾನ, ಬಿ.ಹೆಚ್. ರಸ್ತೆ, ಚಿಕ್ಕನಾಯಕನಹಳ್ಳಿ, ೨೦೦೭

೫. ಪರಶುರಾಮಯ್ಯ ಸಿ.ಕೆ., ಪ್ರಾಚೀನ ಆದರ್ಶ ಬಾಲಕರು, ಪರಂಜ್ಯೋತಿ ಪ್ರಕಾಶನ, ಬೆಂಗಳೂರು, ೧೯೭೯

೬. ಪರಶುರಾಮಯ್ಯ ಸಿ.ಕೆ., ಗಾದೆಗಳ ಅಂತರಂಗ, ಅಭಿಮುಖ ಪ್ರಕಾಶನ, ಬೆಂಗಳೂರು, ೨೦೧೪

೭. ಪರಶುರಾಮಯ್ಯ ಸಿ.ಕೆ., ಗೊ.ರು. ಚನ್ನಬಸಪ್ಪ, ನಂಜಪ್ಪ, ಎಂ.ಬಿ. ಕರ್ನಾಟಕ ಪ್ರಗತಿ ಪಂಥ, ಸಾಹಿತ್ಯ ಮತ್ತು ಸಂಸ್ಕೃತಿ, ಅಭಿವೃದ್ಧಿ ಇಲಾಖೆ ಕರ್ನಾಟಕ ಸರ್ಕಾರ, ಬೆಂಗಳೂರು, ೧೯೭೪

೮. ಪರಶುರಾಮಯ್ಯ ಸಿ.ಕೆ. ಮತ್ತು ಪಾಟೀಲ ಎಂ.ಎಂ., ತಾಯಂದಿರಿಗೆ ತಿಳಿದಿರಲಿ, ಪರಂಜ್ಯೋತಿ ಪ್ರಕಾಶನ, ಬೆಂಗಳೂರು, ೧೯೯೩

೯. ಪರಶುರಾಮಯ್ಯ ಸಿ.ಕೆ., ಕರುಳ ಬಳ್ಳಿ, ನವಭಾರತ ಪಬ್ಲಿಕೇಶನ್, ಬೆಂಗಳೂರು, ೨೦೧೨

೧೦. ಕಲಬುರ್ಗಿ ಎಂ.ಎಂ. (ಡಾ), ಪರಶುರಾಮಯ್ಯ ಸಿ.ಕೆ., ಹಳ್ಳಿಕೇರಿ ಎಫ್.ಟಿ. (ಡಾ) (ಸಂ), ತಗರ ಪವಾಡ, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೪

ಪರಾಮರ್ಶನ ಗ್ರಂಥಗಳು

೧. ಅಮೃತ ಸೋಮೇಶ್ವರ, ಪೊಸ ಗಾದೆಲು, ಕೋಟಿಕಾರು ಪ್ರಕಾಶನ, ದಕ್ಷಿಣ ಕನ್ನಡ, ೧೯೮೮

೨. ಅರ್ತಿಕಜೆ ವಿ.ಬಿ., ಸಾವಿರ ಗಾದೆಗಳು, ಜ್ಞಾನಗಂಗ, ಪುತ್ತೂರು, ೨೦೧೨

೩. ಕರಿಯಪ್ಪ ಎಂ. (ಸಂ), ಹಾಲತೊರೆ, ನಗರ ಕುರುಬರ ಸಂಘ, (ರಿ), ದಾವಣಗೆರೆ, ೨೦೦೩

೪. ಬ.ಪ. ನಾಯ್ಕರ, ಹಾಲುಮತಸ್ಥರು, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೩

೫. ಭೂಸರಡ್ಡಿ ಎಸ್.ಎಸ್. (ಪ್ರೊ) (ಸಂ), ನೀಲಲೋಚನೆಯ ವಚನಗಳಲ್ಲಿ ಬಸವಣ್ಣ, ಶ್ರೀಜಗದ್ಗುರು ಗಂಗಾಧರ ಧರ್ಮ ಪ್ರಚಾರ ಮಂಡಳಿ, ಮೂರು ಸಾವಿರಮಠ, ಹುಬ್ಬಳ್ಳಿ, ೧೯೮೬

೬. ಮುದೇನೂರು ಸಂಗಣ್ಣ, ಗೊಂದಲಿಗರ ದೇವೇಂದ್ರಪ್ಪನವರ ಆಟಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೩

೭. ರಾಜಪ್ಪ ದಳವಾಯಿ, (ಸಂ), ಕನ್ನಡ ಸಾಹಿತ್ಯ ಕೋಶ, ದಳವಾಯಿ ಪ್ರಕಾಶನ, ಬೆಂಗಳೂರು, ೨೦೧೦

೮. ವೀರಣ್ಣ ದಂಡೆ (ಡಾ) (ಸಂ), ಜನಪದ ಹಾಲುಮತ ಮಹಾಕಾವ್ಯ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೦

೯. ವೀರಣ್ಣ ರಾಜೂರ (ಡಾ) (ಸಂ), ಶಿವಶರಣೆಯರ ವಚನಗಳು, ಕರ್ನಾಟಕ ಸರ್ಕಾರ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೩

೧೦. ಶ್ರೀ ಕಲ್ಲೆ ಎನ್., ಶಿವೋತ್ತಮರ್ (ಸಂ), ಗುರುವಂದನ, ಶ್ರೀ ಚನ್ನಯ್ಯ ಒಡೆಯರ್ ಅಭಿನಂದನಾ ಸಮಿತಿ, ದಾವಣಗೆರೆ, ೨೦೦೭

೧೧. ಹಳ್ಳಿಕೇರಿ ಎಫ್.ಟಿ. (ಡಾ) (ಸಂ), ಹಾಲುಮತ ವ್ಯಾಸಂಗ, ಸಂಪುಟಗಳು, ೧ರಿಂದ ೬, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೨. ಹಳ್ಳಿಕೇರಿ ಎಫ್.ಟಿ. (ಡಾ) (ಸಂ), ಹಸ್ತಪ್ರತಿ ಅಧ್ಯಯನ, ಸಂಪುಟಳ, ಸಂಚಿಕೆ-೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೩. ಹಿರೇಮಠ ಆರ್.ಸಿ. (ಡಾ) (ಸಂ), ನೀಲಮ್ಮನ ವಚನಗಳು ಮತ್ತು ಲಿಂಗಮ್ಮನ ವಚನಗಳು, ಕನ್ನಡ ಅಧ್ಯಯನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೧

೩. ಛಾಯಾಚಿತ್ರಗಳು



ಸಿ. ಕೆ. ಪರಶುರಾಮಯ್ಯ ಅವರನ್ನು ಸಂದರ್ಶನ ಮಾಡುತ್ತಿರುವ ಸಂಶೋಧಕರು



ಸಿ. ಕೆ. ಪರಶುರಾಮಯ್ಯ ಅವರನ್ನು ಸಂದರ್ಶನ ಮಾಡುತ್ತಿರುವ ಸಂಶೋಧಕರು

ಹಸ್ತಪ್ರತಿಶಾಸ್ತ್ರ ವಿಭಾಗ